SAPTHAGIRI(KANNADA)
ILLUSTRATED MONTHLY
Volume:01,Issue:05,Pages:56
December-2021,Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2021
ಬೆಲೆ ರೂ. 5/-



## ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

(30-11-2021 ರಿಂದ 08-12-2021 ರ ವರೆಗೆ)


ತಿರುಮಲೆ ತಿರುಪತಿ ದೇವಸ್ಥಾನಗಳು
ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ
(09-12-2021)

# ಭಗವದ್ಗೀತೆ



ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ
ಭೋಗಾಃ ಸುಖಾನಿ ಚ।
ತ ಇಮೇವಸ್ಥಿತಾ ಯುದ್ಧೇ
ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ॥

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -32)

ಯಾರಿಗಾಗಿ ನಾವು ರಾಜ್ಯವನ್ನೂ, ಭೋಗಗಳನ್ನೂ, ಸುಖಗಳನ್ನು, ಬಯಸಿದೆವೋ, ಆ ಮಂದಿಯೆಲ್ಲ ಜೀವದಾಸೆಯನ್ನೂ, ಸಿರಿಯನ್ನೂ, ತೊರೆದು ಇಲ್ಲಿ ಕಾದುವುದಕ್ಕೆ ನಿಂತಿದ್ದಾರೆ.

ಕೃಷ್ಣ ನೀ ಬೇಗನೇ ಬಾರೋ
ಬೇಗನೇ ಬಾರೋ ಮುಖವನ್ನು ತೋರೋ
ಕಾಲಲಂದಿಗೆ ಗೆಜ್ಜೆ ನೀಲದ ಬಾವುಲಿ
ನೀಲವರ್ಣನೆ ನಾಟ್ಯವಾಡುತ ಬಾರೋ
ಉಡಿಯಲ್ಲಿ ಉಡಿಗೆಜ್ಜೆ ಬೆರಳಲ್ಲಿ ಉಂಗುರಾ
ಕೊರಳೊಳು ಹಾಕಿದ ವೈಜಯಂತೀ ಮಾಲೆ
ಕಾಶಿ ಪೀತಾಂಬರ ಕೈಯಲ್ಲಿ ಕೊಳಲು
ಪೂಸಿದ ಶ್ರೀಗಂಧ ಮೈಯೊಳಗಿರಲು
ತಾಯಿಗೆ ಬಾಯಲ್ಲಿ ಜಗವನ್ನು ತೋರಿದ
ಜಗದೋದ್ಧಾರಕ ನಮ್ಮ ಉಡುಪಿ ಶ್ರೀ ಕೃಷ್ಣ



(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅನನ್ಯಾಧೀನಸ್ಸನ್ ಭವತಿ ಪರತಂತ್ರಃ ಪ್ರಣಮತಾಂ ಕೃಪೇ ಸರ್ವದ್ರಷ್ಟಾನ ಗಣಯತಿ ತೇಷಾಮಪಕೃತಿಮ್ ।**

**ಪತಿಸ್ತ್ವತ್ಪಾರಾರ್ಥ್ಯಂ ಪ್ರಥಯತಿ ವೃಷಕ್ಷ್ಮಾಧರಪತಿಃ ವ್ಯವಸ್ಥಾಂ ವೈಯಾತ್ಯಾದಿತಿ ವಿಘಟಯಂತೀ ವಿಹರಸಿ ॥ ೬೩॥**

ಹಿಂದಿನ ಪದ್ಯದಲ್ಲಿ ಪ್ರಪನ್ನರು ಪ್ರಾಚೀನಕರ್ಮವಶರಾಗಿ ಬುದ್ಧಿ ಪೂರ್ವಕವಾಗಿ ಮಾಡುವ ಅಪರಾಧಗಳಿಗೆ ಅತ್ಯಲ್ಪವಾದ ದಂಡನೆಯನ್ನು ದಯಾದೇವಿಯು ಕಲ್ಪಿಸುವಳೆಂಬುದನ್ನು ಸಾಧಿಸಿದರು. ಈ ಪದ್ಯದಲ್ಲಿಯಾದರೋ ದಂಡನೆಯನ್ನು ಕಡಿಮೆಮಾಡುವುದು ಮಾತ್ರವಲ್ಲದೆ ಸರ್ವೇಶ್ವರನಾದ ಪರಮಾತ್ಮನನ್ನು ತನಗೆ ಅಧೀನನ್ನಾಗಿ ಮಾಡಿಕೊಂಡು ಪ್ರಪನ್ನರು ಮಾಡುವ ಅಪರಾಧಗಳನ್ನು ಗಮನಿಸದಂತೆಯೇ ಮಾಡಿ ಶಾಸ್ತ್ರ ಮರ್ಯಾದೆಯನ್ನೇ ಮುರಿದುಬಿಡುವಳೆಂದು ಸ್ತುತಿಸುತ್ತಾರೆ.

ಉಪನಿಷತ್ತುಗಳು "ನ ತಸ್ಯೇಶೇ ಕಶ್ಚನ" ಎಂದು ಭಗವಂತನಿಗಿಂತಲೂ ಮೇಲಾದ ನಿಯಾಮಕನು ಯಾರೂ ಇಲ್ಲವೆಂದು ಸಾರಿ ಹೇಳುವುವು. ಅಂತಹ ಭಗವಂತನು ಆಶ್ರಿತರ ವಿಷಯದಲ್ಲಿ ಅತ್ಯಂತ ಪರಾಧೀನನಾಗಿ ದೌತ್ಯವನ್ನು ಮಾಡುವುದಕ್ಕೂ ರಥವನ್ನು ನಡೆಸುವುದಕ್ಕೂ ಮುಂದಾಗಿ ಬರುವನು. ಹೀಗೆಯೇ ಅನೇಕ ಕೆಲಸಗಳನ್ನು ಮಾಡುವನು. "ಯಃ ಸರ್ವಜ್ಞಃ ಸ ಸರ್ವವಿತ್" ಎಂಬಂತೆ ಎಲ್ಲವನ್ನೂ ಯಾವಾಗಲೂ ತಿಳಿಯುವಂತಹ ಸ್ವಭಾವವುಳ್ಳವನೆಂದು ಪ್ರಸಿದ್ಧನಾಗಿರುವನು- ಆಶ್ರಿತರು ಮಾಡುವ ಕೆಲವು ಅಪರಾಧಗಳನ್ನು ತಾನು ಅರಿಯದವನಂತೆ ಇದ್ದು ಉಪೇಕ್ಷಿಸುವನು. "ಪತಿಂ ವಿಶ್ವಸ್ಯ" ಎಂಬಂತೆ ಸರ್ವಜಗತ್ತಿಗೆ ಪತಿಯಾಗಿದ್ದೂ ಕೂಡ, ನಿನಗೆ ಪತಿಯಾಗಿದ್ದರೂ ಕೂಡ ಓ ದಯಾದೇವಿ ಸರ್ವೇಶ್ವರನು ನಿನಗೆ ಅಧೀನನಾಗಿರುವನು. ಅಂದರೆ, ನೀನು ಹೇಳಿದಂತೆ ನಡೆದು ನಿನ್ನ ಇಚ್ಛೆಯನ್ನು ಅನುಸರಿಸುತ್ತಾನೆ. ಇದೆಲ್ಲವೂ ನಿನ್ನ ಸಲಿಗೆಯಿಂದ ನಡೆಯುವಂಥವು. ಶಾಸ್ತ್ರಗಳಲ್ಲಿ ಅವನ ಹಿರಿಮೆಯೆಂದು ಹೇಳಲ್ಪಟ್ಟ ಆಕಾರಗಳನ್ನು ಅಳಿಸಿ ಅವನಿಗೆ ನ್ಯೂನತೆಯನ್ನುಂಟು ಮಾಡುತ್ತೀಯೆ. ಇದೆಂತಹ ಮದವು ನಿನ್ನದೆಂದು ಆಚಾರ್ಯ ದೇಶಿಕರು ಸ್ವರಸವಾಗಿ ವರ್ಣಿಸುತ್ತಾರೆ. ಹೀಗೆ ನಿಂದೆಮಾಡುವ ವ್ಯಾಜದಿಂದ ದಯೆಯನ್ನು ರಮಣೀಯವಾಗಿ ಸ್ತುತಿಸಿರುತ್ತಾರೆ. ಉತ್ತಮನಾದ ಪ್ರಭುವಿಗೆ ಆಶ್ರಿತಪಾರತಂತ್ರ್ಯವೆಂಬ ಗುಣವು ಶ್ರೇಷ್ಠವಾದುದೇ ಸರಿ. ಅಂತಹ ಗುಣಗಳಿಲ್ಲದಿದ್ದರೆ ಅವನು ಉತ್ತಮ ಪ್ರಭುವೇ ಆಗಲಾರನು.

ಆದರೆ ಶಾಸ್ತ್ರ ಮರ್ಯಾದೆಯನ್ನು ಮೀರುವುದು ಅಯುಕ್ತವಲ್ಲವೆ? ಎಂದು ಕೇಳಬಹುದು. ಇಲ್ಲ - ಯಾವ ಶಾಸ್ತ್ರಗಳು ಅವನನ್ನು ಸರ್ವೇಶ್ವರನೆಂದು ಹೇಳುವುವೋ ಅವುಗಳೇ ಅವನ ತಿರುವಡಿಗಳನ್ನು ಹಿಡಿದು ಶರಣಾಗತನಾದರೆ ಅವನ ಮನಸ್ಸು ಕರಗಿ ದಯೋದೇಕವುಂಟಾಗಿ ಅವನ ವಿಷಯದಲ್ಲಿ ದಾಸಾನುದಾಸನಾಗಿ ವರ್ತಿಸುವನೆಂದು ಹೇಳುವುದರಿಂದ ಇದೂ ಶಾಸ್ತ್ರವಿಹಿತವಾದುದೇ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಪ್ಲವನಾಮ ಸಂವತ್ಸರ ಕಾರ್ತಿಕ - ಮಾರ್ಗಶಿರ ಮಾಸ ಸಂಚಿಕೆ

ಸಂಪುಟ - 01 **ಡಿಸೆಂಬರ್ 2021** ಸಂಚಿಕೆ -05




## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಶ್ರೀವೆಂಕಟೇಶ ಕಲ್ಯಾಣ ವೈಭವಂ | | 7 |
| ಕರ್ನಾಟಕದ ಆದಿ, ಮಧ್ಯ ಹಾಗೂ ಅಂತ್ಯ ಸುಬ್ರಹ್ಮಣ್ಯ ದೇವಸ್ಥಾನಗಳು | -ಡಾ॥ ಪ್ರಕಾಶ್ ಕೆ. ನಾಡಿಗ್ | 11 |
| ರಾಮಾಯಣದಲ್ಲಿ ಹನುಮನ ಹಾರಾಟ | -ಡಾ॥ ಎಸ್. ನಂಜುಂಡಸ್ವಾಮಿ | 14 |
| ಶ್ರೀ ಪ್ರಸನ್ನ ವೆಂಕಟದಾಸಾರ್ಯ ವಿರಚಿತ | -ಡಾ॥ ಸುಭಾಷ್ ಕಾಖಂಡಕಿ | 17 |
| ಜಿತಾಮಿತ್ರ ತೀರ್ಥರು | -ಶ್ರೀಧರ ರಾಯಸಂ | 18 |
| ಆಳ್ವಾರರ ಭಗವದನುಭವ | -ಡಾ॥ ಸಿ.ಎಸ್.ಊರ್ಮಿಳಾ | 20 |
| ಬಾಗೂರಿನ ವೇಣುಗೋಪಾಲ ದೇವಾಲಯ | -ಕೆಂಗೇರಿ ಚಕ್ರಪಾಣಿ | 23 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 25 |
| ಗೋಮಹಾ ಸಮ್ಮೇಳನ | -ಶ್ರೀಮತಿ. ಎನ್. ಪಾರ್ವತಿ | 31 |
| ಗೀತೆಯ ಮಾಧುರ್ಯಾ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 35 |
| ಶ್ರೇಷ್ಠಅನುಭಾವಿ ಮಹಿಪತಿದಾಸರು | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 38 |
| ಆಯುರ್ವೇದ ಮತ್ತು ನಾವು | -ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 41 |
| ತಿರುಮಲೆ - ಕಾಲಮಾನಾಚರಣೆಗಳು | -ಶ್ರೀಮತಿ | 42 |
| ಶ್ರೀಮದ್ಭಗವದ್ಗೀತೆ | -ಶ್ರೀಮತಿ ಬಿ. ಪದ್ಮಜ | 44 |
| ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರ | -ಆರ್. ಶ್ರೀನಿಧಿ | 46 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 48 |
| ನೀತಿ ಕಥೆ - ಯಾರೂ ದೊಡ್ಡ ಬ್ರಹ್ಮ ಜ್ಞಾನಿ | -ಶ್ರೀಮತಿ ಎ. ಗೀತಾ ವೀರರಾಘವನ್ | 51 |
| ಚಿತ್ರ ಕಥೆ - ತಿರುಪ್ಪಾವೈ | -ಕೆ. ತುಲಸೀ ಪ್ರಸಾದ್ | 52 |
| ಕ್ವಿಜ್ | | 54 |


ಮುಖಚಿತ್ರ - ಗಜವಾಹನದ ಮೇಲೆ ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು
ಹಿಂಬದಿಚಿತ್ರ - ಶ್ರೀ ಗೋದಾದೇವಿ


**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಬ್ರಹ್ಮೋತ್ಸವದ ದರ್ಶನ ಫಲ

ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನೆಂದು ಏಳುಬೆಟ್ಟದೊಡೆಯನೆಂದು ವೇಂಕಟರಮಣನೆಂದು ಸಂಕಟಹರನೆಂದು ತಿರುಮಲೇಶನೆಂದು, ವೇಂಕಟೇಶ್ವರನೆಂದು ಅಡಿಗಡಿಗೂ ಭಕ್ತರ ನಮಸ್ಕಾರಗಳ ಪಡೆಯುವವನೆಂದು ಆಪದ್ಬಾಂದವನೆಂದು...ಇಂತಹ ಅನೇಕ ಹೆಸರುಗಳಿಂದ ಕೀರ್ತಿಸಲ್ಪಡುತ್ತ ಭಕ್ತರಿಂದ ಸ್ತುತಿಸಲ್ಪಡುತ್ತಿರುವ ಶ್ರೀ ವೇಂಕಟಾಚಲಪತಿಯ ದಿವ್ಯವಾದ ಹೃದಯದಲ್ಲಿ ನಿತ್ಯಾನಪಾಯಿನಿಯಾಗಿ ಸಾಕ್ಷಾತ್ ಶ್ರೀಮಹಾಲಕ್ಷ್ಮಿ ನೆಲೆಸಿದ್ದು ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವಳು ಆ ಅಲಮೇಲುಮಂಗೆಯ ಜ್ಞಾನವು ಶಕ್ತಿ ಮಹಿಮೆಯು ಯಾರಿಂದಲೂ ತಿಳಿಸಿ ಹೇಳಲಾಗುವುದಿಲ್ಲ ಕನಿಷ್ಠ ಪಕ್ಷ ಅದನ್ನು ತಿಳಿಯಲೂ ಸಹ ಸಾಧ್ಯವಿಲ್ಲ. ಆದರೆ ಭಕ್ತರ ಯೋಗ್ಯತೆ ಮತ್ತು ಅರ್ಹತೆಯಂತೆ ಆ ಮಹಾಲಕ್ಷ್ಮೀ ದೇವಿಯು ಮಹಿಮೆಗಳನ್ನು ತೋರಿಸುತ್ತಾಳೆ ಅದರೊಂದಿಗೆ ಧರ್ಮ ಅರ್ಥ, ಕಾಮ,ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಅವರವರ ಅರ್ಹತೆಯಂತೆ ಅನುಗ್ರಹಿಸುತ್ತಿರುತ್ತಾಳೆ.

ಹೀಗೆ ಶ್ರೀವೇಂಕಟೇಶ್ವರ ಸ್ವಾಮಿ ಹೃದಯದ ಪಟ್ಟದ ರಾಣಿಯಾದ ಪದ್ಮಾವತೀ ದೇವಿ ಭಕ್ತರಾದ ಬ್ರಹ್ಮಾದಿದೇವತೆಗಳಿಗೆ ಅತ್ಯುತ್ತಮವಾದ ಅನಂತವಾದ ಮಹದೈಶ್ವರ್ಯ ಸೌಭಾಗ್ಯಗಳನ್ನು ಪ್ರಸಾದಿಸುತ್ತಿರಲು, ಎಲ್ಲಾ ವೇಳೆಗಳಲ್ಲೂ ಬಿಡದೆ ತನ್ನ ಒಡೆಯನಾದ ಶ್ರೀ ವೇಂಕಟೇಶ್ವರ ಸ್ವಾಮಿಯನ್ನು ಅನುಸರಿಸುತ್ತ, ಆ ಸ್ವಾಮಿಯು ವಕ್ಷಃಸ್ಥಳವಾಸಿನಿಯಾದ ಸದಾ ಭಾಸವಾಗುತ್ತಾಳೆ. ಆದ್ದರಿಂದಲೇ ತಿರುಮಲೇಶನು ಶ್ರೀನಿವಾಸನಾಗಿ ಪ್ರಖ್ಯಾತಿಗೊಂಡು ವಕ್ಷಃಸ್ಥಳ ಲಕ್ಷ್ಮೀದೇವಿಯ ಸಹಕಾರದಿಂದ ಅದೆಷ್ಟೋ ಭಕ್ತರ ಅನೇಕ ರೀತಿಯಲ್ಲಿ ಕಲ್ಯಾಣವನ್ನು ವರ್ಷಿಸುತ್ತ ತನ್ಮೂಲಕ ಇಹಪರಗಳಲ್ಲಿ ಸುಖವನ್ನು ಅನುಗ್ರಹಿಸುತ್ತಿದ್ದಾನೆ.

ಹೀಗೆ ಶ್ರೀವೇಂಕಟಾಚಲಪರ್ವತ ಶ್ರೇಣಿಗಳಲ್ಲಿ ಸುತ್ತಲೂ ಆಯಾ ದಿವ್ಯ ಸ್ಥಳಗಳಲ್ಲೂ ಸಿರಿದೇವಿ ನೆಲೆಸಿದ್ದು ಭಕ್ತರನ್ನು ದಯೆಯಿಂದ ರಕ್ಷಿಸುತ್ತಾಳೆ. ಕರುಣೆಯಿಂದ ಕಾಪಾಡುತ್ತಾಳೆ. ಆ ಸಿರಿದೇವಿಯೇ ಮಹಾರಾಷ್ಟ್ರದಲ್ಲಿನ ಕೊಲ್ಹಾಪುರದಲ್ಲಿ ಶ್ರೀ ಮಹಾಲಕ್ಷ್ಮಿಯಾಗಿ ನಾರಾಯಣವರಂನಲ್ಲಿ ಶ್ರೀ ಪದ್ಮಾವತಿಯಾಗಿ ತಿರುಚಾನೂರಿನಲ್ಲಿ ಆರ್ಚಾಮೂರ್ತಿ ರೂಪದಲ್ಲಿ ಶ್ರೀ ಅಲಮೇಲು ಮಂಗೆಯಾಗಿ ಶ್ರೀ ಪದ್ಮಾವತಿಯಾಗಿ ತಿರುಮಲೆ ಕ್ಷೇತ್ರದಲ್ಲಿ ಶ್ರೀನಿವಾಸನ ಹೃದಯಪದ್ಮದಲ್ಲಿ ವ್ಯೂಹಲಕ್ಷ್ಮಿಯಾಗಿ ಭೂತಕಾರುಣ್ಯಲಕ್ಷ್ಮಿಯಾಗಿ ನೆಲೆಸಿದ್ದು ತನ್ನನ್ನು ದರ್ಶಿಸುವ ಭಕ್ತರೆಲ್ಲರಿಗೂ ಸಂಪತ್ತನ್ನು ಸುರಿಸುತ್ತ ಭಕ್ತರಪಾಲಿನ ಕಲ್ಪವಲ್ಲಿಯಾಗಿ ಕೋರಿಕೆಗಳನ್ನು ಈಡೇರಿಸುತ್ತಿದ್ದಾಳೆ. ಆ ಜಗನ್ಮಾತೆ ಎಲ್ಲೆಡೆಯು ಅನೇಕ ಹೆಸರುಗಳಿಂದ ವಿರಾಜಾಮಾನಳಾದರೂ ಸಾಕ್ಷಾತ್ ಶ್ರೀಮನ್ನಾರಾಯಣನ ಪಟ್ಟದರಸಿಯೇ ಈ ರೀತಿಯಿಂದ ತಿರುಚಾನೂರಿನಲ್ಲಿ ನೆಲೆನಿಂತ ಶ್ರೀ ಅಲಮೇಲುಮಂಗೆ ಅಂಗರಂಗ ವೈಭವವಾಗಿ ಬ್ರಹ್ಮೋತ್ಸವಗಳು ನಡೆಯುತ್ತಿವೆ. ಈ ಉತ್ಸವಗಳು ಏಕಾಂತವಾಗಿ ನಡೆಯುತ್ತದೆ. ಆದ್ದರಿಂದ ಭಕ್ತರೆಲ್ಲರೂ ಶ್ರೀ ವೇಂಕಟೇಶ್ವರ ಭಕ್ತಿ ಚಾನಲ್ ಮುಖಾಂತರ ಪ್ರತ್ಯಕ್ಷ ಪ್ರಸಾರದಲ್ಲಿ ವೀಕ್ಷಿಸಿ ಆ ತಾಯಿಯ ಕರುಣಾ ಕಟಾಕ್ಷವನ್ನು ಪಡೆಯಿರು. ಇದರಲ್ಲಿ ವಾಹನ ದರ್ಶನ ಫಲವನ್ನು ಸಹ ಪ್ರಸಾದಿಸುತ್ತಿದ್ದಾಳೆ ಆ ತಾಯಿ ಅವುಗಳು ಚಿಕ್ಕಶೇಷವಾಹನ- ಯೋಗಶಕ್ತಿ,ಹಂಸವಾಹನ-ಜ್ಞಾನಾರ್ಜನಸಿದ್ಧಿ. ಮುತ್ತಿನಚಪ್ಪರವಾಹನ-ನೈರ್ಮಲ್ಯತೆ. ಪವಿತ್ರತೆ, ಸಿಂಹವಾಹನ ಎದುರೇ ಇಲ್ಲದ ರಾಜಸವು ಕಲ್ಪವೃಕ್ಷವಾಹನ-ಅಭೀಷ್ಟ ಸಿದ್ಧಿ, ಹನುಮದ್ವಾಹನ-ಬುದ್ಧಿ,ಬಲ,ಕೀರ್ತಿ,ಐಶ್ವರ್ಯ,ಗಜವಾಹನ- ಮನೋವಿಕಾರ ಜಯಸಿದ್ಧಿ,ಸರ್ವಭೂಪಾಲವಾಹನ- ರಾಜಯೋಗಾದಿ ಮಂಗಲಗಳು ಗರುಡವಾಹನ-ಸಕಲಾಭೀಷ್ಟ ಸಿದ್ಧಿ ಸೂರ್ಯಪ್ರಭವಾಹನ - ಜ್ಞಾನಸಿದ್ಧಿ,ಚಂದ್ರಪ್ರಭವಾಹನ - ಕರುಣಾಕಟಾಕ್ಷಸಿದ್ಧಿ,ರಥೋತ್ಸವ - ಸಕಲ ಮನೋರಥಸಿದ್ಧಿ ಅಶ್ವವಾಹನ ಸಕಲ ಕಾರ್ಯ ಜಯಂ, ಪಂಚಮೀತೀರ್ಥಂ ಸಕಲಪಾಪ ದೋಷಪರಿಹಾರಾರ್ಥಸಿದ್ಧಿ ಮುಂತಾದ ಫಲಗಳು ದೊರೆಯುತ್ತವೆ.

ಆದ್ದರಿಂದ ನಾವೆಲ್ಲರೂ ಸಹ ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ಪ್ರತಿ ವಾಹನಸೇವೆಯನ್ನು ವೀಕ್ಷಿಸಿ ಅಮ್ಮನವರ ಕರುಣಾಕಟಾಕ್ಷ ಸಿದ್ಧಿಯನ್ನು ಪಡೆಯೋಣ.

**ಜಯ ಮಂಗಳಂ! ಶುಭ ಮಂಗಳಂ!**





# ಶ್ರೀ ವೆಂಕಟೇಶ ಕಲ್ಯಾಣ ವೈಭವಂ

- ಕೃಪೆ

ವೇದವ್ಯಾಸರು 18 ಮಹಾಪುರಾಣಗಳನ್ನು ಬರೆದರು. ಈ ಪುರಾಣಗಳನ್ನು ಶೌನಕಾದಿ ಮುನಿಗಳು ಸೂತಮಹರ್ಷಿಗಳಿಂದ ತಿಳಿದುಕೊಂಡರು. ಈ ಸಂದರ್ಭದಲ್ಲಿ ಸೂತಮಹರ್ಷಿಯು ಶ್ರೀವೆಂಕಟೇಶ್ವರನ ಅವತಾರದ ಮಹಿಮೆಯನ್ನು ಕಲಿಯುಗ ವೈಕುಂಠವೆಂದೇ ಪ್ರಸಿದ್ಧವಾಗಿರುವ ತಿರುಪತಿ - ತಿರುಮಲೆ ಕ್ಷೇತ್ರದ ಮಹಿಮೆಯನ್ನು ಸವಿಸ್ತಾರವಾಗಿ ತಿಳಿಸಿದರು.

ಒಮ್ಮೆ ಚತುರ್ಮುಖ ಬ್ರಹ್ಮದೇವರ, ಮಾನಸಪುತ್ರರಾದ ನಾರದರನ್ನು ಕರೆಯಿಸಿ, ಶ್ರೀಮನ್ನಾರಾಯಣನು ಭೂಲೋಕದಲ್ಲಿ ಅವತರಿಸುವಂತೆ ಮಾಡಬೇಕು. ಇದರಿಂದ ಕಲಿಯುಗದ ಮನುಜರಿಗೆ ಒಂದು ವಿಶೇಷವಾದ ಭಕ್ತಿ ಹರಿನಾಮ ಸಂಕೀರ್ತನೆ ಮಾಡುವತ್ತ ಗಮನ, ಶ್ರೀ ವೆಂಕಟೇಶನ ಲೀಲಾವೈಭವವನ್ನು ತಿಳಿಯಲು ಸಾಧ್ಯವಾಗುತ್ತದೆ ಎಂದರು ನಾರದರು ಬ್ರಹ್ಮನ ಆಜ್ಞೆಯನ್ನು ಶಿರಸಾವಹಿಸಿ ಭೂಲೋಕಕ್ಕೆ ಬಂದರು. ಹೀಗೆ ಸಂಚರಿಸುತ್ತಿರಲು ಗಂಗಾನದಿ ತೀರದಲ್ಲಿ ಸಪ್ತಋಷಿಗಳು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಅವರ ಬಳಿ ಹೋಗಿ "ನೀವು ಯಾವ ಪುರುಷಾರ್ಥ ಫಲಕ್ಕಾಗಿ ಈ ಯಜ್ಞಯಾಗಾದಿಗಳನ್ನು ಮಾಡುತ್ತಾ ಇದ್ದೀರಿ" ಎಂದು ಹೇಳಿದ್ದಲ್ಲದೆ. ಇದರ ಫಲವನ್ನು ಯಾರು ಭೋಗಿಸುವರು ಎಂದು ಕೇಳಿದರು. ಅತ್ರಿ, ಕಶ್ಯಪ ಮುಂತಾದ ಋಷಿಗಳಿಗೆ ಇದರ ಬಗ್ಗೆ ಸಂದೇಹವುಂಟಾಯಿತು. ಆಗ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಭೃಗು ಮಹರ್ಷಿಗಳ ಬಳಿ ಬಂದು ತಮ್ಮ ಸಂದೇಹವನ್ನು ಪರಿಹರಿಸಲು ಭೃಗು ಮಹರ್ಷಿಯು ಮೊದಲು ಸತ್ಯಲೋಕದಲ್ಲಿದ್ದ ಬ್ರಹ್ಮನ ಬಳಿ ಬಂದರು.ಅಲ್ಲಿ ಅವರ ಆಗಮನವನ್ನು ಬ್ರಹ್ಮನು ಉಪೇಕ್ಷಿಸಿದನು. ಇದರಿಂದ ಕಸಿವಿಸಿಗೆ ಒಳಗಾದ ಭೃಗುವು ಬ್ರಹ್ಮನು ಪೂಜೆಗೆ ಯೋಗ್ಯನಲ್ಲ ಎಂದು ತಿಳಿದು ಕೈಲಾಸ ಪರ್ವತಕ್ಕೆ ಬಂದರು.

ಕೈಲಾಸದಲ್ಲಿ ರುದ್ರನು ತನ್ನ ಸತಿಯಾದ ಪಾರ್ವತಿಯೊಡನೆ ಸರಸಸಲ್ಲಾಪದಲ್ಲಿ ತೊಡಗಿದ್ದನು. ಆತನೂ ಸಹ ಭೃಗುಋಷಿಯನ್ನು ಅಲಕ್ಷಿಸಿದನು. ಪಾರ್ವತಿಯು ರುದ್ರನನ್ನು ಎಚ್ಚರಿಸಿದಾಗ ಭೃಗುವನ್ನೇ ತ್ರಿಶೂಲದಿಂದ ಇರಿಯಲು ಶಿವನು ಮುಂದೆ ಬಂದನು. ಅವನನ್ನು ಕಂಡು ಯಾರು ನಿನ್ನ ಮೂರ್ತಿಯನ್ನು ಈ ಭೂಲೋಕದಲ್ಲಿ ಪೂಜಿಸದಿರಲಿ ನಿನ್ನನ್ನು ಲಿಂಗ ಪೂಜೆಯಿಂದಲೇ ಭಕ್ತರು ಪೂಜಿಸಲಿ ಎಂದು ಹೇಳಿ ವೈಕುಂಠಲೋಕಕ್ಕೆ ಬಂದರು.

ಶ್ರೀಮನ್ನಾರಾಯಣನಾದರೋ ಮಲಗಿದ್ದನು ಲಕ್ಷ್ಮಿಯು ಅವನ ಪಾದಗಳನ್ನು ಒತ್ತುತ್ತಿದ್ದಳು ಭೃಗುವನ್ನು ಗಮನಿಸಲಿಲ್ಲ. ಇದನ್ನು ಕಂಡ ಭೃಗು ಮಹರ್ಷಿಗೆ ಕೋಪಬಂದಿತು. ಶ್ರೀಹರಿಯೂ ಸಹ ನನ್ನನ್ನು ಉಪೇಕ್ಷಿಸುತ್ತಿದ್ದಾನೆಯೇ ಎಂದು ತನ್ನ ಅಂಗಾಲಿನಿಂದ ನಾರಾಯಣನ ಎದೆಗೆ ಒದ್ದರು.ತಕ್ಷಣ ನಾರಾಯಣನು ಎದ್ದು ಮುನಿಯ ಪಾದದಲ್ಲಿದ್ದ ನೇತ್ರವನ್ನು ಚಿವುಟಿದನು. ಭೃಗು ಮಹರ್ಷಿಯನ್ನು ಆಲಂಗಿಸಿಕೊಂಡನು.ಈ ಲೋಕದಲ್ಲಿ ಋಷಿಮುನಿಗಳಿಗೆ ಯಾವ ಸ್ಥಾನವನ್ನು ಕೊಡಬೇಕೆಂಬುದನ್ನು ತೋರಿಸುವುದಕ್ಕಾಗಿಯೇ ಶ್ರೀಹರಿಯು ಋಷಿಯ ಪಾದಗಳನ್ನು ತೊಳೆದು ಆ ನೀರನ್ನು ತನ್ನ ಮೇಲೂ ತನ್ನ ಪತ್ನಿಯ ಮೇಲೂ ಪ್ರೋಕ್ಷಿಸಿದನು. ಶ್ರೀಮನ್ನಾರಾಯಣನು ಭಕ್ತಿ ಆದರಗಳಿಂದ ಸೇವಿಸಿದನ್ನು ಋಷಿಯು ಕಂಡು ಹರ್ಷಚಿತ್ತರಾದರು. ಅಷ್ಟೇ ಅಲ್ಲದೆ ತ್ರಿಮೂರ್ತಿಗಳಲ್ಲಿ ಹರಿಯೇ ಸರ್ವೋತ್ತಮನಾದ ದೇವರು. ಅವನೊಬ್ಬನೇ ಯಜ್ಞ ಫಲಕ್ಕೆ ಅರ್ಹನು ಎಂದು ಸಾರುತ್ತಾ ಯಜ್ಞ ಭೂಮಿಗೆ ಬಂದರು. ಭೃಗು ಮಹರ್ಷಿ ಮಹಾಜ್ಞಾನಿ ಎಂದು ಹರಿಯನ್ನು ಬಿಟ್ಟು ಮತ್ತಾರಿಗೂ ತಿಳಿದಿರಲಿಲ್ಲ. ಆದ್ದರಿಂದಲೇ ಶ್ರೀಹರಿ

ಭೃಗುವನ್ನು ಪೂಜಿಸಿದನು. ಇತ್ತ ಲಕ್ಷ್ಮಿಗೆ ಭೃಗು ಮಹರ್ಷಿಯು ನಡೆದುಕೊಂಡ ವಿಧಾನ ಸರಿಯೆಂದು ತೋರಲಿಲ್ಲ. ದೇವರ ದೇವನಾದ ನಾರಾಯಣನನ್ನು ತಾನು ಆಲಂಗಿಸಲು ಯೋಗ್ಯವಾದ ಎದೆಯ ಮೇಲೆ ಸಾಮಾನ್ಯ ಮನುಷ್ಯನಾದ ಭೃಗು ಋಷಿಯಿಂದ ಪೆಟ್ಟು ತಿಂದನಲ್ಲಾ ಎಂದು ಕೋಪ ಬಂದಿತು.ಅಷ್ಟೇ ಅಲ್ಲ ಮಹಾಲಕ್ಷ್ಮಿಯು ಶ್ರೀಮನ್ನಾರಾಯಣನ ವಕ್ಷಃಸ್ಥಳ ನಿವಾಸಿನಿಯಲ್ಲವೇ? ನಾರಾಯಣನು ಅವರ ಕಾಲುಗಳಿಂದ ಒದೆ ತಿಂದಿದ್ದರೂ ಭೃಗುಮಹರ್ಷಿಗೆ ಮಾಡಿದ ಉಪಾಚಾರಗಳಿಂದ ಅತ್ಯಂತ ಕೋಪಾವಿನಿಷ್ಟಳಾಗಿ "ನಾನು ಒಂದು ಕ್ಷಣವೂ ಇಲ್ಲಿ ಇರಲಾರೆ ಎಂದು ಕೋಪಿಸಿಕೊಂಡು ವೈಕುಂಠವನ್ನು ಬಿಟ್ಟು ಕೊಲ್ಹಾಪುರಕ್ಕೆ ಲಕ್ಷ್ಮಿಯು ಬಂದು ನೆಲಸಿದಳು. ಗೋದಾವರಿ ನದಿ (ಕರವೀರಪುರ) ತೀರದಲ್ಲಿರುವ ಕೊಲ್ಹಾಪುರದಲ್ಲಿ ತಪಸ್ಸು ಮಾಡತೊಡಗಿದಳು.

ವರ್ಣಿಸಲಾರೆ ಕೊಲ್ಹಾಪುರ ಲಕ್ಷ್ಮಿಯ ಕನ್ಯೆಪದ್ಮಿನಿಯ ಸಹೋದರಿಯಾ

ಭೃಗುಮುನಿ ಹರಿಯ ಒದೆಯಲು ಕಾಲಿನಿಂ ಅಧಿಕಕುಪಿತಳಾಗಿ ತಾ ತಿರುಗಿ, ಮಡದಿಯರಿಗೆ ತಾವರಗಳ ನೀಡುತ ಸಡಗರದಿಂದಿಹ ಸತಿಮಣಿಯಾ॥

ನಂದನ ಕಂದ ಮುಕುಂದ ನರ್ಧಾಂಗಿಯ ಇಂದಿರಾಪತಿ ಶ್ರೀ ಗೋವಿಂದನ ಸತಿಯಾ, ತಂದೆ ಶೇಶಾದ್ರೀಶನ ಮೇಲೆ ಕೋಪಿಸಿ ಬಂದು ನೆಲಸಿದಾ ಕೊಲ್ಹಾಪುರ ಲಕ್ಷ್ಮಿಯಾ ॥೨॥

ಎಂಬ ದಾಸರ ಪದವನ್ನು ಸ್ಮರಿಸೋಣ.

ಇತ್ತ ಮಹಾಲಕ್ಷ್ಮಿಯ ನಿರ್ಗಮನದಿಂದ ವೈಕುಂಠವೇ ಕಳೆಗುಂದಿತು. ಶ್ರೀಮನ್ನಾರಾಯಣನು ವೈಕುಂಠವನ್ನು ಬಿಟ್ಟು ಲಕ್ಷ್ಮೀ ದೇವಿಯನ್ನು ಹುಡುಕುತ್ತಾ ಭೂಲೋಕಕ್ಕೆ ಬಂದನು. ಕೊನೆಗೆ ಶೇಷಾಚಲವೆಂಬ ಬೆಟ್ಟಕ್ಕೆ ಬಂದೂ ಪುಷ್ಕರಿಣಿಯ ದಡದಲ್ಲಿ ಹುಣಸೇ ಮರದ ಬುಡದಲ್ಲಿ ವೈರಾಗ್ಯದಿಂದ ತಪಸ್ಸನ್ನು ಆಚರಿಸಿದನು.ಅವನ ಮೇಲೆ ಹುತ್ತವೇ ಬೆಳೆದು ಬಿಟ್ಟಿತು. ಶ್ರೀಹರಿಯ ಅವಸ್ಥೆಯನ್ನು ಕಂಡು ದೇವತೆಗಳು ಬ್ರಹ್ಮನಲ್ಲಿ ಮತ್ತು ಶಿವನಲ್ಲಿ ಮೊರೆಯಿಟ್ಟರು. ಆಗ ಶಿವನು ಹಸುವಾಗಿಯೂ ಬ್ರಹ್ಮನು ಕರುವಾಗಿಯೂ ಭೂಲೋಕಕ್ಕೆ ಬಂದರು. ಇದರ ಮಧ್ಯೆ ಶೇಷಾಚಲದ ರಮ್ಯತೆಯ ಬಗ್ಗೆ ಸ್ವಲ್ಪ ತಿಳಿಯೋಣ.

"ಶ್ರೀ ಶೇಷಶೈಲ ಗರುಡಾಚಲ ವೆಂಕಟಾದ್ರಿ ನಾರಾಯಣಾದ್ರಿ ವೃಷಬಾದ್ರಿ ವೃಷಾದ್ರಿ ಮುಖ್ಯಾಂ" ಎಂಬುದನ್ನು ಸ್ಮರಿಸೋಣ.

1. ಶ್ರೀ ಶೈಲ 2 ಶೇಷಾದ್ರಿ 3. ಗರುಡಾದ್ರಿ 4. ವೆಂಕಟಾದ್ರಿ 5. ನಾರಾಯಣಾದ್ರಿ 6. ವೃಷಾಭಾಚಲ ವರಾಹಗಿರಿ ಎಂಬಿವು. ಈ ವೆಂಕಟಗಿರಿಯು ಪುಣ್ಯಕರವಾದ ಅರಣ್ಯದಿಂದ ಕೂಡಿದೆ. ಇದು ಸಮಸ್ತ ತೀರ್ಥಗಳಿಂದ ಕೂಡಿದೆ.ಇದು ಆದಿಶೇಷನ ಅವತಾರವಾಗಿದೆಯಾದ್ದರಿಂದ ನಾರಾಯಣನು ಇಲ್ಲಿ ವಾಸಿಸಲು ಯೋಗ್ಯವಾಗಿತ್ತು ಇದು ಸರ್ಪಾಕೃತಿಯಲ್ಲಿದೆ.ಏಕೆಂದರೆ ವೆಂಕಟಾದ್ರಿಯು ಆದಿಶೇಷನ ಹೆಡೆಯಂತೆ ಇದೆ. ಅಹೋಬಲಪರ್ವತವು ಅದರ ಮಧ್ಯಪ್ರದೇಶದಂತೆ ಇದೆ. ಶ್ರೀ ಶೈಲ ಪರ್ವತವು ಅದರ ಬಾಲದಂತೆ ತೋರುತ್ತದೆ. ಈ ಪರ್ವತ ಪ್ರದೇಶಗಳು ಪ್ರಾಕೃತಿಕ ಸಂಪತ್ತಿಗೆ ನಿದರ್ಶನವಾಗಿದೆ. ಇಲ್ಲಿ ನಾನಾ ಜಾತೀಯ ವೃಕ್ಷಗಳು, ಹಣ್ಣಿನ ಮರಗಳು, ನಾಗಸಂಪಿಗೆ,ತಾಳೆ ಮುಂತಾದ ಅನೇಕ ಮರಗಳಿಂದ ಕೂಡಿದೆ. ಮೃಗಪಕ್ಷಿಗಳಿಗೂ, ಕ್ರೂರಮೃಗಗಳಿಗೂ ಸರೀಸೃಪಗಳಿಗೂ ಇದು ವಾಸ ಸ್ಥಾನವಾಗಿದೆ.

ಈ ಹಿಂದೆ ತಿಳಿಸಿದಂತೆ ರುದ್ರದೇವನು ಹಸುವಾಗಿ ಬ್ರಹ್ಮನು ಕರುವಾಗಿ ಸೂರ್ಯನಾರಾಯಣನನ್ನು ಕೊಲ್ಹಾಪುರದಲ್ಲಿರುವ ಲಕ್ಷ್ಮೀ ದೇವಿಯ ಬಳಿ ಕಳುಹಿಸಿದರು. ಸೂರ್ಯದೇವನ ಬಿನ್ನಹದಂತೆ ಲಕ್ಷ್ಮೀದೇವಿಯು ಆ ಹಸು ಮತ್ತು ಕರುವನ್ನು ಚೋಳರಾಜನಿಗೆ ಗೊಲ್ಲತಿಯು ಮಾರಿದಳು.ಚೋಳ ರಾಜನಾದರೋ ಅವುಗಳನ್ನುಗೋಶಾಲೆಗೆ ಕಳುಹಿಸಿದನು. ಅಲ್ಲಿ ನೂರಾರು ಹಸುಗಳ ಮಧ್ಯೆ ಇವುಗಳು ನಕ್ಷತ್ರದಂತೆ ಮಿನುಗತೊಡಗಿದವು. ಗೋಪಾಲಕನು ಇತರ ಹಸುಗಳೊಡನೆ ಈ ಹಸು ಕರುಗಳನ್ನು ಮೇಯಿಸಲು ಅರಣ್ಯದತ್ತ ಹೊರಟನು. ವಿಚಿತ್ರ ಸಂಗತಿಯೆಂದರೆ ಆ ಹಸು - ಕರುಗಳ ಗುಂಪಿನಿಂದ ಬೇರೆಯಾಗಿ ( ಈ ಬ್ರಹ್ಮರುದ್ರ ಹಸುಕರುಗಳು ಪ್ರತಿದಿನವೂ ಶ್ರೀ ಹರಿಯು ತಪಸ್ಸನ್ನು ಆಚರಿಸುತ್ತಿದ್ದ ಹುತ್ತದ ಬಳಿ ಬಂದು ಶ್ರೀ ಹರಿಗೆ ಹಾಲನ್ನು ಒದಗಿಸುತ್ತಿತ್ತು ತಾವಾಗಿಯೆ ಹಾಲನ್ನು ಕರೆಯುತ್ತಿದ್ದವು) ಇದರಿಂದಾಗಿ ಚೋಳಮಹಾರಾಜನಿಗೆ ಹಾಲೇ ಇಲ್ಲದಾಯಿತು. ಆಗ ರಾಣಿಯು ಗೋಪಾಲಕನನ್ನು ಕರೆದು ಶಿಕ್ಷಿಸಿ,ಪುನಃ ಈ ರೀತಿ ಆಗದಂತೆ ಎಚ್ಚರವಹಿಸು ಎಂದು ಆಜ್ಞಾಪಿಸಿದಳು. ಆದರೆ ಆ ಹಸು ಕರು ಪುನಃ ಅದೇ ಹುತ್ತದ ಬಳಿಗೆ ಬಂದು ಶ್ರೀಹರಿಗೆ ಹಾಲನ್ನು ಕೊಡಲು ಆರಂಭಿಸಿತು.ಇದನ್ನು ಒಮ್ಮೆ ಗೋಪಾಲಕನು ಕಂಡು ತನ್ನ ಕೊಡಲಿಯಿಂದ ಹಸುವನ್ನು ಹೊಡೆಯಲು ಬಂದಾಗ, ಶ್ರೀ ಹರಿಯು ಹುತ್ತದ ಮೇಲಿಂದ ಎದ್ದು ಕೊಡಲಿಗೆ ತನ್ನ ದೇಹವನ್ನೇ ಒಡ್ಡಿ ಆ ಗೋವನ್ನು ರಕ್ಷಿಸಿದನು. ಶ್ರೀ ಹರಿಗೆ ರಕ್ತ

ಸ್ರಾವವೇ ಉಂಟಾಯಿತು. ಇದನ್ನು ಕಂಡ ಗೋಪಾಲಕನು ಮೂರ್ಛೆ ಬಿದ್ದು ಮರಣಹೊಂದಿದನು. ಆಗ ಆ ಹಸು - ಕರು ಗಾಬರಿಗೊಂಡು ಚೋಳರಾಜನ ಬಳಿಗೆ ಹೋಗಿ ''ಅಂಬಾ ಅಂಬಾ ಎನ್ನುತ್ತಾ ಕಣ್ಣೀರಿಡ ತೊಡಗಿದವು.ರಾಜನು ಆ ಗೋವುಗಳನ್ನು ಸಮಾಧಾನ ಪಡಿಸಿ ಅವುಗಳೊಂದಿಗೆ ಶ್ರೀ ಹರಿಯು ತಪಸ್ಸನ್ನು ಆಚರಿಸುತ್ತಿದ್ದ ಹುತ್ತದ ಬಳಿಗೆ ಬಂದನು. ಅವನನ್ನು ಕಂಡು ಶ್ರೀಹರಿಯು, ಗೋಪಾಲಕನ ಸಾವಿಗೆ ನೀನೆ ಕಾರಣ ನಿನಗೆ ಪಿಶಾಚ ಜನ್ಮ ಬರಲಿ ಎಂದು ಶಾಪವಿತ್ತನು, ಆಗ ಚೋಳರಾಜನು ಶ್ರೀ ಹರಿಯನ್ನು ಅನಾಥ ರಕ್ಷಕಾ ! ಆಪದ್ಬಾಂಧವಾ! ನನ್ನನ್ನು ಕಾಪಾಡು ಕಾಪಾಡು ಎಂದು ಪ್ರಾರ್ಥಿಸಿದನು. ಕರುಣಾಕರನಾದ ಶ್ರೀಹರಿಯು ಭೂಲೋಕದಲ್ಲಿ ನಡೆಯುವ ನನ್ನ ಮತ್ತು ಪದ್ಮಾವತಿಯ ಕಲ್ಯಾಣೋತ್ಸವದ ಸಮಯದಲ್ಲಿ ನಿನ್ನ ಶಾಪವಿಮೋಚನೆಯಾಗುತ್ತದೆ ಎಂದು ಹೇಳಿದನು. ಶ್ರೀನಿವಾಸನು ತನ್ನ ತಲೆಗೆ ಆದ ಗಾಯಕ್ಕೆ ಔಷಧಿ ತರಲು ವರಾಹಗಿರಿ ಎಂಬಲ್ಲಿಗೆ ಬಂದನು. ಅಲ್ಲಿ ವರಾಹಸ್ವಾಮಿಯು ಶ್ರೀಹರಿಯನ್ನು ಕುಶಲಪ್ರಶ್ನೆಗಳನ್ನು ಕೇಳಿದನು. ಶ್ರೀಹರಿಯು ಮಹಾಲಕ್ಷ್ಮಿ ಕೋಪಿಸಿಕೊಂಡು ಕೊಲ್ಹಾಪುರಕ್ಕೆ ಹೋಗಿ ನೆಲೆಸಿರುವುದರ ಬಗ್ಗೆ ವಿಷದವಾಗಿ ತಿಳಿಸಿದನು.

ಶ್ರೀ ಹರಿಯು ಹಿಂದೆ ಕೃತಯುಗದಲ್ಲಿ ಹಿರಣ್ಯಾಕ್ಷನಿಂದ ಭೂದೇವಿಯನ್ನು ರಕ್ಷಿಸಲು ಅವತರಿಸಿದ ನೆನಪುಗಳನ್ನು ಸ್ಮರಿಸುತ್ತಿದ್ದನು. ವರಾಹಸ್ವಾಮಿಯ ಅವತಾರ ಮುಗಿದರೂ ಭೂಮಿಯಲ್ಲಿ ಇರುವ ಕಾರಣವನ್ನು ಕೇಳಿದನು. ಅದಕ್ಕೆ ವರಾಹನು ತನ್ನ ಒಂದು ಅಂಶ ಈ ಭೂಮಿಯನ್ನು ಬಿಡಲು ಇಷ್ಟಪಡದೆ ಈ ವರಾಹಗಿರಿಯಲ್ಲಿಯೇ ಉಳಿದುಕೊಂಡಿರುವೆ ಎಂದು ಕೇಳಿದನು. ಶ್ರೀ ಹರಿಯು ತನಗಾದ ಹಣೆಯ ಗಾಯಕ್ಕೆ ಔಷಧಿ ಬೇಕಾಗಿದೆ ಎಂದು ಕೇಳಿದನು. ಅದಕ್ಕೆ ವರಾಹನು ತನ್ನ ಒಂದು ಕಥೆಯನ್ನು ಹೇಳಿದನು. ಹಿಂದಿನ ಜನ್ಮದಲ್ಲಿ ಯಶೋದೆಯು ಕೃಷ್ಣನ ಬಾಲಲೀಲೆಗಳನ್ನು ಕಂಡು ಕೃತಾರ್ಥಳಾಗಿದ್ದಳು ದ್ವಾಪಯುಗದಲ್ಲಿ ಸಾಕುತಾಯಿ ಯಶೋದೆಯಾಗಿದ್ದಳು. ಆಗ ಅವಳಿಗೆ ಕೃಷ್ಣನ ಮದುವೆಯನ್ನು ನೋಡುವ ಭಾಗ್ಯ ಸಿಗಲಿಲ್ಲ ಆದ್ದರಿಂದ ಈ ಕಲಿಯುಗದಲ್ಲಿ ಆ ಯಶೋದೆಯೇ ಬಕುಳಾದೇವಿಯಾಗಿ ಅವತರಿಸಿ ವೆಂಕಟೇಶ - ಪದ್ಮಾವತಿಯರ ಮದುವೆಯನ್ನು ನಡೆಸಿಕೊಡುವಳು ಎಂದೂ ಸಹ ವರಾಹಸ್ವಾಮಿಯು ತಿಳಿಸಿದನು. ಬಕುಳಾ ದೇವಿಯನ್ನು ವರಾಹಸ್ವಾಮಿಯು ಕರೆದು ಶ್ರೀಹರಿಯ ಸೇವೆಯನ್ನು ಮಾಡುತ್ತಿರು ಎಂದು ಹೇಳಿದನು. ಅಷ್ಟೇ ಅಲ್ಲ. ವರಾಹನು ''ಕಲಿಯುಗದ ನಿಯಮದಂತೆ ನನಗೆ ಈ ಸ್ಥಳದ ಕ್ರಯವನ್ನು ಕೊಡಬೇಕು '' ಎಂದನು. ಇದಕ್ಕೆ ಶ್ರೀಹರಿಯು ಒಪ್ಪಿ 'ಶ್ರೀನಿವಾಸ' ಎಂಬ ಹೆಸರಿನಿಂದ ನಾನು ಈ ಜಾಗದಲ್ಲಿಯೇ ಇದ್ದು ಈ ಸ್ಥಳವನ್ನು ಭೂವೈಕುಂಠವನ್ನಾಗಿ ಮಾಡುತ್ತೇನೆ ಎಂದು ಹೇಳಿದನು. ಅಷ್ಟೇ ಅಲ್ಲ ಭಕ್ತರು ಮೊದಲು ನನ್ನ ದರ್ಶನವನ್ನು ಮಾಡಬೇಕು ಎಂದೂ ವರಾಹ ಸ್ವಾಮಿಯು ಶ್ರೀಹರಿಗೆ ಹೇಳಿದನು. ಈ ವೃತ್ತಾಂತವನ್ನು ಅರಿತ ಅನೇಕ ಭಕ್ತರು ಇಂದಿಗೂ ಮೊದಲು ವರಾಹಸ್ವಾಮಿಯ ದರ್ಶನವನ್ನು ಪಡೆದು ನಂತರ ಶ್ರೀನಿವಾಸನನ್ನು ದರ್ಶಿಸುವರು. ನೈವೇದ್ಯವಾಗಲೀ, ಕ್ಷೀರಾಭಿಷೇಕವಾಗಲಿ ಮೊದಲು ವರಾಹಸ್ವಾಮಿಗೆ ನಡೆಸಿದ ನಂತರ ಶ್ರೀನಿವಾಸರಿಗೆ ಮಾಡುವ ಪದ್ಧತಿ ಇಂದಿಗೂ ಇದೆ.

ಶ್ರೀನಿವಾಸನು ತಾಯಿ ಬಕುಳಾದೇವಿಯಿಂದ ಚೆನ್ನಾಗಿ ಸೇವೆ ಮಾಡಿಸಿಕೊಳ್ಳುತ್ತಿದ್ದನು. ಪ್ರತಿದಿನವೂ ರುಚಿರುಚಿಯಾದ ಭಕ್ಷ್ಯಗಳನ್ನು ತಿಂದು ತಾಯಿಯನ್ನು ತೃಪ್ತಿಪಡಿಸುತ್ತಿದ್ದನು. ಶ್ರೀನಿವಾಸನಿಗೆ ಒಮ್ಮೆ ದುಷ್ಟಮೃಗದ ಬೇಟೆಯಾಡಬೇಕೆಂಬ ಬಯಕೆ ಉಂಟಾಯಿತು. ಅಷ್ಟರಲ್ಲಿಯೇ ಸಾಕ್ಷಾತ್ ವಾಯುದೇವನೇ ಕುದುರೆಯಾಗಿ ಆತನ ಬಳಿ ಬಂದನು. ಶ್ರೀನಿವಾಸನು ಬೇಟೆಗಾಗಿ ಹೊರಡಲು ಸುಗಂಧ ದ್ರವ್ಯಗಳಿಂದ ಲೇಪನಮಾಡಿಕೊಂಡು ಸಿಂಗರಿಸಿಕೊಂಡು ಹೊರಟನು . ಕೈಯಲ್ಲಿ ಬಿಲ್ಲುಬಾಣ ಹಿಡಿದು ಸಾಕ್ಷಾತ್ ಮನ್ಮಥನಂತೆ ಅವನು ಕಾಣುತ್ತಿದ್ದನು. ದೇವಮಣಿ ಎಂಬ ಪ್ರಶಸ್ತವಾದ ಅಶ್ವ ಲಕ್ಷಣಗಳಿಂದ ಕೂಡಿದ ನೀಲವರ್ಣದ ಕುದುರೆಯನ್ನು ಏರಿಕೊಂಡು ಶ್ರೀನಿವಾಸನು ಬೇಟೆಗೆ ಹೊರಟನು. ಕಾಡಿನಲ್ಲಿದ್ದ ಸಿಂಹ, ವ್ಯಾಘ್ರಗಳನ್ನು ಕೊಂದನು. ಅಲ್ಲಿಯೇ ಮದದಿಂದ ಕೂಡಿದ ಆನೆಯನ್ನು ಸಹ ಕಂಡನು ಅದನ್ನು ಕೊಲ್ಲುವುದಕ್ಕಾಗಿ ಶ್ರೀನಿವಾಸನು ಹಿಂಬಾಲಿಸಿಕೊಂಡು ಅದರ ಬೆನ್ನಟ್ಟಿ ಹೋದನು. ಬೆದರಿದ ಆನೆಯು ಬಹುದೂರ ಹೋಯಿತು. ಅದನ್ನೆ ಬೆನ್ನಟ್ಟುತ್ತಾ ಶ್ರೀನಿವಾಸನು ಮುಂದೆ ಸಾಗಿದನು.ಬಹಳ ದೂರದಲ್ಲಿ ಕನ್ಯೆಯರು ಕಾಣಿಸಿದರು. ಆ ಪ್ರದೇಶವು ತೊಂಡದೇಶಕ್ಕೆ ದೊರೆಯಾದ ಆಕಾಶರಾಜನ ರಾಜ್ಯಕ್ಕೆ ಸೇರಿದ್ದಾಗಿದ್ದಿತು. ಕಿರಿಯ ಸಹೋದರ ತೊಂಡಮಾನನೊಂದಿಗೆ ಹುಟ್ಟಿದ ರಾಜಕುಮಾರರು ಧರ್ಮನಿಷ್ಠರಾಗಿ ಶ್ರೀಮಹಾವಿಷ್ಣುವಿನ ಪರಮಭಕ್ತರಾಗಿ ಯಾವಾಗಲೂ ನಾರಾಯಣ ಸ್ಮರಣೆ ಮಾಡುತ್ತಾ ರಾಜ್ಯವನ್ನು ಆಳುತ್ತಿದ್ದನು.

ಆಕಾಶರಾಜನಿಗೆ ಬಹಳ ಕಾಲದವರೆಗೂ ಮಕ್ಕಳಾಗಿರಲಿಲ್ಲ. ಇದರಿಂದಾಗಿ ಅವನು ಬಹಳ ದುಃಖಿತನಾಗಿದ್ದನು. ರಾಜನು ತನ್ನ ಅಳಲನ್ನು ರಾಜಗುರುವಿನಲ್ಲಿ ತೋಡಿಕೊಂಡನು. ಗುರುವು ಅವನಿಗೆ ಯಾಗ ಮಾಡಲು ನಿರ್ದೇಶಿಸಿದರು. ಗುರುವಿನ ಸಲಹೆಯಂತೆ ರಾಜನು ಭೂಮಿಯನ್ನು ಶೋಧಿಸುತ್ತಿದ್ದನು.ಚಿನ್ನದ ನೇಗಿಲಿನಿಂದ ಭೂಮಿಯನ್ನು ಶೋಧಿಸುತ್ತಿರುವಾಗ ಒಂದು ಹೆಣ್ಣುಮಗುವನ್ನು ಕಂಡನು.ಇದು ಆ ಭಗವಂತನೇ ಕೊಟ್ಟ ವರಪ್ರಸಾದವೆಂದು ತಿಳಿದು ಸಾಕಿ ಸಲಹಿದನು.ಆ ಮಗುವಿಗೆ ಪದ್ಮಾವತಿ ಎಂದು

ನಾಮಕರಣ ಮಾಡಿದನು. ಕಾಲಕಳೆದಂತೆ ಆ ರಾಜನಿಗೆ ಗಂಡು ಮಗು ಜನಿಸಿತು. ಆ ಮಗುವಿಗೆ ವಸುದಾ ಎಂಬ ನಾಮಕರಣ ಮಾಡಿದನು. ಅಯೋನಿಜೆಯಾಗಿ ಬಂದ ಆ ಹೆಣ್ಣು ಮಗುವೇ ಪದ್ಮಾವತಿ ಇಂದು ಬೆಳೆದು ರಾಜಕುಮಾರಿಯಾಗಿ ಬಂದಿದ್ದಳು ಶ್ರೀನಿವಾಸನನ್ನು ಕಂಡಳು. ಶ್ರೀನಿವಾಸನು ಬೇಟೆಯಾಡುವುದನ್ನು ಮರೆತು ಕನ್ಯೆಯರ ಮಧ್ಯ ರಾಜಕೂಮಾರಿಯಂತೆ ಕಂಗೊಳಿ ಸುತ್ತಿದ್ದ ಪದ್ಮಾವತಿಯನ್ನೇ ದಿಟ್ಟಿಸಿ ನೋಡುತ್ತಿದ್ದನು.ಆ ಆನೆಯು ಸೊಂಡಿಲನ್ನೆತ್ತಿ ಶ್ರೀನಿವಾಸನಿಗೆ ನಮಸ್ಕರಿಸಿ ಎಲ್ಲೋ ಕಾಡಿನಲ್ಲಿ ಮರೆಯಾಯಿತು.ಇತ್ತ ಶ್ರೀನಿವಾಸನನ್ನು ಕಂಡ ಪದ್ಮಾವತಿಯು ಮೋಹಗೊಂಡು ಆತನ ಪೂರ್ವಾಪರವನ್ನು ವಿಚಾರಿಸಲು ತನ್ನ ಗೆಳತಿಯರಿಗೆ ತಿಳಿಸಿದಳು. ರಾಜಕುಮಾರಿಯ ಮಾತಿನಂತೆ ಗೆಳತಿಯರು ಶ್ರೀನಿವಾಸನ ಬಗ್ಗೆ ಎಲ್ಲವನ್ನೂ ಕೇಳಿ ಪದ್ಮಾವತಿಗೆ ಅರುಹಿದರು. ಶ್ರೀನಿವಾಸನನ್ನು ವಿವಾಹವಾಗಬೇಕೆಂಬ ಇಚ್ಛೆಯನ್ನು ಪದ್ಮಾವತಿಯು ತನ್ನ ತಂದೆಗೂ ಅರುಹಿದಳು. ರಾಜನಿಗೆ ಇದೇ ಒಂದು ಸಂತಸದ ಹಬ್ಬವಾಯಿತು. ತಂದೆ ಆಕಾಶರಾಜನು ಪದ್ಮಾವತಿ ವಿವಾಹಕ್ಕೆ ಸಕಲ ಸಿದ್ಧತೆಗಳನ್ನು ಮಾಡತೊಡಗಿದನು.

ಇತ್ತ ಶ್ರೀನಿವಾಸನಿಗೂ ಪದ್ಮಾವತಿಯೊಡನೆ ವಿವಾಹವಾಗುವ ಸಂಭ್ರಮವೋ ಸಂಭ್ರಮ. ಈ ಸಂದರ್ಭದಲ್ಲಿ ಶ್ರೀನಿವಾಸನು ಸಾಮಾನ್ಯ ಮನುಷ್ಯರಂತೆ ಲೌಕಿಕರಂತೆಯೇ ನಡೆದುದನ್ನು ಕೇಳಿದರೇನೆ ಆನಂದವುಂಟಾಗುತ್ತದೆ. ಮದುವೆ ಮಾಡಿಕೊಳ್ಳಲು ಹಣದ ಅವಶ್ಯಕತೆ ಇದ್ದೇ ಇರುತ್ತದೆ ಅಲ್ಲವೇ? ಅದಕ್ಕಾಗಿ ಲೌಕಿಕರಂತೆ ಶ್ರೀನಿವಾಸನು ಸ್ವಾಮಿ ಪುಷ್ಕರಿಣಿ ತೀರ್ಥದ ಬಳಿ ಇರುವ ಅಶ್ವತ್ಥವೃಕ್ಷದ ಹತ್ತಿರ ಕುಬೇರನನ್ನು ಕರೆಯಿಸಿದನು. ಜೊತೆಗೆ ಬ್ರಹ್ಮರುದ್ರರನ್ನು ಅಲ್ಲಿಗೆ ಕರೆಸಿದನು. ಕುಬೇರನ ಬಳಿ ಮದುವೆಗಾಗಿ ಸಾಲದ ಪ್ರಸ್ತಾಪ ಮಾಡಿದನು. ಕುಬೇರನು ವಿಧಿಸಿದ ಷರತ್ತುಗಳಿಂದ ಕೂಡಿದ ಪತ್ರವನ್ನು ಶ್ರೀನಿವಾಸನಿಗೆ ಬರೆದುಕೊಟ್ಟನು. ಕಲಿಯುಗದ ಒಂದು ಸಾವಿರ ವರ್ಷ ಕಳೆಯುವುದರೊಳಗಾಗಿ ಹದಿನಾಲ್ಕು ಲಕ್ಷ ರಾಮಟಂಕೆ ವರಾಹ (ನಾಣ್ಯ)ವನ್ನು ಹಿಂತಿರುಗಿಸಬೇಕೆಂದು ನಿಯಮಕ್ಕೆ ಒಳಪಟ್ಟು ಶ್ರೀನಿವಾಸನು ಕುಬೇರನಿಂದ ಹಣಪಡೆದನು. ವಸಿಷ್ಠರು ಶಾಸ್ತ್ರೋಕ್ತವಾಗಿ ಸಂಕಲ್ಪದ ಜೊತೆಗೆ ವಿವಾಹ ಮಹೋತ್ಸವವನ್ನು ನಡೆಸಲು ಉದ್ಯುಕ್ತರಾದರು. ಕುಲದೇವರಾದ ಶಮೀವೃಕ್ಷವನ್ನು ಪ್ರಾರ್ಥಿಸಬೇಕೆಂದು ವಸಿಷ್ಠರು ಶ್ರೀನಿವಾಸನಿಗೆ ಸೂಚಿಸಿದರು. ಅದರಂತೆ ಲೌಕಿಕರಂತೆ ಶ್ರೀನಿವಾಸನು ನಟಿಸುತ್ತಾ ತನ್ನ ಮದುವೆಗೆ ಅಪ್ಪಣೆ ಪಡೆದು ಚಿಕ್ಕರೆಂಬೆಯನ್ನು ಕತ್ತರಿಸಿಕೊಂಡು ವರಾಹ ದೇವನ ಸಮೀಪದಲ್ಲಿ ಆ ಕೊಂಬೆಯನ್ನು ಸ್ಥಾಪಿಸಿದರು.

ಇತ್ತ ಆಕಾಶರಾಜನು ಮದುವೆಗೆ ಸಂಬಂಧಪಟ್ಟಂತೆ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದನು. ಸಕಲ ವಿಧದಲ್ಲಿಯೂ ಮಗಳಿಗೆ ಅಲಂಕಾರ ಮಾಡಿಸಿ ಆನೆಯ ಮೇಲೆ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಆಕಾಶರಾಜನು. ತನ್ನ ಪತ್ನಿಯೊಡನೆ ಬಂದನು. ತೊಂಡರಾಯ, ಇಂದ್ರನೊಂದಿಗೆ ಮದುವೆಯ ದಿಬ್ಬಣವನ್ನು ಸ್ವಾಗತಿಸಲು ಬಂದನು. ಶ್ರೀನಿವಾಸನಿಗೆ ನಾರದಮುನಿಯು ಮಾವನಾದ ಆಕಾಶರಾಜನನ್ನು ತೋರಿಸಿದನು. ಪದ್ಮಾವತಿಯೂ ಸಹ ಅತ್ಯಂತ ನಾಚಿಕೆಯಿಂದ ಶ್ರೀನಿವಾಸನ್ನು ನೋಡಿದಳು. ಆಕಾಶರಾಜನು ನಾರಾಯಣಪುರದಲ್ಲಿ ಭವ್ಯವಾದ ಬಿಡಾರವನ್ನು ಇವರಿಗಾಗಿ ನಿರ್ಮಿಸಿದ್ದನು. ಶ್ರೀನಿವಾಸನನ್ನು ಸೂಕ್ತಸಮಯಕ್ಕೆ ವಸಿಷ್ಠರು ಮದುವೆಯ ದಿಬ್ಬಣವನ್ನು ಕರೆದು ಕೊಂಡು ಆಕಾಶರಾಜನ ಅರಮನೆಗೆ ಬಂದರು. ಶ್ರೀನಿವಾಸನು ರತ್ನ ಪೀಠದಲ್ಲಿ ಕುಳಿತುಕೊಂಡನು. ಬ್ರಾಹ್ಮಣರು ವೇದೋಕ್ತ ಮಂತ್ರಗಳನ್ನು ಪಠಿಸುತ್ತಿದ್ದರು. ಸಿಂಗಾರವನ್ನು ಮಾಡಿಕೊಂಡು ಒಡವೆಯಿಂದ ಅಲಂಕರಿಸಿಕೊಂಡು ಬಂದ ಪದ್ಮಾವತಿಯನ್ನು ಹಸೆಮಣೆಯ ಮೇಲೆ ಕೂರಿಸಿದರು. ವಸಿಷ್ಠರು ಪ್ರವರವನ್ನು ಹೇಳಿದರು. ನಂತರ ಕನ್ಯಾದಾನ ಮಾಂಗಲ್ಯಧಾರಣೆ ಮುಂತಾದ ವಿಧಿವಿಧಾನಗಳು ನಡೆದವು. ನವದಂಪತಿಗಳಿಗೆ ಅಕ್ಷತೆಯನ್ನು ದೇವಾನುದೇವತೆಗಳು ಮಹರ್ಷಿಗಳು ಹಾಕಿ ಆಶೀರ್ವದಿಸಿದರು. ಆಕಾಶರಾಜನು ಬ್ರಹ್ಮವಿಚಾರ ಪರರಾದ ಬ್ರಾಹ್ಮಣರಿಗೂ ಹಾಗೂ ಮತ್ತಿತರರಿಗೂ ಫಲತಾಂಬೂಲವನ್ನು ದಕ್ಷಿಣೆಯನ್ನು ಕೊಟ್ಟನು. ಜೊತೆಗೆ ಸಾವಿರ ಕೋಟಿ ಹಸುಗಳನ್ನು ವಸ್ತ್ರಗಳನ್ನು ದಾನವಾಗಿ ಕೊಟ್ಟನು.ಹೀಗೆ ಶ್ರೀನಿವಾಸ, ಪದ್ಮಾವತಿಯರ ವಿವಾಹ ಮಹೋತ್ಸವ ಆಕಾಶರಾಜನ ಅರಮನೆಯಲ್ಲಿ ದಶಮಿಯದಿನ ವಿಜೃಂಭಣೆಯಿಂದ ಜರುಗಿತು.ಆಕಾಶರಾಜನು ಮದುವೆಗೆ ಬಂದಿದ್ದ ಎಲ್ಲ ದೇವತೆಗಳಿಗೂ ಪುರದ ಜನರಿಗೂ ಕ್ರಮವಾಗಿ ಮರ್ಯಾದೆ ಮಾಡಿ ಭೋಜನ ಮಾಡಿಸಿದನು. ಈ ಮದುವೆಯ ಸಂಭ್ರಮ ನಾಲ್ಕು ದಿನಗಳವರೆಗೆ ನಡೆಯಿತು. ನಂತರ ಪದ್ಮಾವತಿಯೊಡನೆ ಸಮಸ್ತ ದೇವತೆಗಳನ್ನು ಕೂಡಿಕೊಂಡು ಶ್ರೀನಿವಾಸನು ಸ್ವಸ್ಥಾನಕ್ಕೆ ಹೊರಟು ಹೋದನು.

**ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇರ್ಥಿನಾಂ**
**ಶ್ರೀ ವೆಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಂ**

# ಕರ್ನಾಟಕದ ಆದಿ, ಮಧ್ಯ ಹಾಗೂ ಅಂತ್ಯ ಸುಬ್ರಹ್ಮಣ್ಯ ಕ್ಷೇತ್ರಗಳು

-ಡಾ|| ಪ್ರಕಾಶ್.ಕೆ.ನಾಡಿಗ್

98455 29789

ಮಾರ್ಗಶಿರ ಮಾಸದಲ್ಲಿ ಬರುವ ಷಷ್ಠಿ ದಿನವನ್ನು ಚಂಪಾಷಷ್ಠಿ,ಸ್ಕಂದಷಷ್ಠಿ ಎಂದು ಕರೆಯುತ್ತಾರೆ.ಇದನ್ನು ಕುಕ್ಕೆಯಲ್ಲಿ "ಕುಕ್ಕೆ ಷಷ್ಠಿ"ಎಂದೇ ಪ್ರಸಿದ್ಧ. ಇದು ಸುಬ್ರಹ್ಮಣ್ಯ ದೇವರಿಗೆ ಅತ್ಯಂತ ಪ್ರಿಯವಾದ ದಿನವೆಂದೇ ಪ್ರತೀತಿ. ನಾಗ ಕ್ಷೇತ್ರಗಳಲ್ಲಿ ಈ ಚಂಪಾ ಷಷ್ಠಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.ಚಂಪಾ ಷಷ್ಠಿಯ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿರುವ ಪ್ರಸ್ಥಿದ್ಧ ಆದಿ, ಮಧ್ಯ ಹಾಗೂ ಅಂತ್ಯ ಸುಬ್ರಹ್ಮಣ್ಯ ದೇವಾಲಯದ ಪೌರಾಣಿಕ ಹಿನ್ನಲೆ, ಆಚರಣೆ ಹಾಗೂ ಮಹಿಮೆಯ ಬಗ್ಗೆ ತಿಳಿದುಕೊಳ್ಳೋಣ.



## ಕುಕ್ಕೆ- ಆದಿ ಸುಬ್ರಹ್ಮಣ್ಯ ಕ್ಷೇತ್ರ

ಕರ್ನಾಟಕದ ಪ್ರಸಿದ್ಧ ನಾಗ ಕ್ಷೇತ್ರಗಳಲ್ಲಿ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಅಗ್ರಸ್ಥಾನ.ಜಾತಿ ಮತ ಪಂಥದ ಭೇದವಿಲ್ಲದೇ ಭಕ್ತರು ಇಲ್ಲಿಗೆ ಬಂದು ಸ್ವಾಮಿಗೆ ಸೇವೆ ಸಲ್ಲಿಸಿ ಕೃತಾರ್ಥರಾಗುತ್ತಾರೆ.

## ಪೌರಾಣಿಕ ಹಿನ್ನಲೆ

ಪರಶುರಾಮರು ಸ್ಥಾಪಿಸಿದ ಏಳು ಪವಿತ್ರ ಕ್ಷೇತ್ರಗಳಲ್ಲಿ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವೂ ಸಹ ಒಂದು. ಕುಮಾರಧಾರ ನದಿ ತೀರದಲ್ಲಿರುವ ಶ್ರೀಕ್ಷೇತ್ರದಲ್ಲಿ ತಾರಕಾದಿ ಅಸುರರನ್ನು ಯುದ್ಧದಲ್ಲಿ ಸಂಹರಿಸಿದ ಕುಮಾರಸ್ವಾಮಿಯು ತನ್ನ ತಮ್ಮನಾದ ಗಣೇಶನೊಂದಿಗೆ ಕುಮಾರ ಪರ್ವತ ಕ್ಷೇತ್ರಕ್ಕೆ ಬರುತ್ತಾನೆ. ಆಗ ದೇವೇಂದ್ರನು ತನ್ನ ಮಗಳಾದ ದೇವಸೇನೆಯನ್ನು ಕುಮಾರ ಸ್ವಾಮಿಗೆ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಕುಮಾರಧಾರ ನದಿ ತೀರದಲ್ಲಿ ಧಾರೆ ಎರೆದು ಕೊಟ್ಟನೆಂದು ಪ್ರತೀತಿ. ಇದೇ ಸಮಯದಲ್ಲಿ ಇದೇ ಪರ್ವತದ ತಪ್ಪಲಿನಲ್ಲಿ ತಪಸ್ಸನ್ನಾಚರಿಸುತ್ತಿದ್ದ ನಾಗರಾಜನಾದ ವಾಸುಕಿಯ ಪ್ರಾರ್ಥನೆಗೆ ಓಗೊಟ್ಟು ತಾನು ದೇವಸೇನಾ ಸಮೇತನಾಗಿ ಒಂದಂಶದಿಂದ ವಾಸುಕಿಯಲ್ಲಿ ಸನ್ನಿಹಿತನಾಗಿ ಈ ಪವಿತ್ರಕ್ಷೇತ್ರದಲ್ಲಿ ನೆಲೆಸುವುದಾಗಿ ಹರಸಿ ಅಂದಿನಿಂದ ನಾಗರಾಜನ ರೂಪದಲ್ಲಿ ಇಲ್ಲಿ ನೆಲೆಸಿ ಭಕ್ತರ ಸಂಕಷ್ಟಗಳನ್ನು ಪರಿಹರಿಸುತ್ತಿದ್ದಾನೆ. ಶ್ರೀಕ್ಷೇತ್ರದ ಆದಿದೇವತೆಯಾಗಿ ಶ್ರೀಸುಬ್ರಹ್ಮಣ್ಯ ದೇವರು ನೆಲೆನಿಂತಿರುವ ಈ ಕ್ಷೇತ್ರವನ್ನು ಗುಪ್ತ ಕ್ಷೇತ್ರವೆಂದೂ,ಆದಿ ಸುಬ್ರಹ್ಮಣ್ಯ ಕ್ಷೇತ್ರವೆಂದೂ ಕರೆಯುತ್ತಾರೆ. ಶ್ರೀಸ್ಕಂದ ಪುರಾಣದ ಸನತ್‌ಕುಮಾರ ಸಂಹಿತೆಯಲ್ಲಿ ಶ್ರೀ ಷಣ್ಮುಕ ಸ್ವಾಮಿಯು ತಾರಕಾದಿ ಮಹಾ ಅಸುರರನ್ನು ನಿಗ್ರಹಿಸಿ ತಮ್ಮ ಆಯುಧಗಳ ಧಾರೆಯನ್ನು ಇಲ್ಲಿರುವ ತೀರ್ಥದಲ್ಲಿ ತೊಳೆದುದರಿಂದ ಇದಕ್ಕೆ ಕುಮಾರಧಾರ ತೀರ್ಥವೆಂದು ಹೆಸರು ಬಂತೆಂದು ಪ್ರತೀತಿ. ಶ್ರೀಆದಿ ಶಂಕರಾಚಾರ್ಯರು ದಿಗ್ವಿಜಯಕ್ಕಾಗಿ ಇಲ್ಲಿಗೆ ಬಂದು ಕೆಲವು ದಿನ ವಾಸ ಮಾಡಿದ್ದರೆಂದೂ ಆನಂದವಿರಚಿತ "ಶಂಕರ ವಿಜಯ" ದಲ್ಲಿ ತಿಳಿದು ಬರುತ್ತದೆ.

## ಕ್ಷೇತ್ರ ಮಹಿಮೆ

ಪಂಚೇಂದ್ರಿಯಗಳ ಆರೋಗ್ಯದಿಂದ ಇರಬೇಕಾದರೆ ಸುಬ್ರಹ್ಮಣ್ಯನ ಆರಾಧಿಸಬೇಕೆಂದು ಹೇಳುತ್ತಾರೆ. ಚರ್ಮವ್ಯಾಧಿಯಿಂದ ಬಳಲುತ್ತಿರುವವರು, ಔಷಧಗಳಿಂದ ವಾಸಿಯಾಗದ ರೋಗಗಳಿಂದ ನರಳುತ್ತಿರುವವರು,ಸಂತಾನವಿಲ್ಲದವರು, ಗಂಡು ಸಂತಾನಬೇಕೆಂದು ಬೇಡುವವರು,ಜಾತಕದಲ್ಲಿ ಸರ್ಪದೋಷ ಹಾಗೂ ಕಾಳ ಸರ್ಪದೋಷ ಇದ್ದವರು, ಅನಾರೋಗ್ಯ, ಕಂಕಣಭಾಗ್ಯ ಕೂಡಿ ಬರದೇ ಇದ್ದವರು ಇಲ್ಲಿಗೆ ಬಂದು ತಮ್ಮ ಹರಕೆಯನ್ನು ಪೂರೈಸಿ ಸೇವಾ ಕೈಂಕರ್ಯಗಳನ್ನು ಪೂರೈಸಿ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡ ಲಕ್ಷಾಂತರ ಭಕ್ತರಿದ್ದಾರೆ. ದೇಶ ವಿದೇಶಗಳಿಂದಲೂ ಇಲ್ಲಿಗೆ ಭಕ್ತರು ಬರುವುದನ್ನು ಕಾಣಬಹುದು."ಕುಮಾರಧಾರೆಯಲ್ಲಿ ಮಿಂದೆವು, ಕುಕ್ಕೆ ಲಿಂಗವ ಕಂಡೆವು,ಕೊಪ್ಪರಿಗೆ ಅನ್ನ ಉಂಡೇವು" ಎಂಬುದು ಇಲ್ಲಿಯ ಪ್ರಸಿದ್ಧ ನಾಣ್ಣುಡಿ. ಇಲ್ಲಿಗೆ ಬಂದು ಕುಮಾರಧಾರದಲ್ಲಿ ಮಿಂದು, ಸುಬ್ರಹ್ಮಣ್ಯನ ದರ್ಶನ

ಮಾಡಿ ಸೇವೆ ಮಾಡಿ, ಇಲ್ಲಿ ಅನ್ನ ಪ್ರಸಾದ ವನ್ನು ತಿಂದರೆ ಸುಬ್ರಹ್ಮಣ್ಯ ಹರಸುತ್ತಾನೆ ಎಂಬ ನಂಬಿಕೆ ಯಿದೆ. ಮೂಲ ಮೃತ್ತಿಕೆ ಅಂದರೆ ಹುತ್ತದ ಮಣ್ಣು ಇಲ್ಲಿಯ ಪವಿತ್ರ ಪ್ರಸಾದವಾಗಿರುತ್ತದೆ.

ಸರ್ಪ ಸಂಸ್ಕಾರ ಹಾಗೂ ನಾಗ ಪ್ರತಿಷ್ಠೆ ಕ್ಷೇತ್ರದಲ್ಲಿ ನಿತ್ಯ ನಡೆಯುವ ಸೇವೆಯಾಗಿದೆ. ದೇಶ ವಿದೇಶದಿಂದ ಇಲ್ಲಿಗೆ ಬರುವ ಭಕ್ತಾದಿಗಳು ಸರ್ಪ ಸಂಸ್ಕಾರ, ಆಶ್ಲೇಷಾ ಬಲಿ, ಮಡೆಸ್ನಾನ ಮುಂತಾದ ಸೇವೆಗಳನ್ನು ಮಾಡಿ ನಾಗದೋಷಗಳಿಂದ ಮುಕ್ತ ರಾಗಿ ಸುಖೀ ಜೀವನ ನಡೆಸುತ್ತಿರುವ ಅದೇಷ್ಟೋ ನಿದರ್ಶನಗಳುಂಟು. ಚಂಪಾಷಷ್ಠಿಯ ದಿನ ದಂದು ಸುಬ್ರಹ್ಮಣ್ಯದಲ್ಲಿ ಶ್ರೀಸ್ವಾಮಿಯನ್ನು ಶುಭ ಮುಹೂರ್ತದಲ್ಲಿ ಬ್ರಹ್ಮಾರಥಾರೋಹಣ ಮಾಡಿ ಸುತ್ತಾರೆ. ಈ ಸಂದರ್ಭದಲ್ಲಿ ಗರುಡ ಪಕ್ಷಿ ಬಂದು ರಥವನ್ನು ಮೂರು ಸುತ್ತು ಪ್ರದಕ್ಷಣೆ ಹಾಕುತ್ತದೆ ಎಂಬ ನಂಬಿಕೆ ಇದೆ. ಶ್ರೀಸ್ವಾಮಿಗೆ "ಅನ್ನದಾನ ಸುಬ್ಬಪ್ಪ" ನೆಂಬ ನಾಮಾಭಿಧಾನವಿದ್ದು ಶ್ರೀ ಕ್ಷೇತ್ರ ದಲ್ಲಿ ಭಕ್ತರಿಗೆ ನಿತ್ಯ ಅನ್ನಸಂತರ್ಪಣೆಯಿರುತ್ತದೆ.

## ಘಾಟಿ - ಮಧ್ಯ ಸುಬ್ರಹ್ಮಣ್ಯ ಕ್ಷೇತ್ರ

ಕರ್ನಾಟಕದಲ್ಲಿ ಕುಕ್ಕೆಯ ನಂತರದ ಸ್ಥಾನವನ್ನು ಘಾಟಿ ಸುಬ್ರಹ್ಮಣ್ಯ ಪಡೆದುಕೊಂಡಿದೆ. ಬೆಂಗಳೂರಿನಿಂದ ಐವತ್ತು ಕಿಲೋ ಮೀಟರ್ ದೂರದಲ್ಲಿರುವ ಈ ಕ್ಷೇತ್ರವೂ ಸಹ ನಾಗಾರಾಧ ನೆಯ ವಿಶೇಷ ಕೇಂದ್ರವಾಗಿದೆ. ಇಲ್ಲಿಗೂ ಸಹ ದೇಶದ ನಾನಾ ಮೂಲೆಗಳಿಂದ ತಮ್ಮ ಮದುವೆ, ವ್ಯವಹಾರ, ಆರೋಗ್ಯ ಮುಂತಾದ ಸಮಸ್ಯೆಗಳಿಂದ ಮುಕ್ತಿ ಪಡೆಯಲು ಭಕ್ತಸಾಗರವೇ ಹರಿದು ಬರುತ್ತದೆ. ಈ ಘಾಟಿ ಸುಬ್ರಹ್ಮಣ್ಯ ಕ್ಷೇತ್ರವನ್ನು "ಮಧ್ಯ ಸುಬ್ರಹ್ಮಣ್ಯ" ಎಂದೂ ಕರೆಯುತ್ತಾರೆ. ಇಲ್ಲೂ ಸಹ ಸರ್ಪ ರೂಪದಲ್ಲಿ ನೆಲೆ ನಿಂತಿರುವ ಸುಬ್ರಹ್ಮಣ್ಯ ಸರ್ಪದೋಷಗಳಿಂದ ಮುಕ್ತಿ ಕೊಡುತ್ತಾನೆ.

## ದೇಗುಲದ ಇತಿಹಾಸ

ಈ ಕ್ಷೇತ್ರಕ್ಕೆ ಸುಮಾರು 800 ವರ್ಷಗಳ ಇತಿ ಹಾಸವಿದೆ. ಈ ಕ್ಷೇತ್ರದ ವಿಶೇಷತೆ ಏನೆಂದರೆ ಇಲ್ಲಿ ಮುಂದೆ ಸುಬ್ರಹ್ಮಣ್ಯ ಸ್ವಾಮಿ ಹಾಗೂ ಸ್ವಾಮಿಯ ಹಿಂದುಗಡೆ ಶ್ರೀನರಸಿಂಹಸ್ವಾಮಿ ಯನ್ನು ಏಕಕಾಲದಲ್ಲಿ ದರ್ಶನ ಪಡೆಯಬಹುದು. ಸುಮಾರು 700 ವರ್ಷಗಳ ಹಿಂದೆ ವಿಲ್ಲೇದೆಲೆ ವ್ಯಾಪಾರಿಯೊಬ್ಬ ತನ್ನ ವ್ಯಾಪರವನ್ನು ಮುಗಿಸಿ ಈ ಮಾರ್ಗವಾಗಿ ಹೋಗುವಾಗ ಇಲ್ಲೇ ಊಟ ಮಾಡಿ, ಪಕ್ಕದಲ್ಲೇ ಹರಿಯುತ್ತಿದ್ದ ತೊರೆಯಲ್ಲಿ ನೀರು ಕುಡಿದು ಮರದ ಕೆಳಗೆ ಇದ್ದ ಬಂಡೆಯ ಮೇಲೆ ವಿಶ್ರಮಿಸುತ್ತಿದ್ದನಂತೆ, ಒಮ್ಮೆ ಹೀಗೆ ಮಲಗಿರುವಾಗ "ನೆರಳಾಗಿರುವ ಮರದಡಿಯ ಈ ಶಿಲೆಯ ಮೇಲೆ ಭಾರವಾಗಿ ಏಕೆ ಮಲಗಿರುವೆ ಎಳು ಎಳು"ಎಂಬ ಮಾತು ಕೇಳಿ ವ್ಯಾಪಾರಿಗೆ ಆಶ್ಚರ್ಯವಾಯಿತು. ಯಾವುದೋ ಭೂತ ಚೇಷ್ಟೇ ಇರಬೇಕೆಂದು ಸುಮ್ಮನಾಗುತ್ತಾನೆ. ಇದು ಹೀಗೆ ಪುನರಾವರ್ತನೆಯಾಗುತ್ತಿರುತ್ತದೆ. ಒಮ್ಮೆ ಹೀಗೆ ಹಬ್ಬದ ದಿನದಂದು ಇಲ್ಲಿ ಮಲಗಿರುವಾಗ ಸ್ವಾಮಿಯು ವ್ಯಾಪಾರಿಗೆ ಕನಸಿನಲ್ಲಿ ತನ್ನ ನಿಜಸ್ವರೂಪದಲ್ಲಿ ದರ್ಶನ ನೀಡಿ, ಈ ಶಿಲೆಗೆ 20 ಗಜ ಅಂತರದಲ್ಲಿ ನಾನು ನೆಲೆಸಿರುವುದಾಗಿಯೂ, ಇದನ್ನು ಬಳ್ಳಾರಿ ಜಿಲ್ಲೆಯ ಸಂಡೂರಿನ ನನ್ನ ಭಕ್ತನಾದ ಮಹಾರಾಜನಿಗೆ ತಿಳಿಸ ಬೇಕೆಂದು, ಅವರು ಇಲ್ಲಿ ನನಗಾಗಿ ಗುಡಿ ಕಟ್ಟಿಸುವರೆಂದು ಹೇಳಿ ಅದೃಶ್ಯನಾಗುತ್ತಾನೆ. ಈ ಸುದ್ದಿ ತಿಳಿದ ಸಂಡೂರಿನ ರಾಜ ಇಲ್ಲಿಗೆ ಬಂದು ಸ್ವಾಮಿಗೆ ಗರ್ಭಗುಡಿ ನಿರ್ಮಿಸಿ। ದರು. ಇಲ್ಲಿರುವ ಸುಬ್ರಹ್ಮಣ್ಯ ಸ್ವಯಂಭೂ ಮೂರ್ತಿಯಾಗಿದ್ದು ಸುಬ್ರಹ್ಮಣ್ಯ ಪೂರ್ವಾಭಿಮುಖವಾಗಿದ್ದರೆ ಸ್ವಾಮಿಯ ಹಿಂದುಗಡೆ ಪಶ್ಚಿಮಾಭಿಮುಖವಾಗಿ ಶ್ರೀ ನರಸಿಂಹ ದೇವರು ನೆಲೆಸಿ ಭಕ್ತರ ಅಭೀಷ್ಟೆಗಳನ್ನು ನೆರವೇರಿಸುತ್ತಿದ್ದಾರೆ. ಶ್ರೀನರಸಿಂಹ ದೇವರ ಮೂರ್ತಿಯನ್ನು ಇಲ್ಲಿರುವ ದೊಡ್ಡ ಕನ್ನಡಿಯಲ್ಲಿ ನೋಡಬಹುದಾಗಿದೆ. ಕಳೆದ ನೂರು ವರ್ಷಗಳಿಂದೀಚೆಗೆ ದೇವಸ್ಥಾನ ಹಲ ವಾರು ಅಭಿವೃದ್ಧಿಯನ್ನು ಕಂಡು ಭಕ್ತರ ಶ್ರದ್ಧಾ ಭಕ್ತಿಯ ಕೇಂದ್ರವಾಗಿದೆ.

## ಕ್ಷೇತ್ರ ಮಹಿಮೆ

ಚರ್ಮವ್ಯಾಧಿಗಳಿಂದ ಬಳಲುತ್ತಿರುವವರು, ಆರೋಗ್ಯ ಭಾಗ್ಯ ಕ್ಕಾಗಿ, ಸಂತಾನ, ಉದ್ಯೋಗದಲ್ಲಿ ಪ್ರಗತಿ ಕಾಣಲು, ವಿವಾಹ ಭಾಗ್ಯಕ್ಕಾಗಿ, ಜಾತಕದಲ್ಲಿ ಸರ್ಪದೋಷವಿದ್ದಂತವರು ಇಲ್ಲಿಗೆ ಬಂದು ಭಕ್ತಿಯಿಂದ ಪ್ರಾರ್ಥಿಸಿ ಕೈಲಾದ ಸೇವೆ ಮಾಡಿದರೆ ಸಕಲ ಅಭೀಷ್ಟೆಗಳು ದೊರೆಯುತ್ತ ದೆಂಬ ಪ್ರತೀತಿ ಇರುವುದರಿಂದ ದಿನವೂ ಸಹಸ್ರಾರು ಭಕ್ತರು ಇಲ್ಲಿಗೆ ಬರು ತ್ತಾರೆ. ಸರ್ಪಸಂಸ್ಕಾರ ಆಶ್ಲೇಷ ಬಲಿ ಮುಂತಾದ ಸೇವೆಗಳು ಈ ದೇಗುಲ ದಲ್ಲೂ ನಡೆಯುತ್ತಿದ್ದೂ ಇಲ್ಲಿಗೆ ಬರುವ ಭಕ್ತರಿಗೆ ದಿನವೂ ಅನ್ನ ಸಂತರ್ಪ ಣೆಯೂ ಇರುತ್ತದೆ. ಇಲ್ಲಿ ನಾಗಪ್ರತಿಷ್ಠೇ ಕಾರ್ಯಗಳು ಸಹ ನಡೆಯುತ್ತದೆ. ದೇವಸ್ಥಾನದ ಹಿಂಭಾಗದಲ್ಲಿ ಇರುವ ಪುಷ್ಕರಣಿಯ ಬಳಿ ಹೀಗೆ ಪ್ರತಿಷ್ಠಾಪಿಸಿದ





ನಾಗರಕಲ್ಲುಗಳು ಭಕ್ತರನ್ನು ಆಕರ್ಷಿಸುತ್ತದೆ. ಇಲ್ಲಿ ನಾಗಪ್ರತಿಷ್ಠೆ ಮಾಡುವುದರಿಂದ ಸಂತಾನ ಭಾಗ್ಯ ಪ್ರಾಪ್ತಿಯಾಗುತ್ತದೆ. ಪುಷ್ಯ ಶುದ್ಧ ಷಷ್ಠಿಯಂದು ಇಲ್ಲಿ ಸ್ವಾಮಿಯ ಬ್ರಹ್ಮರಥೋತ್ಸವ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ. ಪ್ರತಿ ತಿಂಗಳ ಪುನರ್ವಸು ನಕ್ಷತ್ರದಂದು ಸರ್ಪ ಸಂಸ್ಕಾರ, ಪುಷ್ಯ ನಕ್ಷತ್ರದ ದಿನ ಪ್ರಾಯಶ್ಚಿತ್ತ ಕರ್ಮಗಳು ಹಾಗೂ ಆಶ್ಲೇಷ ನಕ್ಷತ್ರದ ದಿನ ಆಶ್ಲೇಷ ಬಲಿ ಕಾರ್ಯಕ್ರಮಗಳು ಇರುತ್ತದೆ.



## ನಾಗದೋಷ ಕಳೆಯುವ ನಾಗಲಮಡಿಕೆ ಅಂತ್ಯ ಸುಬ್ರಹ್ಮಣ್ಯ

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಿಂದ 15 ಕಿಲೋ ಮೀಟರ್ ದೂರದಲ್ಲಿರುವ ನಾಗಲಮಡಿಕೆ ಎಂಬ ಕ್ಷೇತ್ರ ಸಹ ಶ್ರೀಸುಬ್ರಹ್ಮಣ್ಯ ದೇಗುಲಕ್ಕೆ ಪ್ರಸಿದ್ಧವಾಗಿದೆ. ಈ ದೇವಸ್ಥಾನಕ್ಕೆ "ಅಂತ್ಯ ಸುಬ್ರಹ್ಮಣ್ಯ"ಎಂಬ ಹೆಸರಿನಿಂದಲೂ ಪ್ರಸಿದ್ಧಿಯಾಗಿದೆ. ಉತ್ತರ ಪಿನಾಕಿನಿ ನದಿ ದಂಡೆಯಲ್ಲಿರುವ ಈ ದೇವಸ್ಥಾನಕ್ಕೆ ಸಹ ಕರ್ನಾಟಕವೇ ಅಲ್ಲದೇ ಆಂಧ್ರಪ್ರದೇಶ,ತಮಿಳುನಾಡು ಕೇರಳದಿಂದ ಸಹ ದಿನವೂ ಸಾವಿರಾರು ಭಕ್ತರು ಬರುತ್ತಾರೆ.

## ದೇಗುಲದ ಇತಿಹಾಸ

ನೊಳಂಬ ಪಲ್ಲವರ ಕಾಲದಲ್ಲಿ ನಾಗಲಮಡಿಕೆ ಒಂದು ಪುಟ್ಟ ಗ್ರಾಮ, ಇಲ್ಲಿ ಅನ್ನಂಭಟ್ಟ ಎಂಬ ಬ್ರಾಹ್ಮಣರೊಬ್ಬರಿದ್ದರು. ಇವರ ಮನೆದೇವರು ಕುಕ್ಕೆಸುಬ್ರಹ್ಮಣ್ಯ, ಇವರು ಪ್ರತಿವರ್ಷ ಕುಕ್ಕೆಯಲ್ಲಿ ನಡೆಯುವ ರಥೋತ್ಸವಕ್ಕೆ ನಿಯಮ ನಿಷ್ಟೆಗಳನ್ನು ಪಾಲಿಸಿ ನಡೆದುಕೊಂಡೆ ಹೋಗುತ್ತಿದ್ದರು. ದಿನ ಕಳೆದಂತೆ ವಯಸ್ಸಾಗುತ್ತಾ ಬಂತು. ಒಮ್ಮೆ ಇವರು ರಥೋತ್ಸವಕ್ಕೆ ಹೊರಟವರು ವಯೋಸಹಜ ಕಾರಣದಿಂದ ರಥೋತ್ಸವದ ಸಮಯಕ್ಕೆ ತಲುಪಲಾಗಲಿಲ್ಲ. ಇದರಿಂದ ಅನ್ನಂಭಟ್ಟರು ಮರುಗಿದರು. ಸ್ವಾಮಿಗೆ ನನ್ನ ಸೇವೆ ಬೇಡವಾಯಿತೇ ಎಂದು ಮನಸ್ಸಿನಲ್ಲಿ ಅಂದುಕೊಂಡರು. ಅತ್ತ ಕುಕ್ಕೆಯಲ್ಲಿ ಸ್ವಾಮಿ ರಥ ಒಂದಿಂಚು ಜರುಗದಂತೆ ಮಾಡಿದ. ವಟುವಿನ ವೇಷದಲ್ಲಿ ಬಂದು ವಯೋವೃದ್ಧ ಭಕ್ತರೊಬ್ಬರು ಬರುವವರಿದ್ದಾರೆ, ಅವರು ಬಂದು ರಥದ ಹಗ್ಗ ಮುಟ್ಟಿದ ಕೂಡಲೇ ರಥ ಚಲಿಸುತ್ತದೆ ಎಂದು ಅಲ್ಲಿಯವರಿಗೆ ತಿಳಿಸಿದ.

ಅನ್ನಂಭಟ್ಟರು ಬಂದು ರಥದ ಹಗ್ಗ ಮುಟ್ಟಿದ ಕೂಡಲೇ ರಥ ಚಲಿಸಿತು. ವಟುವೇಷದಲ್ಲಿ ಸ್ವಾಮಿಯು ಅನ್ನಂಭಟ್ಟರಿಗೆ, ನಿಮಗೆ ವಯಸ್ಸಾಗಿದೆ. ನೀವು ಇನ್ನು ಇಲ್ಲಿಗೆ ಬರುವುದು ಬೇಡ, ನೀವಿರುವಲ್ಲಿಗೆ ನಾನು ಬರುವೆ, ಅಲ್ಲಿಯೇ ರಥೋತ್ಸವ ಮಾಡಿ ಎಂದು ಹೇಳಿದ್ದಲ್ಲದೇ, ಕುಕ್ಕೆ ದೇವ ಸ್ಥಾನದಿಂದ ನಾಗಾಭರಣವನ್ನು ಕೊಡಿಸಿದವನೆಂದು ಪ್ರತೀತಿ. ಅನ್ನಂಭಟ್ಟರು ಕುಕ್ಕೆಯಿಂದ ವಾಪಸ್ ಬಂದು ಉಳುಮೆ ಮಾಡುತ್ತಿದ್ದಾಗ ನೇಗಿಲು ಮುಂದೆಸಾಗಲಿಲ್ಲ. ಅಲ್ಲಿ ಅಗೆದು ನೋಡಿದಾಗ ಇವರಿಗೆ ಅಲ್ಲಿ ನಾಗರ ಕಲ್ಲು ದೊರೆಯಿತು. ತೆಲುಗಿನಲ್ಲಿ ಮಡಕ ಎಂದರೆ ನೇಗಿಲು, ನೇಗಿಲಿನ ಅಲುಗಿಗೆ ನಾಗರ ಕಲ್ಲು ಸಿಕ್ಕಿದ್ದರಿಂದ ಊರಿನ ಹೆಸರು ನಾಗಲಮಡಿಕೆ ಎಂದಾಯಿತು. ನಾಗರಕಲ್ಲನ್ನು ಪ್ರತಿಷ್ಠಾಪಿಸಿ ಮಂಟಪ ನಿರ್ಮಿಸಿದರು, ನಂತರ ಅದೇ ಊರಿನ ವರ್ತಕರಾದ ಬಾಲಸುಬ್ಬಯ್ಯನವರು ದೈವಪ್ರೇರಣೆಯಿಂದ ಈ ಮಂಟಪಕ್ಕೆ ದೇವಸ್ಥಾನ ಕಟ್ಟಿಸಿದರೆಂದು ಇತಿಹಾಸ ಹೇಳುತ್ತದೆ. ಗರ್ಭ ಗುಡಿಯಲ್ಲಿ ಮೂರು ಸುತ್ತುಸುತ್ತಿರುವ ಮೂರು ಅಡಿ ಎತ್ತರದ ಏಳು ಹೆಡೆಯ ನಾಗಪ್ಪನ ಮೂರ್ತಿ ಭಕ್ತರನ್ನು ಆಕರ್ಷಿಸುತ್ತದೆ.

## ಕ್ಷೇತ್ರ ಮಹಿಮೆ

ಗಂಥೆ, ಚರ್ಮವ್ಯಾಧಿ, ಕಿವಿ ಸೋರುವುದು, ಮಕ್ಕಳಾಗದಿರುವುದು, ಕಣ್ಣಿನ ಸಮಸ್ಯೆ, ಕೋರ್ಟ್ ಕಚೇರಿ ಸಮಸ್ಯೆ ಕಂಕಣ ಭಾಗ್ಯಕ್ಕೆ ಇಲ್ಲಿ ಬಂದು ಸೇವೆ ಮಾಡುತ್ತಾರೆ. ಇಲ್ಲೂ ಕೂಡ ದೇಗುಲದಲ್ಲಿ ಸರ್ಪಸಂಸ್ಕಾರ, ಆಶ್ಲೇಷಬಲಿ, ನಾಗಪ್ರತಿಷ್ಠೆ ಹೋಮ, ಹವನ ಇತ್ಯಾದಿ ವಿಶೇಷ ಪೂಜೆ ನಡೆಸಲಾಗುತ್ತದೆ. ಪುಷ್ಯ ಮಾಸದ ಷಷ್ಠಿಯಂದು ಇಲ್ಲಿ ಸ್ವಾಮಿಗೆ ಬ್ರಹ್ಮ ರಥೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ರಥೋತ್ಸವ ಕಾಲದಲ್ಲಿ ಅನ್ನಂಭಟ್ಟರು ಕುಕ್ಕೆಯಿಂದ ತಂದ ನಾಗಾಭರಣ ಬಳಸಲಾಗುತ್ತದೆ. ಮಾರ್ಗಶಿರ, ಪುಷ್ಯ ಹಾಗೂ ಮಾಘ ಮಾಸಗಳ ಷಷ್ಠಿಯಂದು ಇಲ್ಲಿ ವಿಶೇಷ ಪೂಜೆ ಆರಾಧನೆ ಇರುತ್ತದೆ. ಈ ಸಮಯದಲ್ಲಿ ಅನ್ನದ ರಾಶಿಯ ಮೇಲೆ ಉತ್ಸವ ಮೂರ್ತಿಯನ್ನು ಕೂರಿಸಿ ಪೂಜೆ ಮಾಡಲಾಗುತ್ತದೆ.

ತಿಂಗಳಲ್ಲಿ ಒಂದು ಬಾರಿ ಪುನರ್ವಸು, ಪುಷ್ಯ ಹಾಗೂ ಆಶ್ಲೇಷ ನಕ್ಷತ್ರ ದಿನದಂದು ಮೇಲಿನ ಮೂರು ಅಂದರೆ ಕುಕ್ಕೆಯ ಆದಿ, ಘಾಟಿಯ ಮಧ್ಯ ಹಾಗೂ ನಾಗಲಮಡಿಕೆಯ ಅಂತ್ಯ ಸುಬ್ರಹ್ಮಣ್ಯ ಸ್ವಾಮಿಯ ದರ್ಶನ ಅನಂತ ಫಲ ನೀಡುತ್ತದೆ.



# ರಾಮಾಯಣದಲ್ಲಿ ಹನುಮನ ಹಾರಾಟ

- ಡಾ॥ ಎಸ್. ನಂಜುಂಡಸ್ವಾಮಿ

7899011310

ರಾಮಾಯಣದ ಪಾತ್ರಗಳ ಮಹಾಮಾಲೆಯಲ್ಲಿ ರತ್ನದಂತಿರುವ ಹನುಮಂತನು ಎಷ್ಟು ಬಾರಿ ಸಮುದ್ರ ಲಂಘನ ಮಾಡಿದ, ಬಿಟ್ಟು ಬೇರೆ ಎಷ್ಟು ಸಲ ಎಲ್ಲೆಲ್ಲಿ, ಸಮುದ್ರದ ಮೇಲೆ ಹಾರಾಟ ನಡೆಸಿದನು ಎಂಬುದು ಕುತೂಹಲಕರ ಅಂಶ. ಸಾಮಾನ್ಯವಾಗಿ ಎಲ್ಲರೂ ಸೀತಾನ್ವೇಷಣೆಯಲ್ಲಿ ಒಂದು ಸಲ,ಸಂಜೀವಿನಿ ಪರ್ವತವನ್ನು ತರಲು ಒಂದು ಸಲ ಹನುಮಂತನು ಸಮುದ್ರಲಂಘನವನ್ನು ಮಾಡಿದ ಎಂದು ಹೇಳುತ್ತಾರೆ. ಆದರ ಜೊತೆಗೆ ಇನ್ನೂ ಒಂದೆರಡು ಸಲ ಹನುಮನು ಹಾರಾಟ ಮಾಡಿರುವುದು ವಾಲ್ಮೀಕಿ ರಾಮಾಯಣದಲ್ಲಿ ಕಂಡು ಬರುತ್ತದೆ.ಎಳೆಯ ಬಾಲಕನಿದ್ದಾಗ ಹನುಮಂತನು ಕೆಂಬಣ್ಣದ ಉದಯ ಸೂರ್ಯನನ್ನು ನೋಡಿ, ಅದನ್ನು ಹಣ್ಣೆಂದು ಭ್ರಮಿಸಿ, ಅದನ್ನು ಕಿತ್ತುಕೊಂಡು ತಿನ್ನಲು ಆಕಾಶಕ್ಕೆ ಹಾರಿ ಸೂರ್ಯ ಲೋಕದತ್ತ ತೆರಳುತ್ತಿದ್ದನು.ಸೂರ್ಯನು ಈ ವಿಚಾರವನ್ನು ಇಂದ್ರನಿಗೆ ತಿಳಿಸಿದಾಗ, ಇಂದ್ರನು ತನ್ನ ವಜ್ರಾಯುಧದಿಂದ ಹನುಮಂತನ ಮುಖಕ್ಕೆಹೊಡೆದಾಗ ಅವನು ನೆಲಕ್ಕೆಬಿದ್ದನು. ಇದನ್ನು ತಿಳಿದ ತಂದೆಯಾದ ವಾಯುದೇವನು ತನ್ನ ಸಂಚಾರವನ್ನು ನಿಲ್ಲಿಸಿದನು. ಆದರಿಂದ ಲೋಕಕ್ಕೆ ತೊಂದರೆಯಾದಾಗ ತ್ರಿಮೂರ್ತಿಗಳಾದಿಯಾಗಿ ಎಲ್ಲ ದೇವರು ಬಂದು ಹನುಮಂತನಿಗೆ ವರವನ್ನು ನೀಡಿದರು. ಇದು ಹನುಮನ ಮೊದಲ ಹಾರಾಟ.

ಪ್ರೌಢ ವಯಸ್ಕನಾದ ಮೇಲೆ ಹನುಮಂತನು ಕಿಷ್ಕಿಂಧೆಗೆ ಹೋಗಿ, ಯುವರಾಜ ಸುಗ್ರೀವನ ಆಪ್ತ ಸಚಿವನಾದನು. ಶ್ರೀರಾಮ ಮತ್ತು ಸುಗ್ರೀವರ ಸಖ್ಯವನ್ನು ಏರ್ಪಡಿಸಿದನು. ಸುಗ್ರೀವ ಮತ್ತು ರಾಮನಿಂದ ಆಜ್ಞಾಪಿತನಾಗಿ,ಸೀತೆಯನ್ನು ಹುಡುಕಲು ಹೊರಟು, ಮಹೇಂದ್ರಪರ್ವತದ ಮೇಲಿನಿಂದ, ನೂರುಯೋಜನೆ ದೂರದ ಲಂಕೆಗೆ ದಕ್ಷಿಣ ಸಮುದ್ರದ ಮೇಲೆ ಮಧ್ಯದಲ್ಲಿ ಎಲ್ಲೂ ವಿಶ್ರಾಂತಿ ಪಡೆಯದೇ ಒಂದೇ ನೆಗೆತಕ್ಕೆ ಹಾರಿಹೋದನು. ಹಾರಿಹೋಗುವ ಹಾದಿಯಲ್ಲಿ ದೇವತೆಗಳು ಕಳುಹಿಸಿದ ಸುರಸೆಯನ್ನು ಉಪಾಯದಿಂದ ಗೆದ್ದು, ನೆರಳನ್ನು ಹಿಡಿದು ನುಂಗುತ್ತಿದ್ದ ಸಿಂಹಿಕೆಯನ್ನು ಸಂಹರಿಸಿ,ಲಂಕಾಪಟ್ಟಣದ ಕೋಟೆಯ ಹೆಬ್ಬಾಗಿಲನ್ನು ಕಾಯುತ್ತಿದ್ದ ಲಂಕಿಣಿಯನ್ನು ಭಂಗಿಸಿ, ಸೀತಾದೇವಿಯನ್ನು ಕಂಡು ಶ್ರೀರಾಮನ ಮುದ್ರಿಕೆಯನ್ನು ನೀಡಿ, ಚೂಡಾಮಣಿಯನ್ನು ಪಡೆದು ಅಶೋಕವನವನ್ನು ನಾಶಮಾಡುತ್ತಾನೆ.ರಾಕ್ಷಸರನ್ನು ಸಂಹರಿಸಿ,ರಾವಣನನ್ನು ಕಂಡು ಅವನಿಗೆ ಬುದ್ಧಿವಾದ ಹೇಳಿದನು.ಲಂಕೆಯನ್ನು ಸುಟ್ಟು, ಲಂಕೆಯ ಸುನಾಭ ಪರ್ವತದ ಮೇಲಿನಿಂದ ಸಮುದ್ರದ ಮೇಲೆ ವಾಯು ವೇಗದಲ್ಲಿ ಹಾರಿ ಹಿಂದಿರುಗಿ ಬಂದು ಮಹೇಂದ್ರ ಪರ್ವತದ ಮೇಲೆ ಇಳಿದನು. ರಾಮನ ಸೇವೆಯಲ್ಲಿ ಇದು ಮೊದಲನೆಯ ಸಲವಾದರೂ,ಇದು ಹನುಮಂತನ ಹಾರಾಟದ ಎರಡನೆಯ ಸಲ.

ಲಂಕೆಯ ಯುದ್ಧ ಭೂಮಿಯಲ್ಲಿ ಇಂದ್ರಜಿತ್ತುವು ಪ್ರಯೋಗಿಸಿದ ಬ್ರಹ್ಮಾಸ್ತ್ರದ ಹೊಡೆತಕ್ಕೆ ರಾಮಲಕ್ಷ್ಮಣರ ಸಮೇತ ಕಪಿ ವೀರರು ಮೂರ್ಛಿತರಾಗಿ ಬಿದ್ದರು.ಹನುಮಂತನು ಬೇಗ ಸಾವರಿಸಿಕೊಂಡು ಎದ್ದನು. ವಿಭೀಷಣನು ಹನುಮಂತನೊಡನೆ ಮೂರ್ಛಿತರಾಗಿದ್ದ ಕಪಿ ವೀರರನ್ನು ಹುಡುಕಿ ಎಬ್ಬಿಸುತ್ತಾ, ಜಾಂಬವಂತನ ಬಳಿಗೆ ಬಂದನು.ಜಾಂಬವಂತನು ನರಳುತ್ತಾ "ವಿಭೀಷಣಾ ಹನುಮಂತನು ಬದುಕಿದ್ದಾನೆಯೇ" ಎಂದು ಕೇಳುತ್ತಾನೆ.ಆಗ ವಿಭೀಷಣನು"ಇದೇನಿದು ಜಾಂಬವಂತ,ರಾಮಲಕ್ಷ್ಮಣರ ಕ್ಷೇಮ ಸಮಾಚಾರವನ್ನು ಕೇಳದೇ, ಹನುಮಂತನನ್ನು

ವಿಚಾರಿಸಿಕೊಳ್ಳುತ್ತಿರುವೆಯಲ್ಲಾ" ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ಆಗ ಜಾಂಬವಂತನು "ವಿಭೀಷಣ, ಹನುಮಂತನೊಬ್ಬ ಬದಕಿದ್ದರೆ, ವಾನರ ಬಲವೆಲ್ಲವೂ ಸತ್ತರೂಸತ್ತಂತೆ ಅಲ್ಲ. ಅವನೊಬ್ಬ ಮೃತನಾದರೆ ನಾವೆಲ್ಲರೂ ಬದುಕಿದ್ದರೂ ಸತ್ತಂತೆಯೇ ಸರಿ, ವೀರಾಗ್ರಣಿಯಾದ ಹನುಮಂತನು ಬದುಕಿದ್ದರೆ ನಾವು ಪುನಃ ಮೇಲೆದ್ದು ಹೋರಾಡುವ ಆಸೆ ಉಂಟು" ಎಂದನು. ಈ ಮಾತನ್ನು ಕೇಳಿದ ಹನುಮಂತನು ಜಾಂಬವಂತನ ಪಾದಗಳಿಗೆ ನಮಸ್ಕರಿಸಿ ನಾನು ಭಗವಂತನ ಕೃಪಾ ಕಟಾಕ್ಷದಿಂದ ಬದುಕಿದ್ದೇನೆ ಎಂದನು. ತಕ್ಷಣ ಸುಧಾರಿಸಿಕೊಂಡು ಎದ್ದ ಜಾಂಬವಂತನು, ಹನುಮಂತನನ್ನು ಕುರಿತು. "ಹನುಮಂತ ತಕ್ಷಣ ಈಗ ನೀನು ಸಮುದ್ರವನ್ನು ಲಂಘಿಸಿ, ಹಿಮಾಲಯಕ್ಕೆ ಹೋಗು, ಅಲ್ಲಿ ಋಷಭ ಪರ್ವತ, ಕೈಲಾಸ ಪರ್ವತಗಳ ಮಧ್ಯದಲ್ಲಿ ಕಾಂತಿಯುಕ್ತವಾದ ಔಷಧ ಪರ್ವತವಿದೆ. ಅದರ ಕೋಡುಗಲ್ಲಿನ ಬಳಿ, ಮೃತ ಸಂಜೀವಿನಿ, ವಿಶಲ್ಯಕರಣಿ, ಸಾವರ್ಣಕರಣಿ, ಸಂಧಾನಕರಣಿ ಎಂಬ ನಾಲ್ಕು ಮೂಲಿಕೆಗಳಿವೆ. ಅವುಗಳನ್ನು ಬೇಗ ತೆಗೆದುಕೊಂಡು ಬಾ, ಈ ಮೂಲಿಕೆಗಳಿಂದ ರಾಮಲಕ್ಷ್ಮಣರು ಮತ್ತು ಕಪಿನಾಯಕರುಗಳಿಗೆ ಚಿಕಿತ್ಸೆ ಮಾಡಿ ಬದುಕಿಸಲು ಸಹಾಯ ಮಾಡು"ಎಂದು ಹೇಳುತ್ತಾನೆ. ತಕ್ಷಣ ಹನುಮಂತನು ತ್ರಿಕೂಟಾಚಲ ಪರ್ವತದ ಮೇಲೆ ನಿಂತು ಗರುಡ ಹಾಗೂ ಸುದರ್ಶನ ಚಕ್ರದಂತೆ ಮಹಾವೇಗದಿಂದ ಹಾರಿ ಹಿಮವತ್ ಪರ್ವತಕ್ಕೆ ಬಂದಿಳಿದು, ಔಷಧ ಪರ್ವತಕ್ಕೆ ಬಂದನು. ಹನುಮಂತನನ್ನು ಕಂಡ ತಕ್ಷಣ ಔಷಧ ಪರ್ವತದ ಮೇಲಿದ್ದ ಮೂಲಿಕೆಗಳು ಮರೆಯಾದವು. ಕೋಪಗೊಂಡ ಹನುಮಂತನು ಆ ಪರ್ವತವನ್ನೇ ಬುಡಸಹಿತ ಕಿತ್ತುಕೊಂಡು ಸಮುದ್ರವನ್ನು ಲಂಘಿಸಿ, ಲಂಕೆಯ ಯುದ್ಧ ಭೂಮಿಗೆ ಬಂದನು. ಆ ದಿವ್ಯ ಔಷಧಗಳ ಪರಿಮಳದಿಂದ ಮೂರ್ಛಿತರಾಗಿದ್ದ, ಮಡಿದು ಬಿದ್ದಿದ್ದ. ವಾನರರೆಲ್ಲರೂ ಎದ್ದು ಕುಳಿತು ಕೊಂಡರು. ರಾಮಲಕ್ಷ್ಮಣರು ಕ್ಷಣ ಮಾತ್ರದಲ್ಲಿ ಎದ್ದು ಕುಳಿತುಕೊಂಡರು. ಔಷಧ ಪರ್ವತವು ಅಲ್ಲೇ ಇದ್ದರೆ ರಾಕ್ಷಸರು ಅದರಿಂದ ಪ್ರಯೋಜನ ಪಡೆಯಬಹುದೆಂದು ಹನುಮಂತನು, ಆ ಪರ್ವತವನ್ನು ಎತ್ತಿಕೊಂಡು ಮತ್ತೆ ಹಿಮವತ್ ಪರ್ವತಕ್ಕೆ ಹಾರಿಹೋಗಿ ಮೊದಲಿನಂತೆ ಹಿಮವತ್ ಪರ್ವತದ ಮೇಲೆ ಇರಿಸಿ, ಮತ್ತೆ ಅಲ್ಲಿಂದ ಹಾರಿ ಲಂಕೆಯ ಯುದ್ಧ ಭೂಮಿಗೆ



ಬಂದನು. ಇದು ಹನುಮನ ಹಾರಾಟದ ಮೂರನೆಯ ಸಲ. ಈ ಸಂದರ್ಭದಲ್ಲಿ ಹನುಮನು ಔಷಧ ಪರ್ವತಕ್ಕೆ ಎರಡು ಸಲ ಹಾರಾಟ ನಡೆಸಿದನು.

ಯುದ್ಧದಲ್ಲಿ ಇಂದ್ರಜಿತ್ತು, ಕುಂಭಕರ್ಣರ ವಧೆಯ ನಂತರ ರಾವಣನೇ ಸ್ವತಃ ಯುದ್ಧಭೂಮಿಗೆ ಬಂದು ಲಕ್ಷ್ಮಣನೊಡನೆ ಯುದ್ಧ ಮಾಡುತ್ತಿದ್ದ ಸಮಯದಲ್ಲಿ ವಿಭೀಷಣನು ಅವನಿಗೆ ಸಹಕಾರ ನೀಡುತ್ತಿದ್ದನು. ಇದನ್ನು ಕಂಡು ಕೋಪಾವಿಷ್ಟನಾದ ರಾವಣನು ವಿಭೀಷಣನ ಮೇಲೆ ಶಕ್ತಿಯೆಂಬ ಆಯುಧವನ್ನು ಪ್ರಯೋಗಿಸಲು ಲಕ್ಷ್ಮಣನು ಅದನ್ನು ತುಂಡು ತುಂಡು ಮಾಡಿದನು. ಆಗ ರಾವಣನು ಘಂಟಾಶಕ್ತಿಯೆಂಬ ಮತ್ತೊಂದು ಬಾಣವನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಲು ಅದು ಲಕ್ಷ್ಮಣನ ಎದೆಯನ್ನು ಭೇದಿಸಿತು. ಅದರ ಆಘಾತಕ್ಕೆ ಲಕ್ಷ್ಮಣನು ಮೂರ್ಛಿತನಾದನು. ಶ್ರೀರಾಮನು ಮೂರ್ಛಿತನಾದ ಲಕ್ಷ್ಮಣನ ಬಳಿ ಶೋಕಿಸುತ್ತಿದ್ದನು. ಆಗ ಸುಷೇಣನು ಶ್ರೀರಾಮನನ್ನು ಸಮಾಧಾನಪಡಿಸಿ, ಸಮೀಪದಲ್ಲಿದ್ದ ಹನುಮಂತನನ್ನು ಕರೆದು, ಹನುಮಂತ ನೀನು ತಕ್ಷಣ, ಹಿಂದೆ ಜಾಂಬವಂತನು ಹೇಳಿದ್ದ. ಸರ್ವೌಷಧೀ ಪರ್ವತಕ್ಕೆ ಹಾರಿ ಹೋಗಿ, ಆ ಪರ್ವತದ ತೆಂಕಣಕೋಡುಗಲ್ಲಿನಲ್ಲಿರುವ ಸಂಜೀವಿನಿ, ವಿಶಲ್ಯಕರಣಿ, ಸಂಧಾನ ಕರುಣೀ, ಸುವರ್ಣಕರಣಿಗಳೆಂಬ ಔಷಧಗಳನ್ನು ಅತೀ ವೇಗದಿಂದ ತೆಗೆದುಕೊಂಡು ಬಾ ಎಂದು ಹೇಳಿದನು. ಕೂಡಲೇ ಹನುಮಂತನು ಸರ್ವೌಷಧೀ ಪರ್ವತಕ್ಕೆ ಅಲ್ಲಿ ಔಷಧಿಗಳನ್ನು ಗುರುತು ಹಿಡಿಯಲು ಸಾಧ್ಯವಾಗದೇ. ಈ ಔಷಧಗಳನ್ನು ಹುಡುಕಲು ಸಮಯ ವ್ಯರ್ಥವಾಗುತ್ತವೆಂದು, ಅತೀ ವೇಗದಿಂದ ಬಿರುಗಾಳಿಯು ಮೇಘವನ್ನು ಎತ್ತಿಕೊಂಡು ಹೋಗುವಂತೆ ಆ ಪರ್ವತದ ಕೋಡುಗಲ್ಲನ್ನು ಎತ್ತಿಕೊಂಡು ಬಂದು ಶ್ರೀರಾಮನ ಪಾಳೆಯದ ಸಮೀಪದಲ್ಲಿ ಇಟ್ಟನು. ಸುಷೇಣನು ಆ ಪರ್ವತದ ಕೋಡುಗಲ್ಲಿನ ಮೇಲಿದ್ದ ಮೂಲಿಕೆಗಳನ್ನು ತೆಗೆದು ಕಲ್ಲರೆಯ ಮೇಲೆ ಜಜ್ಜಿ, ಲಕ್ಷ್ಮಣ ಮೂಗಿಗೆ ಅದರ ರಸವನ್ನು ಹಾಕಲು ಲಕ್ಷ್ಮಣ ತಕ್ಷಣ ಮೂರ್ಛೆಯಿಂದ ಎದ್ದು ಕುಳಿತು

ಸ್ವಸ್ಥನಾದನು.ಇದು ಹನುಮಂತನು ಹಾರಾಟ ನಡೆಸಿದ್ದು ನಾಲ್ಕನೆಯ ಬಾರಿ.ಆದರೆ ಹನುಮಂತನು ಮತ್ತೆ ಆ ಪರ್ವತ ವನ್ನು ತೆಗೆದುಕೊಂಡು ಹೋಗಿ ಅದೇ ಸ್ಥಳದಲ್ಲಿಟ್ಟು ಬಂದ ಬಗ್ಗೆ ಉಲ್ಲೇಖವಿಲ್ಲ.

ರಾವಣ ವಧೆಯ ನಂತರ ಶ್ರೀರಾಮಚಂದ್ರನು ಸೀತಾ ಲಕ್ಷ್ಮಣ ಸಮೇತನಾಗಿ, ವಿಭೀಷಣ, ಸುಗ್ರೀವ, ಹನುಮಂತ ಮೊದಲಾದ ಕಪಿವೀರರ ಜೊತೆ, ವಿಭೀಷಣನು ಸಮರ್ಪಿಸಿದ ಪುಷ್ಪಕ ವಿಮಾನದಲ್ಲಿ ಕುಳಿತು, ಭರದ್ವಾಜ ಮುನಿಗಳ ಆಶ್ರಮ ದಲ್ಲಿ ಬಂದಿಳಿದು ಅವರಿಗೆ ವಂದಿಸಿ. ರಾವಣನ ವಧೆಯ ವೃತ್ತಾಂತವನ್ನು ಹೇಳಿ, ತನ್ನ ರಾಜ್ಯದ ಯೋಗಕ್ಷೇಮಗಳನ್ನು ವಿಚಾರಿಸಿದನು.ಆಗ ಭರದ್ವಾಜರು ರಾಮ,ನಿನ್ನ ತಮ್ಮ ಭರತನು ನಿನ್ನ ಬರವನ್ನು ಕಾಯ್ದುಕೊಂಡಿದ್ದಾನೆಂದು ಹೇಳಿದರು. ಮಾರನೆಯ ದಿನ ಶ್ರೀರಾಮನು ಹನುಮಂತನನ್ನು ಕರೆದು, ಹನುಮಂತ ನೀನು ಅಯೋಧ್ಯಾ ಪಟ್ಟಣಕ್ಕೆ ಹೋಗು, ಮಾರ್ಗ ಮಧ್ಯದಲ್ಲಿ ಶೃಂಗಿಭೇರವೆಂಬ ಪಟ್ಟಣವಿದೆ. ಅಲ್ಲಿ ನನ್ನ ಪ್ರಾಣ ಸಖನಾದ ಗುಹನಿದ್ದಾನೆ.ಅವನಿಗೆ ನಾನು ತಿರುಗಿ ಬಂದ ವೃತ್ತಾಂತವನ್ನು ತಿಳಿಸು.ಅಲ್ಲಿಂದ ಅಯೋಧ್ಯಾ ಪಟ್ಟಣಕ್ಕೆ ಹೋಗಿ ಭರತನನ್ನು ಕಂಡು, ನಾನು ಸೀತಾಲಕ್ಷ್ಮಣ. ವಿಭೀಷಣ ಕಪಿವೀರರ ಸಮೇತ ಬರುತ್ತಿರುವ ವಿಚಾರವನ್ನು ತಿಳಿಸು. ಅವನ ಮುಖ ಚಹರೆಯಿಂದ ಅವನ ಮನಸ್ಸಿನ ಇಂಗಿತ ವನ್ನು ಅರಿತುಕೋ. ಒಂದು ವೇಳೆ ನಾನು ಹಿಂದಿರುಗಿ ಬಂದ ವಿಷಯದಿಂದ ಭರತನಿಗೆ ಸಂತೋಷವಾಗದಿದ್ದರೆ, ಅವನೇ ರಾಜ್ಯವನ್ನು ಪರಿಪಾಲಿಸಿಕೊಂಡು ಸುಖವಾಗಿರಲಿ, ನಾನು ಅಯೋಧ್ಯಾ ಪಟ್ಟಣಕ್ಕೆ ಬರುವ ಮೊದಲೇ ಈ ವಿಷಯವನ್ನು ನನಗೆ ತಿಳಿಸು ಎಂದನು. ಈ ಮಾತನ್ನು ಕೇಳಿದ ಕೂಡಲೇ ಹನುಮಂತನು ಮನುಷ್ಯಾಕಾರವನ್ನು ತಾಳಿ, ಗರುಡನಂತೆ ಅಂತರಿಕ್ಷ ಮಾರ್ಗದಿಂದ ಗಂಗಾ ಯಮುನಾ ಸಂಗಮದ ಶೃಂಗಿ ಭೇರಪುರಕ್ಕೆ ಹಾರಿ ಬಂದು ಗುಹನನ್ನು ಭೇಟಿಯಾಗಿ ಶ್ರೀರಾಮನು ವನವಾಸವನ್ನು ಮುಗಿಸಿಕೊಂಡು ಸೀತಾ ಲಕ್ಷ್ಮಣರ ಸಮೇತ ಭರದ್ವಾಜ ಆಶ್ರಮದಲ್ಲಿದ್ದಾನೆ. ಇಂದು ಇಲ್ಲಿಗೆ ಬರುತ್ತಾನೆಂದು ತಿಳಿಸಿ ಅಲ್ಲಿಂದ ಅಯೋಧ್ಯಾ ಪಟ್ಟಣದ ಸಮೀಪ ಇದ್ದ ನಂದೀ ಗ್ರಾಮಕ್ಕೆ ಬಂದು ಭರತನನ್ನು ಕಂಡು ಶ್ರೀರಾಮನ ವಾರ್ತೆಯನ್ನು ತಿಳಿಸಿದನು.ಇದು ಹನುಮಂತನು ಭರದ್ವಾಜ ಆಶ್ರಮದಿಂದ ಅಯೋಧ್ಯೆಯವರೆಗೆ ನಡೆಸಿದ ಐದನೆಯ ಬಾರಿ ನಡೆಸಿದ ಹಾರಾಟ.



ಶ್ರೀರಾಮನ ಪಟ್ಟಾಭಿಷೇಕದ ನಂತರ ಶ್ರೀರಾಮನು ಸುವರ್ಣ ಪುಷ್ಪಗಳಿಂದ ನಿರ್ಮಿತವಾಗಿದ್ದ ಹಾರವನ್ನು ಸುಗ್ರೀವ ನಿಗೆ, ವಜ್ರ ವೈಢೂರ್ಯ ಮೊದಲಾದ ನವರತ್ನಗಳಿಂದ ನಿರ್ಮಿತ ವಾಗಿದ್ದ ಹಾರವನ್ನು ಅಂಗದನಿಗೆ ನೀಡಿದನು. ಚಂದ್ರಕಿರಣದಂತೆ ನಿರ್ಮಲವಾದ ಮುತ್ತಿನ ಹಾರವನ್ನು ಸೀತಾದೇವಿಗೆ ನೀಡಿ ದಾಗ,ಅವಳು ಶ್ರೀರಾಮನ ಹಾಗೂ ಕಪಿವೀರರ ಮುಖವನ್ನು ನೋಡಿದಳು.ಆಗ ರಾಮಚಂದ್ರನು. ಜಾನಕಿ ಬುದ್ಧಿ, ಪೌರುಷ, ಬಲ,ವಿಕ್ರಮಾದಿಗಳು ಯಾವ ಕಪಿವೀರನಲ್ಲಿ ನಿತ್ಯವಾಗಿರು ವುವೋ ಆತನಿಗೆ ಈ ಹಾರವನ್ನು ಕೊಡು ಎಂದಾಗ, ಸೀತಾ ದೇವಿಯು ಆ ಹಾರವನ್ನು ಹನುಮಂತನಿಗೆ ನೀಡಿದಳು.ಅದನ್ನು ಸಂತೋಷದಿಂದ ಸ್ವೀಕರಿಸಿ ಧರಿಸಿದ ಆಂಜನೇಯನು ಉಭಯ ಪಾರ್ಶ್ವಗಳಲ್ಲಿ ಬಿಳುಪಾದ ಮೇಘ ಸಮೂಹದಿಂದ ಕೂಡಿರುವ ಪರ್ವತ ರಾಜನಂತೆ ಕಂಗೊಳಿಸಿದನು.ಬಳಿಕ ಶ್ರೀರಾಮನು ಜಾಂಬವಂತ, ವಿಭೀಷಣ, ಮೈಂದ, ಸುಷೇಣಾದಿ ಕಪಿ ನಾಯಕರಿಗೆ ದಿವ್ಯ ವಸ್ತ್ರಾಭರಣಗಳನ್ನು ನೀಡಿ ಸತ್ಕರಿಸಿ ದನು.ಸುಗ್ರೀವ, ವಿಭೀಷಣ, ಅಂಗದ, ಹನುಮಂತ, ಜಾಂಬ ವಂತ, ನೀಲ, ಸುಷೇಣರೇ ಮೊದಲಾದವರೆಲ್ಲರು ತಮ್ಮ ಯಥಾ ಸ್ಥಾನಗಳಿಗೆ ತೆರಳತೊಡಗಿದರು.ಸುಗ್ರೀವನು ತನ್ನ ರಾಜಧಾನಿ ಯಾದ ಕಿಷ್ಕಿಂಧಾ ಪಟ್ಟಣಕ್ಕೆ, ವಿಭೀಷಣನು ತನ್ನ ರಾಜಧಾನಿ ಯಾದ ಲಂಕಾ ಪಟ್ಟಣಕ್ಕೆ ಹೋದರು ಎಂದು ರಾಮಾಯಣದಲ್ಲಿ ಹೇಳಿದೆ. ಹನುಮಂತನು ಅಯೋಧ್ಯೆಯಲ್ಲಿ ರಾಮನ ಬಳಿಯೇ ಉಳಿದನು ಎಂದು ವಾಲ್ಮೀಕಿ ರಾಮಾಯಣದಲ್ಲಿ ಹೇಳಿರುವುದಿಲ್ಲ.

# ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ "ಅಂಜಿಕ್ಯಾಕೆನಗಂಜಿಕೆ" ಕೀರ್ತನೆಯ ಒಳನೋಟ

– ಡಾ॥ ಸುಭಾಸ್ ಕಾಖಂಡಕಿ

79754 42458

ಅಂಜಿಕ್ಯಾಕೆನಗಂಜಿಕೆ

ಕಂಜನಾಭ ಶ್ರೀನಿವಾಸನ ದಯವಿರಲು ॥ಪ॥

ಹಿಂದಿನ ಕೀರ್ತನೆಯಲ್ಲಿ ಎಲ್ಲ ಭವಬಂಧನಗಳಿಗೆ ಸಿಲುಕಿ ಭವಾಬ್ಧಿಯಲ್ಲಿ ಮುಳುಗಿ- ಆಯಾಸ ಪಡುತ್ತಿರುವ ನನ್ನನ್ನು ರಕ್ಷಿಸು ಎನ್ನುವ ದಾಸರು - ಆದರೆ ಈ ಕೀರ್ತನೆಯಲ್ಲಿ ಪರಮಾತ್ಮನ ಸಂಪೂರ್ಣ ಅನುಗ್ರಹ ಪಡೆದು ಅವನನ್ನು ನಂಬಿದ ತಮಗೆ, ಈ ಭವಾಬ್ಧಿಯಲ್ಲಿ ಮುಳಗಿದ್ದರೂ ಕೂಡ ಯಾವ ಅಂಜಿಕೆಯೂ ಇಲ್ಲ, ಯಾಕೆಂದರೆ ಸದಾ ಅವನ ಚರಣಕ್ಕೆ ಅರ್ಪಿಸಿಕೊಂಡು ಅವನ ನಾಮಸ್ಮರಣೆ ಯಲ್ಲೇ ನಿರತನಾಗಿರುವ ತಮಗೆ ಯಾಕೆ ಈ ಬಂಧನಗಳ ಅಂಜಿಕೆ.?

ಕಂಜನಾಭ ಶ್ರೀನಿವಾಸನ ದಯವಿರಲು ಇನ್ಯಾಕ ಭವದ ಅಂಜಿಕೆ ಎಂದಿದ್ದಾರೆ. ಮುಂದಿನ ನುಡಿಗಳಲ್ಲಿ ದಾಸರು ಹೇಳುತ್ತಾರೆ.

ಅಶನ ವಸನವನ್ನು ಕುಳಿತಲ್ಲೇ ನಡೆಸುವ
ನಿಶಿದಿನ ನೀಚರಾಧೀನ ಮಾಡದೆ
ಹಸನಾಗಿ ತನ್ನಂಘ್ರಿ, ನೆರಳೊಳು ಬಚ್ಚಿಟ್ಟು
ಕುಶಲದಿ ಸಾಕುವ ದೊರೆಯ ನಂಬಿದ ಬಳಿಕ ॥1॥

ಹಿಂದಿನ ಸಂಚಿಕೆಯಲ್ಲಿಯ ಕೀರ್ತನೆಯಲ್ಲಿ ಹಗಲು-ರಾತ್ರಿ ಅಶನ - ವಶನಗಳಿಂದ ಮುಳಗಿ ಅಜ್ಞಾನದ ಹಾದಿ ಹಿಡಿದು ದುಃಖಕ್ಕೀಡಾಗಿರುವೆ ಎಂದು ಆತ್ಮ ನಿವೇದನೆ ಮಾಡಿಕೊಂಡಿರುವ ದಾಸರು, ಇಲ್ಲಿ ನನ್ನ ತನು-ಮನಗಳು,ಆಶೆ ಆಕಾಂಕ್ಷೆಗಳನ್ನು ಬೇಕು-ಬೇಡಗಳನ್ನು ಹರಿಗೆ ಅರ್ಪಿಸಿದ್ದೇನೆ ಎಂದ ಮೇಲೆ ನನಗ್ಯಾಕೆ ಚಿಂತೆ, ಸರ್ವವ್ಯಾಪ್ತಿತ್ವವನ್ನು ಹೊಂದಿದ ಶ್ರೀಹರಿ, ಸಕಲ ಜೀವ ರಾಶಿಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಪೊರೆಯುವಾಗ, ನನ್ನ ಜೀವನದ ಚಿಂತನ ನನಗೇಕೆ! ಊಟ ವಸ್ತ್ರಗಳನ್ನು ಕುಳಿತಲ್ಲೇ ನಡೆಸುವವನು ಅವನು, ಹಗಲು - ರಾತ್ರಿ ನೀಚ ರಾಧಿನ ಮಾಡದೆ, ಸಜ್ಜನರ ಸಂಗ ಮಾಡಿಸಿ,ಸನ್ಮಾರ್ಗ ವನ್ನು ಹಿಡಿಸಿ,ತನ್ನ ಪಾದದಲ್ಲಿ ಆಶ್ರಯ ಕೊಟ್ಟು, ನಮ್ಮನ್ನು ಪೊರೆಯುವವನನ್ನು ನಂಬಿದ ಮೇಲೆ ನನಗ್ಯಾಕೆ ಅಂಜಿಕೆ ಎಂದಿದ್ದಾರೆ,ದಾಸರು.



ಹುಲ್ಲು ಕಚ್ಚಿ ಕಲ್ಲು ಹೊತ್ತು ಧನವನುಳ್ಳ

ಕ್ಷುಲ ಜೀವರನೆಲ್ಲ ಕಾಯುವ ಶಕ್ತಿ

ಎಲ್ಲ ವ್ಯವಹಾರವ ಮಾಡುವ ಬಲ ನನ

ಗಿಲ್ಲೆಂದು ಆಯಾಸ ಬಡಲೀಸದವನಿರೆ ॥2॥

ಭಗವಂತನು ಸಕಲ ಜೀವಿಗಳನ್ನು ಪೊರೆಯುವವನು ಎಂದ ಮೇಲೆ ಎಂಬತ್ತ ನಾಲ್ಕು ಲಕ್ಷ ಜೀವಿಗಳು ಕೂಡ ಹುಲ್ಲು ಕಚ್ಚಿ ಕಲ್ಲು ಹೊರುವವರೇ - ಅಂದರೆ ಒಂದು ಸಣ್ಣ ಕ್ರಿಮಿ ಕೀಟಕಗಳಾದಿಯಾಗಿ, ಬಲವುಳ್ಳ ಮಾನವರು ಕೂಡ ಪರಮಾತ್ಮನ ಅಧೀನರು. ಅಣು - ಋಣ-ತ್ರಣಗಳು ಕೂಡ ಅವನ ಅನುಮತಿ ಇಲ್ಲಿ ಚಲಿಸಲಾರವು. ಅಂಥಾ ಇಡಿ ಬ್ರಹ್ಮಾಂಡ ವನ್ನೇ ಕಾಯುವಂಥ ಶ್ರೀಹರಿಯು ಏನೂ ಬಲವಿಲ್ಲದೆ! ಅರಿಯದೆ ಜೀವಿ ಸುತ್ತಿರುವ ನನ್ನನ್ನೂ ಕೂಡ ಕಾಯುತ್ತಾನೆಂದ ಮೇಲೆ ನನಗ್ಯಾಕೆ ಅಂಜಿಕೆ ಇನ್ನು ಕಂಜನಾಭ ಶ್ರೀನಿವಾಸನ ದಯ ವಿರೇ! ಎಂದಿದ್ದಾರೆ.

ಆವದೇಶದಲಿರೆ ಆವಕಾಲದಲಿರೆ

ಸೇವೆಗೆ ನಾ ತಪ್ಪೆ ಕೃಪೆ ತಪ್ಪಿಸಾ-

ಭಾವಿಕರೊಡೆಯ ಪ್ರಸನ್ನವೆಂಕಟಾದ್ರೀಶ

ಸಾವು ಕಳೆದು ಜೀವಕಾಶ್ರಯನಾಗಿರೆ ॥3॥

ಇಲ್ಲಿ ದಾಸರು, ಭಗವಂತನ ಸರ್ವವ್ಯಾಪ್ತಿತ್ವವನ್ನು ಕೊಂಡಾಡಿದ್ದಾರೆ. ಯಾವ ದೇಶದಲ್ಲೇ ಇರಲಿ-ಯಾವ ಕಾಲದಲ್ಲೆ ಇರಲಿ ತಾವು ಸದಾ - ಸರ್ವದಾ, ಸಂಪೂರ್ಣ ಭಾವದಿಂದ,ಆತ್ಮನಿವೇದನೆಯಿಂದ, ಆತ್ಮ ಸಮರ್ಪಣೆಯಿಂದ ಅವನ ಸೇವೆಗೆ ಬದ್ಧನಾಗಿ ರುವೆನು.

ಇಂಥಹ ಸಮರ್ಪಣೆ ಭಾವ, ಭಗವಂತನ ಸಾನಿಧ್ಯವನ್ನು ಕೊಡುತ್ತದೆ. ಅವನ ಕೃಪೆ ಸದಾ ಸರ್ವದಾ ತಮ್ಮ ಮೇಲಿದ್ದು, ತಮಗೆ ಬರುವ ದುರಿತಗಳನ್ನು ಸಾವು ನೋವುಗಳನ್ನು ಕಳೆದು ಆಶ್ರಯ ಕೊಡುವಾಗ, ಇಂಥ ದಯಾಮಯವಾದ ಭಗವಂತನ ಕರುಣೆ ತಮ್ಮ ಮೇಲಿರುವಾಗ ತಮಗ್ಯಾಕಂಜಿಕೆ. ಇದು ದಾಸರಿಗೊಂದೆ ಅಲ್ಲ ಸಕಲ ಜೀವರಾಶಿಗಳಿಗೆ ಅನ್ವಯವಾಗುವಂತೆ ಹೇಳಿದ್ದಾರೆ.



# ಜಿತಾಮಿತ್ರ ತೀರ್ಥರು

-ಶ್ರೀಧರ ರಾಯಸಂ
98453 27129

ಶ್ರೀ ಮಧ್ವಾಚಾರ್ಯರ ಮುಖ್ಯ ಸಂಸ್ಥಾನದಲ್ಲಿ ಶ್ರೀ ರಾಘವೇಂದ್ರ ತೀರ್ಥ ಸ್ವಾಮಿಗಳವರ ಗುರು ಪರಂಪರೆಯಲ್ಲಿ ವಿರಾಜಮಾನರಾಗಿದ್ದ ಶ್ರೀವಿಬುಧೇಂದ್ರ ತೀರ್ಥರ ಅನುಗ್ರಹ ಸಂಪಾದಿಸಿದ ಶ್ರೀ ಜಿತಾಮಿತ್ರರು ತಮ್ಮ ವೈಭವ, ಪವಾಡಗಳನ್ನು ಪ್ರದರ್ಶಿಸಿ, ಅದೃಶ್ಯವಾದ ಸ್ಥಳ ಜಿತಾಮಿತ್ರ ಗಡ್ಡಿ. ರಾಯಚೂರು ಜಿಲ್ಲೆಯ ಕೃಷ್ಣ ಭೀಮಾ ನದಿಯ ಸಂಗಮ ಪ್ರದೇಶದಲ್ಲಿ ದೇವದುರ್ಗ ತಾಲೂಕು, ಶಿವಪುರ ಗ್ರಾಮದ ಹತ್ತಿರ ಜಿತಾಮಿತ್ರ ಗಡ್ಡಿಯಲ್ಲಿ "ಜಿತಾಮಿತ್ರರು" ವಿರಾಜಮಾನರಾಗಿದ್ದಾರೆ. ನಾಸ್ತಿಕರ ನಿರಾಕಾರ ವಾದ ಖಂಡಿಸಿ,ಆಸ್ತಿಕ ಪಂಥ ಕಟ್ಟಿದ ಮಹಾನ್ ಯತಿಗಳು ರುದ್ರಾಂಶ ಸಂಭೂತರಾದ ಜಿತಾಮಿತ್ರ ತೀರ್ಥರು ಶ್ರೀ ಹರಿಯ ಸಾಕಾರ ಮೂರ್ತಿಯನ್ನು ರುದ್ರದೇವರ ಸಾಕ್ಷಿ ಯುಕ್ತವಾಗಿ ಸಂಸಾರಕ್ಕೆ ಪರಿಚಯಿಸಿದ ಮಹಾನುಭಾವರು.

ಶಿವಪುರದ ಸಾನುಭೋಗರಿಗೆ ಎರಡನೇ ಪುತ್ರನಾಗಿ ಜನಿಸಿದ ಜಿತ್ತಪ್ಪ (ಅನಂತಪ್ಪ) ಲೋಕ ಕಲ್ಯಾಣಕ್ಕಾಗಿ ಕೈಂಕರ್ಯಗೊಂಡ ಕಾರ್ಯ ಅಸಾಮಾನ್ಯ ! ಜಿತ್ತಪ್ಪನಿಗೆ ತನ್ನ ಅಕ್ಕಳ ರೂಪದಲ್ಲಿ ತಂದೆ, ತಾಯಿ, ಬಂಧು, ಬಳಗದ ಎಲ್ಲಾ ಅಂತಃಕರಣ ಪಡೆದಿದ್ದು. ಇದು ಶ್ರೀಹರಿಯ ಕರುಣೆ ಎಂದು ಭಾವಿಸಿದ್ದರು. ಬಾಲ್ಯದಲ್ಲಿ ವಿದ್ಯಾರ್ಜನೆಗೆ ಹೋಗುವ ಬದಲು ದನಗಳನ್ನು ಕಾಯುತ್ತಾ ಹೊಲದಲ್ಲಿ ಕಾಲ ಕಳೆಯುತ್ತಿದ್ದರು. ಎಂಟು ವರ್ಷಕ್ಕೆ ಅಕ್ಕ, ಜಿತ್ತಪ್ಪನಿಗೆ ಉಪನಯನದ ಧಾರ್ಮಿಕ ಕಾರ್ಯಪೂರೈಸಿದಳು. ಲೋಕವನ್ನೇ ಪಾವನಗೊಳಿಸುವ ದೇವಾಂಶ ಸಂಭೂತ ಜಿತಾಮಿತ್ರರ ಪಾಲನ ಪೋಷಣೆ ಲೋಕ ವಿಲಕ್ಷಣವಾಗಿದ್ದು ಸಹಜ! ಅಕ್ಕಳ ನೆಪದಲ್ಲಿ ಜಗನ್ನಾಟಕ ಸೂತ್ರಧಾರಿ ಶ್ರೀ ಹರಿಮೋಹದ ಮುಸುಕು ಹಾಕಿ, ಜಿತಾಮಿತ್ರರನ್ನು ಸಲಹಿದ್ದು, ಪೋಷಣೆ ಮಾಡಿದ್ದು,ಭಕ್ತರಿಗೆ ಸುವರ್ಣಾವಕಾಶದ ಬದುಕಾಯಿತು. ಬಾಲ್ಯದಲ್ಲಿ ಜಿತ್ತಪ್ಪ ಅಕ್ಕ ಊಟ ಬಡಿಸುವಾಗ,ತನ್ನ ಜನಿವಾರ ಧರಿಸಿ ನಂತರ ಜನಿವಾರವನ್ನು ಹೊರತೆಗೆದು ನೆಲಕ್ಕೆ ತಾಗದಂತೆ ಗೂಟಕ್ಕೆ ಹಾಕುತ್ತಿದ್ದ!! ಭವಿಷ್ಯದಲ್ಲಿ ಜಿತ್ತಪ್ಪ ಜನಿವಾರವಿಲ್ಲದ ಯತಿಯಾಗುವ ಸಂದರ್ಭ ಸೂಚಿಸುವಂತೆ ಆತನಿಗೆ ಜನಿವಾರದ ಸಂಪರ್ಕ ದೂರವಾಗಿಯೇ ಉಳಿಯುತ್ತಿತ್ತು. !!

15ನೇ ಶತಮಾನದ ಮಧ್ಯಭಾಗದಲ್ಲಿ ಜಿತ್ತಪ್ಪ ಭಾಗ್ಯೋದಯದ ಕಾಲ ಕಂಡ ಅದೃಷ್ಟವಂತರು.ಒಮ್ಮೆ ಶ್ರೀವಿಬುಧೇಂದ್ರ ತೀರ್ಥರು ಅನಂತಪ್ಪನವರ ಶಾನುಭೋಗ ಆಡಳಿತಕ್ಕೆ ಸೇರಿದ್ದ ಶಹಪುರ ತಾಲೂಕ ಅಗ್ನಿಹಾಳು ಗ್ರಾಮಕ್ಕೆ ಆಗಮಿಸಿದ್ದರು.ಬ್ರಾಹ್ಮಣ ಸಮಾಜದ ಆಚಾರ ವಿಚಾರಗಳಿಂದ ದೂರ ಸಾಗಿದ್ದ ಜಿತ್ತಪ್ಪ, ತಾನೂ ಸ್ವಾಮಿಗಳನ್ನು ಸ್ವಾಗತಿಸಲು ಹೊರಟನು. ಶ್ರೀವಿಬುಧೇಂದ್ರ ತೀರ್ಥರು ಜನಿವಾರವಿಲ್ಲದ ಜಿತ್ತಪ್ಪನಿಗೆ ನಸು ನಗುತ್ತಾ ಯಜ್ಞೋಪವೀತ ಯಾಕಿಲ್ಲ?ಎಂದು ಪ್ರಶ್ನಿಸಿದರು. ನನಗೆ ಯಜ್ಞೋಪವೀತ ಎಂದರೆ ಏನೂ ಗೊತ್ತಿಲ್ಲವೆಂದು ಜಿತ್ತಪ್ಪ ಉತ್ತರಿಸಿದಾಗ, ಯತಿಗಳು ಅವನ ಅಮಾಯಕತೆ ಅರಿತು. ಅಂತರಂಗದಲ್ಲಿ ಆಶೀರ್ವದಿಸಿ, ಅದರ ಮಹತ್ವ ತಿಳಿಸಿದಾಗ ಜಿತ್ತಪ್ಪ ಅಂದಿನಿಂದ ಜನಿವಾರ ತೆಗೆಯದೆ ಧರಿಸಲು ಪ್ರಾರಂಭಿಸಿದ!! ಜಿತ್ತಪ್ಪನ ಧರ್ಮಶ್ರದ್ಧೆ, ಪ್ರಾಂಜಲ ಪ್ರೀತಿ, ಸದೃಢತೆಗಳನ್ನು ಕಂಡು ಪ್ರಸನ್ನರಾಗಿ ಶ್ರೀವಿಬುಧೇಂದ್ರ ತೀರ್ಥರು ಅವನು ಆಹ್ವಾನಿಸಿದ ಮನೆಗೆ ಬಿಡಾರ ಮಾಡಲು ಸಮ್ಮತಿಸಿದರು. ಜಿತ್ತಪ್ಪನ ಬಗ್ಗೆ ಅನುಕಂಪಗೊಂಡು ವಿಬುಧೇಂದ್ರ ತೀರ್ಥರು ಅನುಗ್ರಹ ಮಾಡಿ ಜಿತ್ತಪ್ಪ ಪದೇ ಪದೇ ಜನಿವಾರ ಹೊರತೆಗೆಯುವುದನ್ನು ಕಂಡು ಸನ್ಯಾಸಿಯಾಗುವೆ ಎಂದು ಭವಿಷ್ಯವಾಣಿ ನುಡಿದಿದ್ದು ಮುಂದೆ ಸತ್ಯವಾಯಿತು!! ಜಿತ್ತಪ್ಪನ ಮನೆಯಲ್ಲೇ ಉಳಿದು ಶ್ರೀಪಾದಂಗಳವರು ದೇವತಾ ಪೂಜೆ ತೀರ್ಥಪ್ರಸಾದ ನೆರವೇರಿಸಿದುದನ್ನು ಕಂಡು,ಜಿತ್ತಪ್ಪನ ಮನದಲ್ಲಿ ಮಣ್ಣಿನಲ್ಲಿ ಮೈಸವೆಸಬೇಕೆಂಬ ಮನ ಪ್ರವೃತ್ತಿ ಮಾಯವಾಗಿ ಮಾಧವನ ಪೂಜಾರಾಧನೆ ಮಾಡಿ ಮಡಿಯ ಬೇಕೆಂಬ ಉತ್ಕಟ ಆಕಾಂಕ್ಷೆ ಅಭಿಲಾಷೆ ಆತನ ಅಂತರಾಳದಲ್ಲಿ ಗೂಡು ಕಟ್ಟಿತ್ತು.

ತೀರ್ಥಯಾತ್ರೆಗೆ ಶ್ರೀ ವಿಬುಧೇಂದ್ರ ತೀರ್ಥರು ಕಾಶಿಗೆ ಹೋಗಲು ತೀರ್ಮಾನಿಸಿದಾಗ ಜಿತ್ತಪ್ಪ ವ್ಯಾಕುಲಗೊಂಡನು.ವಾರಣಾಸಿಯಲ್ಲಿ ಗಂಗೆಯಲ್ಲಿ ಮಿಂದು ವಿದ್ವತ್ಸಭೆಯಲ್ಲಿ ವಾದಿಗಳನ್ನು ಗೆದ್ದು, ವೇದವ್ಯಾಸರ ಸೇವೆ ಮಾಡುವ ಸಂಕಲ್ಪ ಯತಿಗಳು ತಿಳಿಸಿದರು. ಜಿತ್ತಪ್ಪನಿಗೆ ಗುರುಗಳಿಲ್ಲದ



ಮನೆ,ದೇವತಾರ್ಚನೆ ನೋಡುವ ಪುಣ್ಯ ತಪ್ಪುವುದಲ್ಲ ಎಂದು ಚಿಂತಿಸುತ್ತಿರಲು,ಯತಿಗಳು ಆತನ ಚಿಂತೆ ಗ್ರಹಿಸಿ,ಶ್ರೀನರಸಿಂಹ ಸಾಲಿಗ್ರಾಮ ನಿತ್ಯ ಪೂಜೆಗೆ ನೀಡಿದರು. ಶ್ರೀವಿಬುಧೇಂದ್ರ ತೀರ್ಥರು ಕಾಶಿಗೆ ಹೊರಟ ನಂತರ ನಿತ್ಯ ಪೂಜೆ ಮಾಡಲು ಜಿತ್ತಪ್ಪ ಸಾಲಿಗ್ರಾಮ ಪೂಜೆ ದೇವತಾರ್ಚನೆ ಮಾಡಿ, ನೈವೇದ್ಯ ಮಾಡಿ,ದೇವರು ನೈವೇದ್ಯ ಸ್ವೀಕರಿಸುವಂತೆ ಹಠಮಾಡಿದ ! ಎಷ್ಟೇ ಪ್ರಯತ್ನಿಸಿದರೂ, ಭಗವಂತ ನೈವೇದ್ಯ ಸ್ವೀಕರಿಸಲಿಲ್ಲ ಭಾರವಾದ ಕಲ್ಲಿನಿಂದ ತನ್ನ ತಲೆಯನ್ನು ಒಡೆದು ಕೊಳ್ಳಲು ಜಿತ್ತಪ್ಪ ಪ್ರಯತ್ನಿಸಿದ ! ಎಷ್ಟೋ ಹೊತ್ತಿನ ನಂತರ ಕರಾಳವದನನಾಗಿದ್ದ ನರಹರಿ ಕರಿಕಲ್ಲಿನಲ್ಲಿದ್ದು ಬಾಯಿ ತೆರೆದು ಕುಲು ಕುಲು ನಗುವಿನ ಶಬ್ದ ಮಾಡುತ್ತಾ ಭೋಜನ ಸ್ವೀಕರಿಸಿದ ದೃಶ್ಯ ಅಪೂರ್ವ!! ಜಿತ್ತಪ್ಪ ತುತ್ತು ಮಾಡಿ ಸಾಲಿಗ್ರಾಮಕ್ಕೆ ಊಟ ಮಾಡಿಸಿದ್ದು ಹೆತ್ತ ತಾಯಿ ತನ್ನ ಮಗುವಿಗೆ ತುತ್ತು ಮಾಡಿ ಉಣಿಸಿದ ಸಂದರ್ಭದಂತೆ ಕಾಣುತ್ತಿತ್ತು.

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇರವೌ
ಮದ್ಭಕ್ತಾಃ ಯತ್ರಗಾಯಂತಿ ತತ್ರ ಶಿಷ್ಠಾಮಿ ನಾರದ ॥

ಭಗವಂತ ಕೇವಲ ವೈಕುಂಠವಾಸಿಯಾಗಿರದೆ ಯೋಗಿಗಳ ಹೃದಯದಲ್ಲಿ ಸದಾ ನೆಲಸದೆ ನಿಜವಾದ ಭಕ್ತರು ಎಲ್ಲಿ ಹಾಡಿ ಪಾಡಿ ಕುಣಿದಾಡಿ ಕೊಂಡಾಡುವರೋ ಅಲ್ಲಿ ಸದಾ ವಾಸಿಸುತ್ತೇನೆ ಎಂದು ಸಾಲಿಗ್ರಾಮ ರೂಪದಲ್ಲಿ ಜಿತ್ತಪ್ಪ ಅರ್ಪಿಸಿದ ನೈವೇದ್ಯ ಪ್ರೀತಿಯಿಂದ ಸ್ವೀಕರಿಸಿದ್ದು ಅದ್ಭುತ ದೃಶ್ಯವಾಗಿತ್ತು!!

ಜಿತ್ತಪ್ಪನಿಗೆ ಆತನ ಅಕ್ಕ ತಕ್ಕ ಕನ್ಯೆಯನ್ನು ತಂದು ವಿವಾಹ ಮಾಡಿಸಿದಾಗ, ನಿಷ್ಕಾಮ ಜೀವನ ದಾಂಪತ್ಯ ನಡೆಸಿದರು. ಸ್ವಲ್ಪ ಕಾಲದ ನಂತರ ಶ್ರೀ ವಿಬುಧೇಂದ್ರ ತೀರ್ಥರು, ಕಾಶಿಯಲ್ಲಿ ಪರವಾದಿ ಗಳನ್ನು ವಾದದಲ್ಲಿ ಸೋಲಿಸಿ ಮಧ್ವಮತದ ಶ್ರೇಷ್ಠತೆ ಪ್ರದರ್ಶಿಸಿ ಪುನಃ ಜಿತ್ತಪ್ಪನ ಗ್ರಾಮಕ್ಕೆ ಆಗಮಿಸಿದಾಗ ಶ್ರದ್ಧೆಯಿಂದ ಜಿತ್ತಪ್ಪ ಗುರುಗಳನ್ನು ಸ್ವಾಗತಿಸಿದ.ಜಿತ್ತಪ್ಪನ ವ್ಯಕ್ತಿತ್ವ ಪರಿವರ್ತನೆಯಾಗಿರುವುದನ್ನು ಕಂಡು ಗುರುಗಳು ಸಂತೋಷಪಟ್ಟರು. ಜಿತ್ತಪ್ಪನ ಮುಖದಲ್ಲಿ ಧಾರ್ಮಿಕ ತೇಜಸ್ಸು ಕಂಡು ಮಹದೇವನ ಸಾಕಾರ ಮೂರ್ತಿ ಎಂದು ಗುರುಗಳು ಕೊಂಡಾಡಿದರು. ಶಿಷ್ಯನಿಗೆ ಜ್ಞಾನೋದಯವಾಗಿರುವುದನ್ನು ಕಂಡು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಲು ನಿಶ್ಚಯಿಸಿದರು. ಶ್ರೀಮಧ್ವಾಚಾರ್ಯರ ಯತಿ ಪ್ರಣವ ಕಲ್ಪದಲ್ಲಿ ಅಪ್ಪಣೆ ಕೊಡಿಸಿದ ಪ್ರಕಾರ, ವೈದಿಕ, ಲೌಕಿಕ ಸರ್ವ ಸದ್ಗೃಹಸ್ಥರ ಸಮ್ಮುಖದಲ್ಲಿ ಧರ್ಮ ಶಾಸ್ತ್ರ ವಿಧಿ ವಿಧಾನದಂತೆ ಜಿತ್ತಪ್ಪನಿಗೆ ಪರಮಹಂಸ ಪದವಿಯನ್ನು ದಯಪಾಲಿಸಿ ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿ "ಜಿತಾಮಿತ್ರ ತೀರ್ಥ" ರೆಂದು ನಾಮ ಕರಣ ಮಾಡಿದರು.ಜಿತಾಮಿತ್ರರಿಗೆ ವೇದಗಳನ್ನು ಸಕಲ ಶಾಸ್ತ್ರಗಳನ್ನು ಶ್ರೀಮತ್ಸ ಮೀರ ಸಿದ್ಧಾಂತವನ್ನು ಸುಧಾದಿ ಗ್ರಂಥಗಳನ್ನು ಅನೇಕ ವರ್ಷಗಳವರೆಗೆ ಮನನ ಮಾಡಿಸಿದರು. ವೇದಾಂತ ಸಾಮ್ರಾಜ್ಯ ಜಿತಾಮಿತ್ರರಿಗೆ ವಹಿಸಿಕೊಟ್ಟು ಶ್ರೀ ವಿಬುಧೇಂದ್ರ ತೀರ್ಥರು ಕ್ರಿ.ಶ. 1490 ರಲ್ಲಿ ಪರಾಭವ ನಾಮ ಸಂವತ್ಸರ ಮಾರ್ಗ ಶಿರ ಶುಕ್ಲ ಪಕ್ಷ ದಶಮೀ ತಮಿಳುನಾಡ ತಾಮ್ರ ಪರ್ಣಿ ತೀರದ ತಿರುನಲ್ವೆಲಿಯಲ್ಲಿ ವೃಂದಾವನಸ್ಥರಾದರು. ಶ್ರೀ ಜಿತಾಮಿತ್ರರು ಗುರುಗಳ ಆದೇಶದಂತೆ ಮಹಾ ಸಂಸ್ಥಾನದ ಆಡಳಿತ ನಡೆಸುತ್ತಾ ಅನೇಕ ಶಿಷ್ಯರಿಗೆ ಶ್ರೀಮದಾನಂದತೀರ್ಥರ ಸಿದ್ಧಾಂತವನ್ನು ಸರಳವಾಗಿ ಉಪದೇಶಿಸಿದರು. ಸ್ವಜನ ಪಕ್ಷಪಾತ, ಆಸೆ ಆಕಾಂಕ್ಷೆಗಳಿಗೆ ಮಾರು ಹೋಗದೇ ಅನ್ಯರ ಹಿತಕ್ಕಾಗಿ ಶ್ರಮಿಸುವುದು ಸನ್ಯಾಸ ಧರ್ಮವೆಂದು ಅರಿತು. ಅದನ್ನು ನಿತ್ಯ ಜೀವನದಲ್ಲಿ ಸಾಧನೆ ಮಾಡಿದ ಮಹಾನ್ ಯತಿಗಳು.ಕೃಷ್ಣಾ ನದೀ ತೀರದಲ್ಲಿ ಶಿಷ್ಯರಿಗೆ ಪಾಠ ಹೇಳಿ ಕೊಡುವಾಗ ನದಿಯ ಪ್ರವಾಹ ಬಂದಾಗ ದಡದ ಬದಿಯಲ್ಲಿದ್ದ ಮರದಲ್ಲಿ ಏಳು ದಿವಸ ಅಲ್ಲೇ ಕುಳಿತ್ತಿದ್ದುದು ಪವಾಡ ಸದೃಶವಾಗಿತ್ತು!! ಅವತಾರಿ ಪುರುಷರಾಗಿದ್ದ ಗುರುಗಳನ್ನು ಕಂಡು ಶಿಷ್ಯರು ಅಚ್ಚರಿಪಟ್ಟರು.

ವಿಜಯನಗರದಲ್ಲಿ ಮಹಾಮೇಧಾವಿಯಾಗಿದ್ದ ಧರ್ಮ ಶಾಸ್ತ್ರ ಪಾಂಡಿತ್ಯ ಪಡೆದಿದ್ದ ರಾಮಚಂದ್ರಾಚಾರ್ಯರಿಗೆ ಜಿತಾಮಿತ್ರ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಲು ನಿರ್ಧರಿಸಿದರು. ನಂತರ ರಾಮಚಂದ್ರಾ ಚಾರ್ಯರು ಸಂನ್ಯಾಸ ಆಶ್ರಮ ಶ್ರೀಜಿತಾಮಿತ್ರರಿಂದ ಸ್ವೀಕರಿಸಿ, ಮಹಾ ಸಂಸ್ಥಾನದ ನೂತನ ಯತಿಗಳಾಗಿ, "ರಘು ನಂದನ ತೀರ್ಥರು"ಎಂದು ನಾಮಾಂಕಿತರಾದರು.

ಕೃಷ್ಣಾ ನದೀ ತೀರದ ಜ್ಞಾನ ವೃಕ್ಷದಲ್ಲಿ (ಗೋನ ವೃಕ್ಷ) ವಾಸ ಮಾಡುತ್ತಾ, ಸ್ವಪ್ನದಲ್ಲಿ ಶಿಷ್ಯರಿಗೆ ತಮ್ಮ ವೃಂದಾವನದ ಅವಶ್ಯಕತೆ ಇಲ್ಲವೆಂದು ತಿಳಿಸಿ ಅದೃಶ್ಯ ರಾದರು. ಕ್ರಿ.ಶ. 1497 ರಲ್ಲಿ ಪ್ರಮಾದಿ ಸಂವತ್ಸರ ಮಾರ್ಗಶಿರಮಾಸ, ಅಮಾ ವಾಸ್ಯೆ ಶ್ರೀಜಿತಾಮಿತ್ರರು ಅದೃಶ್ಯರಾದರು.ಅಂದಿನಿಂದ ಶಿಷ್ಯರು, ಭಕ್ತರು,ಇವರ ಆರಾಧನೆ ಆಚರಿಸುತ್ತಿದ್ದಾರೆ. ಶ್ರೀಜಯತೀರ್ಥರು, ವಿಬುಧೇಂದ್ರ ತೀರ್ಥರು, ಶ್ರೀ ಕೃಷ್ಣ ದ್ವೈಪಾಯನ ತೀರ್ಥರು ಮತ್ತು ಶ್ರೀರಾಘವೇಂದ್ರ ತೀರ್ಥರು ಇಲ್ಲಿರುವ ಶಿಲೆ ಗಳಲ್ಲಿ ಸನ್ನಿಹಿತರಾಗಿರುವುದು ವಿಶೇಷ!! ಶ್ರೀಸುಶೀಲೇಂದ್ರ ತೀರ್ಥರು ಜಿತಾಮಿತ್ರರ ದರ್ಶನ ಪಡೆದು ಜ್ಞಾನ ವೃಕ್ಷದ ಹತ್ತಿರ ಶ್ರೀಮೂಲ ರಾಮದೇವರ ಪೂಜೆ ಮಾಡಿ ಕೃತಾರ್ಥರಾಗಿದ್ದಾರೆ. ಶ್ರೀಸುಯಮೀಂದ್ರ ತೀರ್ಥರು ಜಿತಾಮಿತ್ರತೀರ್ಥರ ಗಡ್ಡಿಯ ಹತ್ತಿರ ದೇವತೆಗಳ ಪೂಜೆ ಮಾಡಿದಾಗ ವರಪ್ರದಾನವೆಂಬಂತೆ ಸೇವಂತಿಗೆ ಹೂಮಾಲೆ ಪಡೆದಿದ್ದು ಅಪೂರ್ವ ದೃಶ್ಯವಾಗಿತ್ತು. ಜಿತಾಮಿತ್ರರಿಂದ ಅನೇಕ ನಿರಕ್ಷರ ಕುಕ್ಷಿಗಳು ಅಪರೋಕ್ಷ ಜ್ಞಾನಿಗಳಾಗಿದ್ದು, ಯತಿವರ್ಯರ ಮಹಾನ್ ಸಾಧನೆ, ಭಗವದ್ಭಕ್ತಿ ಪ್ರದರ್ಶನವಾಗುತ್ತದೆ. ಪ್ರತಿವರ್ಷ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ಶಿವಪುರ ಗ್ರಾಮದ ಹತ್ತಿರ ಜಿತ್ರಾಮಿತ್ರಗಡ್ಡಿಯಲ್ಲಿ ಮಾರ್ಗಶಿರ ಮಾಸ,ಅಮಾವಾಸ್ಯೆ ಜಿತಾಮಿತ್ರರ ಆರಾಧನೆ ಭಕ್ತರಿಂದ ನೆರವೇರುತ್ತದೆ.

ಸಪ್ತರಾತ್ರಂ ಕೃಷ್ಣ ವೇಣ್ಯಾಮುಷಿತ್ವಾ ಪುನರುತ್ಥಿತಂ !
ಜಿತಾಮಿತ್ರ ಗುರುಂ ವಂದೇ ವಿಬುಧೇಂದ್ರ ಕರೋದ್ಭವಮ್॥

## ಧಾರಾವಾಹಿ - 6

# ಆಳ್ವಾರರ ಭಗವದನುಭವ


ಡಾ || ಸಿ. ಎಸ್. ಊರ್ಮಿಳಾ
93804 26830

ಆಂಡಾಳ್ ಭಗವಂತನನ್ನು ವರಿಸಲು ಪಟ್ಟ ಪಾಡು ಜಗತ್ಪ್ರಸಿದ್ಧವಾದದು. ಗೋದಾದೇವಿ ಭೂಮಾತೆಯ ಪುತ್ರಿ - ಶೂಡಿಕೊಡುತ್ತ ನಾಯ್ಚ್ಚಿಯಾರ್ ಎಂದೇ ಪ್ರಸಿದ್ಧಳಾದವಳು - ತನ್ನಗೆಳತಿಯರನ್ನೆಲ್ಲಾ ಸೇರಿಸಿಕೊಂಡು ಮಾರ್ಹಳಿ ಮಾಸವ್ರತ, ಮಾರ್ಗಶಿರ ಮಾಸವ್ರತವನ್ನು ಕೈಗೊಂಡ ಮಹಾ ಸಾಧ್ವಿಮಣಿ. ತ್ರೇತಾಯುಗದಲ್ಲಿ ಸೀತಾದೇವಿಯು ಭೂಮಿಯನ್ನು ಭೇದಿಸಿಕೊಂಡು ಬಂದರೆ ಕಲಿಯುಗದಲ್ಲಿ ಗೋದಾ ಶ್ರೀ ವಿಷ್ಣುಚಿತ್ತರ ತುಳಸೀವನದಲ್ಲಿ ಅಯೋನಿಜೆಯಾಗಿ ಅವತರಿಸುತ್ತಾಳೆ. 'ಆಳ್ವಾರ್' ಎಂಬುದು ಪುಲ್ಲಿಂಗ ರೂಪವಾದರೆ 'ಆಂಡಾಳ್' ಎಂಬುದು ಸ್ತ್ರೀಲಿಂಗರೂಪ. ಇದಕ್ಕೆ ಸ್ವಾಮಿ ಎಂಬ ಅರ್ಥವಿದೆ. ಶ್ರೀರಂಗನಾಥನಿಗೆ ಗೋದಾದೇವಿಯು ಸ್ವಾಮಿಯಾದ ಕಾರಣ ಆಕೆ ಆಂಡಾಳ್ ಆದಳು. ಈ ಮಾರ್ಗಶಿರಮಾಸ ವ್ರತವನ್ನು ಕೈಗೊಳ್ಳುವಾಗ ಪೂಜೆಯ ಕೆಲವು ವಿಧಿ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಅದನ್ನೆಲ್ಲಾ ತಿರುಪ್ಪಾವೈಯಲ್ಲಿ ವ್ರತಾಚರಣೆಯ ಬಗ್ಗೆ ವಿವರಿಸುತ್ತಾಳೆ. "ನೈಯುಣ್ಣೋಂ ಪಾಲುಣ್ಣೋಂ ನಾಳ್ಕಾಲೆ ನೀರಾಡಿ ಮೈಯಿಟ್ಟೆ ಘುದೋಂ ಮಲರಿಟ್ಟು ನಾಮುಡಿವೋಂ ಶೆಯ್ಯಾದನ ಚೆಯ್ಯೋಂ ತೀಕ್ಕುರುಳ್ಳೈ ಚೆನ್ರೋದೋಂ" - ಎಂದು ವ್ರತನಿಯಮಗಳ ಪಟ್ಟಿಯನ್ನೇ ನೀಡುತ್ತಾಳೆ. ಅಷ್ಟೇ ಅಲ್ಲ ತನ್ನ ಗೆಳತಿಯರನ್ನಾಗಿ ತನ್ನೊಡನೆ ಈ ವ್ರತಾಚರಣೆಗಾಗಿ ಕರೆದಿರುವುದು ಅತ್ಯಂತ ಹೃದಯಂಗಮವಾಗಿದೆ. ದ್ವಾಪರಯುಗದಲ್ಲಿ ಶ್ರೀ ಕೃಷ್ಣನನ್ನು ಸೇರಲು ಗೋಪಿಯರೆಲ್ಲಾ ಸೇರಿ ಕಾತ್ಯಾಯಿನಿ ವ್ರತವನ್ನು ಕೈಗೊಂಡಂತೆ ಕಲಿಯುಗದಲ್ಲಿ ಆಂಡಾಳ್ ದೇವಿಯು ಮಾರ್ಗಶಿರ ಮಾಸ ವ್ರತವನ್ನು ಭಗವಂತನಿಗೆ ಪೂಮಾಲ್ಯೆಯೊಂದಿಗೆ ಪಾಮಾಲ್ಯೆಯನ್ನೂ ಸಮರ್ಪಿಸಿದ್ದಾಳೆ.

ಹೀಗೆ ತಿರುಪ್ಪಾವೈ ವ್ರತಮಾಡಿದರೂ-ಕೈಂಕರ್ಯಕ್ಕೆ ಆಸೆಪಟ್ಟಿದ್ದೇ ಹೊರತು ಭಗವಂತನೊಂದಿಗೆ ಸಂಶ್ಲೇಷ ಸಿಗಲಿಲ್ಲ. ಆ ವೇದನೆಯಿಂದ ಕಡುನೊಂದಳೋ ಎಂಬಂತೆ ತೈ ಮತ್ತು ಮಾಶೀಮಾಸದಲ್ಲಿ ಅಂದರೆ ಮಕರ ಮತ್ತು ಮೇಷ ಮಾಸಗಳಿಗೆ ಸಂಬಂಧಪಟ್ಟಂತೆ ಮತ್ತೊಂದು ವ್ರತವನ್ನು ಕೈಗೊಳ್ಳುತ್ತಾಳೆ.

ಮನ್ಮಥನ ಕಾಲಿಗೇ ಬಿದ್ದು ಶ್ರೀ ಕೃಷ್ಣನನ್ನೇ ತನ್ನ ಪತಿಯನ್ನಾಗಿಸಿ ಕೊಡಬೇಕೆಂದು ಗೌರೀ ಶಂಕರ ವಿವಾಹಕ್ಕಾಗಿ ತನ್ನ ಅಂಗಗಳನ್ನೇ ಸುಡಿಸಿಕೊಂಡ ಆ ಅನಂಗದೇವನಲ್ಲಿಯೇ ಮೊರೆಯಿಡುತ್ತಾಳೆ. ಇದೇ "ನಾಯಿಚ್ಚಿಯಾರ್ ತಿರುಮೊಳಿ(ಮನ್ಮಥ)" ತಿರುಪ್ಪಾವೈಯಲ್ಲಿ ಬಾಲ ಗೋದೆಯಂತೆ ಮೆರೆದಿದ್ದಾಳೆ. ನಾಯಚ್ಚಿಯಾರ್ ತಿರುಮೊಳಿಯಲ್ಲಿ ಫ್ರೌಢಗೋದೆಯಂತೆ ಮಿಂಚಿದ್ದಾಳೆ.ತಿರುಪ್ಪಾವೈಯಲ್ಲಿ "ನಾರಾಯಣನೇ ನಮಕ್ಕೇ ಪರೈ ತರುವಾನ್" ಎಂದು ಅಚಲವಾದ ವಿಶ್ವಾಸದಿಂದ ವ್ರತವನ್ನು ಕೈಗೊಳ್ಳುತ್ತಾಳೆ.

ಮಾರ್ಹಳಿ ತಿಂಗಳ್ ಮದಿನಿರ್ಮೆಂದ ನನ್ನಾಳಾಲ್
ನೀರಾಡ ಪ್ಪೋದುವೀರ್ ಪೋದುಮಿನೋ ನೇರಿಳೈಯಿರ್



ಶೀರ್ಮಲುಹುಮ್ ಆಯಪ್ಪಾಡಿ ಚ್ಚೆಲ್ವ ಚಿರುಮಾರ್ಹಾಳ್

ಕೂರ್ವೇಲ್ ಕೊಡುಂದೊಳಿಲನ್ ನನ್ದಗೋಪನ್ ಕುಮಾರನ್

ಏರಾರ್ನ್ದಕಣ್ಣಿ ಯಶೋದೆ ಇಳಮ್ ಶಿಂಗಮ್

ಕಾರ್ಮೇನಿ ಚೆಂಗಣ್ ಕದಿರ್ ಮದಿಯಮ್‌ಪೋಲ್ ಮಹತ್ತಾನ್

ನಾರಾಯಣನೇ ನಮಕ್ಕೇ ಪರೈ ತರುವಾನ್

ಪಾರೋರ್ ಪುಹಳ ಪಡಿಂದೆಲೋರೆಂಬಾವಾಯ್ (ತಿರುಪ್ಪಾವೈ - 1 ನೇ ಪಾಶುರ) ಆಂಡಾಳ್ ತಿರುಪ್ಪಾವೈಯ ವ್ರತವನ್ನು ಕೈಗೊಂಡಾಗ 'ಏಲ್‌ಓರ್ ಎಮ್ ಪಾವಾಯ್ ಎಂದು 28 ಸಲ ಮಂತ್ರಜಪದಂತೆ ಮೊರೆಯಿಟ್ಟಳು. ಈಗ ನಾಚ್ಚಿಯಾರ್ ತಿರುಮೊಳಿಯ - ಪಾಶುರದಲ್ಲಿ ತೈಯೊರುತಿಂಗಳ್... ಮಾಶಿಮುನ್ನಾಳ್ ಎಂದು 48 ದಿನಗಳ ವರೆಗೆ ಒಂದು ಮಹಾಮಂಡಲದ ಕಾಲದವರೆಗೆ ಆಂಡಾಳ್ ವ್ರತವನ್ನು ಕೈಗೊಳ್ಳುತ್ತಿದ್ದಾಳೆ.

ತೈಯಾರು ತಿಂಗಳುಮ್ ತರೈವಿಳಿಕ್ಕಿತ್ತಣ್ ಮಂಡಲವಿಟ್ಟು ಮಾಶಿಮುನ್ನಾಳ್

ಐಯ್ಯನುಣ್ ಮಣರ್ಕ್ಕೊಂಡು ತೆರುವಣಿಂದು ಅಳಹಿನುಕ್ಕು ಅಲಂಗರಿತ್ತನಂಗದೇವಾ

ಉಯ್ಯವುಮ್ ಅಂಗೊಲೋವೆನ್ರು ಶೊಲ್ಲಿಉನ್ನೈಯುಮ್ ಉಮ್ಬಿಯೈಯುಮ್ ತೊಳುದೇನ್

ವೆಯ್ಯದೋರ್ ತಳಲುಮಿಳ್ ಶಕ್ಕರಕ್ಕೈ ವೇಂಗಡವರ್ಕು ಎನ್ನೈವಿದಿಕಿತ್ತಿಯೇ॥

(ನಾಯಚ್ಚಿಯಾರ್ ತಿರುಮೊಳಿ - 1ನೇಪಾಶುರ)

ಪತಿಯೇ ಪರದೈವವೆಂದು ನಂಬಿದ ಆ ಪಾರ್ವತಿಗಾಗಿ ಶಿವನನ್ನು ಸೇರಿಸಿಕೊಟ್ಟು, ಫಾಲನೇತ್ರದಿಂದ ಭಸ್ಮೀ ಭೂತನಾದ ಪ್ರೇಮದೇವಾ ಮನ್ಮಥವೇ ಪತಿಯೇ ಪರದೈವ ಎಂದು ನಂಬಿರುವ ನನಗೂ ಶ್ರೀರಂಗ ಮನ್ನಾರನ್ನೇ ಕೊಟ್ಟು, ವಿವಾಹ ಮಾಡಿಸು ಎಂದು ಮನ್ಮಥನನ್ನೇ ಪ್ರಾರ್ಥಿಸುತ್ತಾಳೆ. ಅನೇಕಾನೇಕ ಭಾವನಾಲಹರಿಗಳಲ್ಲಿ ಮೀಯುತ್ತಾಳೆ. ತರೈ ಎಂದರೆ ನನ್ನ ತಾಯಿಯಾದ ಈ ಭೂದೇವಿಯನ್ನು ಗುಡಿಸಿಸಾರಿಸಿ (ವಿಳಕ್ಕಿ) ತಣ್ ಮಂಡಲಾವಿಟ್ಟು ಅಂದರೆ ಮನ್ಮಥವ್ರತಾಂಗವಾಗಿ ಮಂಡೂಕಾರದಲ್ಲಿ ಶಿಲ್ಪ ಕಲ್ಪ ಶಾಸ್ತ್ರದ ಪ್ರಕಾರ ರಂಗೋಲೆ ಹಾಕಿದೆ. ಆ ರಂಗೋಲೆಯ ಮಣ್ಣಾದರೂ ಹೇಗಿರುತ್ತದೆ ಗೊತ್ತೆ! ಐಯನುಣ್ ಮಣಲ್‌ಕೊಂಡು - ಅಂದರೆ ಇಡಿದು ಜರಡೆ ಯಾಡಿ ನುಣ್ಣನೆಯ ಬಿಳಿರಂಗೋಲೆ ಮರಳಿನಿಂದ ಹೊಸ ಹೊಸ ಕಲಾವಂತಿಕೆಯಿಂದ ಚೆನ್ನಾಗಿ ರಂಗವಲ್ಲಿ ಇಟ್ಟು ಸಿಂಗರಿಸುತ್ತೇನೆ.

ಇಷ್ಟೇ ಅಲ್ಲ ನಾ ಮಾಡುವ ಕೈಂಕರ್ಯವನ್ನೆಲ್ಲಾ ಇವೆಲ್ಲವನ್ನೂ " ಶ್ರೀಮನ್ನಾರಾಯಣ ಯೇತಿ' ಎಂದು ಸಮರ್ಪಿಸುತ್ತೇನೆ.

ಈ ಪಾಶುರದಲ್ಲಿ ಭಗವಂತನ ಆರಾಧನೆಗಾಗಿ ಹೇಗೆಲ್ಲಾ ತಿರು ವೀದಿಗಳಲ್ಲಿ ರಂಗೋಲೆಯನ್ನು ಇಟ್ಟು ಸ್ವಾಗತಿಸುವ ರೀತಿ ಅತ್ಯಂತ ಮನೋಜ್ಞವಾಗಿದೆ. ಇದು ಭಾರತೀಯ ಸಂಸ್ಕೃತಿಯ ಕೈಗನ್ನಡಿಯಾಗಿದೆ. ಪರಮಾತ್ಮನನ್ನು ಕಾಣಲು ಬಹಿರಂಗ ಶುದ್ಧಿ, ಅಂತರಂಗಶುದ್ಧಿ ಇವೆರಡೂ ಅವಶ್ಯಕ. ಭೂಮಾತೆಯನ್ನು ಪೂಜಿಸುವುದು. ನದಿಗಳನ್ನು ಗಂಗಾಮಾತೆ, ಕಾವೇರಿ ಮಾತೆ ಎಂದು ಪೂಜಿಸುವುದು ಭಾರತೀಯರ ವೈಶಿಷ್ಟ್ಯ. ಇಂದಿಗೂ ನಮ್ಮ ನಾಡಿನಲ್ಲಿ ಮಾರ್ಗಶಿರ, ತೈಮಾಸಗಳಲ್ಲಿ ಮನೆಯ ಮುಂದೆ ದೊಡ್ಡ ದೊಡ್ಡ ರಂಗವಲ್ಲಿ ಹಾಕುವ ಪದ್ಧತಿ ಇದೆಯೆಂಬುವುದು ಗಮನಾರ್ಹ.

"ನಿನ್ನ ಈ ವ್ರತದ ಉದ್ದೇಶವಾದರೂ ಏನು? ಎಂದು ಅನಂಗನಾದ ನನಗೆ ಕೇಳಲು ಕಿವಿಯಿಲ್ಲದೆ ಇದ್ದರೂ ಬಲುಸಂತಸವಾಗುತ್ತಿದೆ" ಮನ್ಮಥನು ಹೇಳಿದನು. ಅದಕ್ಕೆ ಗೋದೆಯು " ಈಗಲೇ ವಿಳಂಬವಿಲ್ಲದೆ ಈ ಭೂಮಿಯ ಮೇಲೆ ಇರುವಾಗಲೇ ನಾನು ನನ್ನ ಸ್ವಾಮಿಯನ್ನು ಕಂಡೇ ಬಿಡಬೇಕು ಎಂಬ ಮಹದೋದ್ದೇಶ ನನಗೆ" ಎನ್ನುತ್ತಾಳೆ. ಎಲೈಮನ್ಮಥನೇ ನೀನೇ ಪ್ರೇಮದ ಸಾಮ್ರಾಜ್ಯಕ್ಕೆ ಮುಖ್ಯಸ್ಥ. ಆ ಸರ್ವೇಶ್ವರನಿಂದಲೇ ನೀನು ನಿಯಮಿಸಲ್ಪಟ್ಟನು. ಅಂತಹ ನಿನ್ನನ್ನು ಪ್ರೇಮವನ್ನು ಹೆಚ್ಚಿಸುವ ನಿನ್ನ ತಮ್ಮನಾದ ವಸಂತನನ್ನು ರುಕ್ಮಿಣೀ ಪುತ್ರನಾದ ಪ್ರದ್ಯುಮ್ನನನ್ನೂ ನಾನು ಆರಾಧಿಸುತ್ತೇನೆ. ಏಕೆಂದರೆ ನೀವೆಲ್ಲಾ ನನ್ನ ಪತಿಯಾದ ನಾರಾಯಣನಲ್ಲೇ ಅಚಲವಾದ ನಂಬಿಕೆ ಇಟ್ಟವರು. ಆದ್ದರಿಂದ ನಿಮ್ಮನ್ನು ಸೇವಿಸಲು ಆರಂಭಿಸಿದ್ದೇನೆ, ಆಂಡಾಳ್ ಶರಣರ ಕುಲವನ್ನೇ ಆಳುವ ಮಹಾಭಾಗ್ಯಶಾಲಿನಿ ಅಲ್ಲವೇ? ಅರ್ಚಾರೂಪಿಯಾದ ಶ್ರೀರಂಗನಾಥನನ್ನೇ ಸೇವಿಸಲು ನಿತ್ಯ ಮಂಗಳಾಶಾಸನ ಎಂದು ಕೇಳುತ್ತಾಳೆ.

ಗೋದೆಯು ವಿರಹಾವಸ್ಥೆಯಲ್ಲಿ ಬಹಳ ಬಳಲುತ್ತಾಳೆ.

ಕರುಪ್ಪೂರಮ್ ನಾರುಮೋ ಕಮಲಪ್ಪೂನಾರುಮೋ

ತಿರುಪ್ಪವಳ ಚ್ಚೆವಾಯ್ ತಾನ್ ತ್ತಿತ್ತಿರುಕ್ಕುಮೋ



# ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

ಮರುಪ್ಪೊ ಶಿತ್ತ ಮಾದವನ್ ವಾಯ್‌ಚ್ಚುವೈಯುಮ್ ನಾತ್ತಮುಮ್
ವಿರುಪ್ಪುತ್ತು ಕೇಟ್ಕಿನ್‌ರೇನ್ ಶೊಲ್ಲಾಳಿವೆಣ್ ಶಂಗೇ.

(ನಾಯಚ್ಚಿಯಾರ್ ತಿರುಮೊಳಿ - 1 -7-1)

ಎಂದು ಭಿನ್ನವಿಸುತ್ತಾಳೆ. ಇಲ್ಲಿ ಸ್ವಪ್ನಾನುಭವವನ್ನು ಪಡೆದ ಗೋದೆ ಶ್ರೀಕೃಷ್ಣನೊಡನೆ ಕೂಡಿದಂತೆಯೇ ಸಂತೋಷವಾಯಿತು. ಗೋದೆಯು ಅದನ್ನು ವಿವರಿಸುತ್ತಾ "ನಾನು ಬಹಳ ಕಾಲದಿಂದಲೂ ಅಪೇಕ್ಷಿಸಿದರೂ ಲಭಿಸದೆ ಇರುವ ಭಗವಂತನ ಅಧರಾಮೃತವನ್ನು ಸದಾ ಪಾನ ಮಾಡುತ್ತಿರುವ ಒಳ್ಳೆಯ ಘೋಷವುಳ್ಳ ಬಿಳಿಯ ಶಂಖವೇ, ಕುವಲಯಾ ಪೀಡವೆಂಬ ಆನೆಯ ಕೊಂಬನ್ನು ಮುರಿದ ಮಾಧವನ ತುಟಿಯರಸವನ್ನು ಆ ಪರಿಮಳವನ್ನು ಅನುಭವಿಸಲು ಆಸೆಪಟ್ಟು, ಆ ಭಗವಂತನ ಬಗ್ಗೆ ಇರುವ ಪ್ರೀತಿ ಆದರದಿಂದ ಕೇಳುತ್ತಿದ್ದೇನೆ. ಚೆಲುವಾದ ಹವಳದಂತೆ ಕೆಂಪಾಗಿರುವ ಅವನ ತುಟಿ ಪಚ್ಚ ಕರ್ಪೂರದಂತೆ ಘಮ ಘಮಿಸುವುದೋ ಅಥವಾ ಕಮಲದ ಹೂವಿನ ಕಂಪನ್ನು ಬೀರುವುದೋ ಅದರ ರಸವು ಇನಿದಾಗಿರುವುದೋ ? ನೀನೇ ಹೇಳು ಎನ್ನುತ್ತಾಳೆ. ಕೃಷ್ಣನ ತುಟಿ ಪಚ್ಚ ಕರ್ಪೂರಕ್ಕಿಂತಲೂ ಸುವಾಸನೆ ಕಮಲದ ಹೂವಿಗಿಂತಲೂ ಮೃದುವಾಗಿರಬೇಕು ಎಂಬ ಭಾವನೆ ಆಂಡಾಳ್‌ಗೆ ಉಂಟಾಗುತ್ತದೆ. ವಿರಹಾವಸ್ಥೆಯಲ್ಲಿಯೂ ಕಲ್ಪನಾಲೋಕದಲ್ಲಿ ವಿಹರಿಸುವಾಗ ಸ್ವಪ್ನಾವಸ್ಥೆಯಲ್ಲಿ ವಿಹರಿಸುವಾಗ ಅದು ಸ್ವಲ್ಪ ಕಾಲ ವಿಶೇಷ ವಾದ ಆನಂದವನ್ನು ನೀಡುತ್ತದೆ ಎಂಬುದಕ್ಕೆ ಗೋದೆಯೇ ಅತ್ಯುತ್ತಮ ಉದಾಹರಣೆಯಾಗಿದ್ದಾಳೆ.

ಹೀಗೆ ಭಗವಂತನಿಗೆ ತನ್ನ ಬಾಳನ್ನೂ ಉಕ್ತಿಯನ್ನು ಸಮರ್ಪಿಸಿದವಳು ಗೋದಾ. ನುಡಿದಂತೆ ನಡೆದವಳು ಗೋದಾ ಎಂಬುದೇ ಗೋದಾವೈಶಿಷ್ಟ್ಯ. ಆದ್ದರಿಂದಲೇ ಎಲ್ಲರ ಮನೆಯಲ್ಲೂ ಮನದಲ್ಲೂ ದೇವರಪಾದರವಿಂದಗಳಲ್ಲಿ ಇಂದಿಗೂ ವಿರಾಜಮಾನಳಾಗಿದ್ದಾಳೆ ಅವಳ ಪೂಮಾಲೈ ಪಾಮಾಲೈ ಎರಡರಲ್ಲೂ ವಿಶೇಷವಿದೆ.



14



ಕರ್ನಾಟಕದ ವೈಷ್ಣವ ದೇವಾಲಯಗಳು

# ಬಾಗೂರಿನ ವೇಣುಗೋಪಾಲ ದೇವಾಲಯಗಳು

- ಕೆಂಗೇರಿ ಚಕ್ರಪಾಣಿ
9448386886

ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲ್ಲೂಕು, ಬಾಗೂರು ಒಂದು ಪ್ರಾಚೀನ ಗ್ರಾಮ. ಹತ್ತನೆಯ ಶತಮಾನದ ಶಾಸನದಲ್ಲಿ ಬಾಗಿಯೂರು ಹೊಯ್ಸಳರ ಕಾಲದಲ್ಲಿ ಬಾಗೂರು 12 ಹಾಗೂ ವಿಜಯನಗರೋತ್ತರ ಕಾಲದಲ್ಲಿ ಆಣಿ ಬಾಗೂರು ಎಂಬ ಹೆಸರುಗಳಿದ್ದವು.

ಬಾಗೂರಿನಲ್ಲಿ ಮಾವಿನ ಹೂಗಳು ತುಂಬಿದ  ಮರಗಳಿಂದಲೂ, ದೊಡ್ಡಕರೆ ಹಾಗೂ ಅದರ ಸುತ್ತಲೂ ಎಲ್ಲೆಲ್ಲೂ ಸುವಾಸನೆ ಯುಕ್ತ ಸಂಪಿಗೆ ಮರಗಳು, ಮುಂತಾದ ವೃಕ್ಷಗಳಿಂದಲೂ



ಕಂಗೊಳಿಸುತ್ತಿತ್ತೆಂದೂ ಹಾಗೂ ಅಲ್ಲಿ ಇಂಪಾದ ಕೋಗಿಲೆಯ ನಾದವು ಸದಾ ಕೇಳಿಸುತ್ತಿತ್ತೆಂದು ಹೊಯ್ಸಳರ ಕಾಲದ ಒಂದು ಶಾಸನದಲ್ಲಿ ಬಣ್ಣಿಸಲಾಗಿದೆ. ಬಾಗೂರು ಒಂದು ಆಡಳಿತ ಕೇಂದ್ರವಾಗಿ ಬಾಗೂರು - 12 ಎಂಬ ಪ್ರಾಂತ್ಯವೂ ಸಹ ಹಿಂದೆ ಅಸ್ತಿತ್ವದಲ್ಲಿತ್ತು.

ಬಾಗೂರಿನಲ್ಲಿ ಶ್ರೀ ವೇಣುಗೋಪಾಲಸ್ವಾಮಿ, ಶ್ರೀ ನಾಗೇಶ್ವರ ಸ್ವಾಮಿ ಹಾಗೂ  ಶ್ರೀ ಆಂಜನೇಯಸ್ವಾಮಿ ಮುಂತಾದ  ದೇವಾಲಯಗಳಿವೆ.

### ಶ್ರೀವೇಣುಗೋಪಾಲ ಸ್ವಾಮಿ ದೇವಾಲಯ:

ಬಾಗೂರಿನ ಊರ ನಡುವೆ ಇರುವ ಶ್ರೀವೇಣುಗೋಪಾಲ ಸ್ವಾಮಿ ದೇವಾಲಯ ಬಾಗೂರಿಗೆ ಬರುವ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆಯಾಗಿದೆ. ದೇವಾಲಯವು ಎತ್ತರವಾದ ದಿಣ್ಣೆಯ ಮೇಲಿದ್ದು ಗರ್ಭಗೃಹ ಅಂತರಾಳ,ನವರಂಗ, ಮುಖಮಂಟಪ ಹಾಗೂ ಸುತ್ತಲೂ ಎತ್ತರವಾದ ಪ್ರಾಕಾರವನ್ನು ಹೊಂದಿದೆ. ಈ ದೇವಾಲಯದ ಗರ್ಭ ಗೃಹದಲ್ಲಿ ಅತ್ಯಂತ ಮನಮೋಹಕವಾದ ಶ್ರೀ ಗೋಪಾಲಕೃಷ್ಣ ಮೂರ್ತಿ ಇದೆ. ಕ್ರಿ.ಶ.1650 ಮೈಸೂರು ರಾಜರಾದ ಕಂಠೀರವ ನರಸಿಂಹರಾಜ ಒಡೆಯರ ಕಾಲದಲ್ಲಿ ಕೊಟ್ಟುರಾಯನೆಂಬ ಪ್ರಾಂತ್ಯಾ



ಧಿಕಾರಿಯು ನವರಂಗ, ಪಡಸಾಲೆ, ಪ್ರಾಕಾರಗಳನ್ನು ಕಟ್ಟಿಸಿರುತ್ತಾನೆ.

ಬಾಗೂರಿನ ಶ್ರೀವೇಣುಗೋಪಾಲಸ್ವಾಮಿಯ ದೇವಾಲಯವು ಸುಮಾರು 16 ನೇ ಶತಮಾನಕ್ಕೆ ಸೇರಿಸಬಹುದಾದರೂ, ದೇವಾಲಯದ ಗರ್ಭಗೃಹದಲ್ಲಿರುವ ಮೂರ್ತಿ ಹೊಯ್ಸಳರ ಕಾಲಕ್ಕೆ ಸೇರಿರುತ್ತದೆ.ಸುಮಾರು 5 ಅಡಿ ಎತ್ತರವಿರುವ ಶ್ರೀವೇಣುಗೋಪಾಲಸ್ವಾಮಿ ತ್ರಿಭಂಗಿಯಲ್ಲಿದ್ದು ನಯನ ಮನೋಹರವಾಗಿದೆಯಲ್ಲದೆ ಗೋಪಾಲನು ಕೊಳಲು ನುಡಿಸುತ್ತಿರುವ ಭಂಗಿಯೂ ಸಹ ಮೋಹಕವಾಗಿದೆ.ಕಿರೀಟ ಮಕುಟವನ್ನು ಧರಿಸಿರುವ ಸ್ವಾಮಿಯು ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುವನು.ದೇವನು ಧರಿಸಿರುವ ಕಂಠಾಭರಣ,ವೈಜಯಂತಿ ಮಾಲೆ, ಉಪವೀತ, ಕೇಯೂರ, ಮೇಕಲಾ, ಕಾಲ್ಗಡಗ, ಕೊಳಲು, ಕೈಬೆರಳುಗಳಲ್ಲಿರುವ ಆಭರಣಗಳು ಅತ್ಯಂತ ಕಲಾತ್ಮಕವಾಗಿದೆ.ಮದನಗೋಪಾಲನ ಮುರಳಿಯನಾದಕ್ಕೆ ಮನಸೋತು ದೇವನ ಎರಡೂ ಬದಿಗಳಲ್ಲಿ ಗೋವುಗಳು, ಗೋಪಿಕೆ, ಗೋಪಾಲಕರು ತಲ್ಲೀನರಾಗಿರುವಂತೆ ನೈಜವಾಗಿ ಚಿತ್ರಿಸಲಾಗಿದೆ.

ಒಟ್ಟಿನಲ್ಲಿ ಬಾಗೂರಿನ ಶ್ರೀವೇಣುಗೋಪಾಲಸ್ವಾಮಿ ನೋಡಿದೊಡನೆ ಒಮ್ಮೆಲೆ ಪುರಂದರದಾಸರ ಗೀತೆ-ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ ಗೋಪಿ ಜನಪ್ರಿಯ ಗೋಪಾಲಗಲ್ಲದೆ, ಎಂಬ ದಾಸವಾಣಿ ನೆನಪಾಗುತ್ತದೆ. ಬಾಗೂರಿನ ವೇಣುಗೋಪಾಲಸ್ವಾಮಿಗೆ ಗೋಕುಲಾಷ್ಟಮಿ. ಉತ್ಥಾನದ್ವಾದಶಿ, ಕಾರ್ತಿಕ ಮಾಸ,ಸಂಕ್ರಾಂತಿ ಮುಂತಾದ ದಿನಗಳಲ್ಲಿ ವಿಶೇಷ ಸೇವಾಕೈಂಕರ್ಯಗಳು ಜರುಗುವುದು.

ಬಾಗೂರನ್ನು ಪ್ರವೇಶಿಸಿದೊಡನೆ ನಮಗೆ ಮೊದಲು ಸಿಗುವುದು ಆಂಜನೇಯಸ್ವಾಮಿ ದೇವಾಲಯ ಶ್ರೀವೇಣುಗೋಪಾಲಸ್ವಾಮಿ ದೇವಾಲಯಕ್ಕೆ ನೇರವಾಗಿ ಪಶ್ಚಿಮ ದಿಕ್ಕಿನಲ್ಲಿರುವ ಆಂಜನೇಯಸ್ವಾಮಿಯನ್ನು ಹೆಬ್ಬಾಗಿಲು ಆಂಜನೇಯ ಎಂದು ಕರೆಯುವರು.

**ಹೀಗೆ ಬನ್ನಿ**

ಹಾಸನ ಜಿಲ್ಲೆ, ಚೆನ್ನರಾಯಪಟ್ಟಣ ನಗರದಲ್ಲಿ ಹಾಸನ - ಬೆಂಗಳೂರು ರಸ್ತೆಯಲ್ಲಿಯೇ ಬಾಗೂರು ತಿರುವು ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಗುಣಸಿಂದ ಹರಳಹಳ್ಳಿ ಕುರುವಂಕ ಮುಖಾಂತರ ಬಾಗೂರಿಗೆ ಬರಬಹುದು. ಬಾಗೂರಿನಿಂದ ಚನ್ನರಾಯಪಟ್ಟಣಕ್ಕೆ ಸುಮಾರು 12 ಕಿ.ಮೀ. ದೂರವಿರುತ್ತದೆ.

**ಅಶ್ವತ್ಥ ಮೇಕಂ ಪಿಚು ಮಂದ ಮೇಕಂ**
**ನ್ಯಗ್ರೋಧ ಮೇಕಂ ದಶ ತಿಂತ್ರಿಣೀಕಮ್ ।**
**ಕಪಿತ್ಥ ಬಿಲ್ವಾಮಲಕೀ ತ್ರಯಂಚ**
**ಪಂಚಾಮ್ರರೋಪೀ ನರಕಂ ನ ಪಶ್ಯೇತ್ ॥**

**ಒಂದು ಅಶ್ವತ್ಥ ವೃಕ್ಷ, ಒಂದು ಬೇವಿನ ಮರ, ಒಂದು ಆಲದ ಮರ, ಹತ್ತು ಹುಣಿಸೆಮರ, ಮೂರು ಮೂರು ಬೇಲ, ಬಿಲ್ವ, ನೆಲ್ಲಿ ಮರಗಳು ಮತ್ತು ಐದು ಮಾವಿನ ಮರಗಳು-ಇವಿಷ್ಟು ಗಿಡಗಳನ್ನು ನೆಟ್ಟು ಮರವಾಗಿ ಮಾಡಿದವ ನರಕವನ್ನು ನೋಡುವುದಿಲ್ಲ!**



ಧಾರಾವಾಹಿ -9

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಜಿ.ಎನ್. ಶ್ರೀನಿವಾಸನ್


## ವಿಜಯನಗರ ಸಾಮ್ರಾಟರು :

ವಿಜಯನಗರದ ರಾಜರ ಕೈ ಸೇರಿತು ಚಿತ್ತೂರು ಜಿಲ್ಲೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆದನಂತರ ಕ್ರಿ.ಶ. 1336 ರಿಂದ ಕ್ರಿ.ಶ.17 ನೇ ಶತಮಾನದ ಕಡೆಯ ಭಾಗದವರೆಗೆ ನಾಲ್ಕು ವಂಶಗಳು- ಸಂಗಮ,ಸಾಳುವ,ತುಳುವ, ಅರವೀಡು- ವಂಶಗಳು ವಿಜಯನಗರವನ್ನು ಆಳಿದವು. ಕ್ರಿ.ಶ.1336 ರಲ್ಲಿ ಹರಿಹರನು ಸಂಗಮ ವಂಶದ ಸಾವ್ರಾಜ್ಯ ಸ್ಥಾಪಿಸಿದಾಗ ಪೂರ್ವದಲ್ಲಿ ನೆಲ್ಲೂರಿನಿಂದ ಪಶ್ಚಿಮದಲ್ಲಿ ಉತ್ತರ ಕರ್ನಾಟಕದ ಬಾದಾಮಿ ಧಾರವಾಡಗಳವರೆಗೆ ಹರಡಿತ್ತು. ಹರಿಹರನ ನಂತರ ಪ್ರಭುವಾದ ಬುಕ್ಕನು ತನ್ನ ಮಕ್ಕಳನ್ನು ಪ್ರಾಂತೀಯ ರಾಜಪ್ರತಿನಿಧಿಗಳನ್ನಾಗಿ ನಿಯಮಿಸಿ, ರಾಜ್ಯವನ್ನು ಒಂದುಗೂಡಿಸಿ ಪ್ರಭುಶಕ್ತಿಯನ್ನು ಹೆಚ್ಚಿಸಲು ಪ್ರಯತ್ನಿಸಿದ. ಹೀಗಾಗಿ ಭಾಸ್ಕರ ಭವದೂರ ಉದಯಗಿರಿಯರಾಜ್ಯಪಾಲರಾಗಿಯೂ, ಕುಮಾರ ಕಂಪಣನು ಮುಳಬಾಗಿಲು, ಹಾಗೂ ಜಿಲ್ಲೆಯ ಒಂದು ಭಾಗವನ್ನು ಒಳಗೊಂಡ ಪಡೈವೀಡುವಿಗೂ ರಾಜ್ಯಪಾಲಕನಾಗಿಯೂ ನೇಮಕವಾದರು. ಈ ಪ್ರಾಂತ್ಯದಲ್ಲಿ ಒಂದನೇ ಬುಕ್ಕನ ಹಾಗೂ ಕುಮಾರ ಕಂಪಣನ ಕೆಲವು ಶಾಸನಗಳಿವೆ. ಇವುಗಳಲ್ಲಿನ ಅತಿ ಪ್ರಾಚೀನವಾದದ್ದು ಬೇತಾ ಲೀಖಿನದಾಗಿದ್ದು ಬುಕ್ಕನದಾಗಿದ್ದು ತಿರುಮಲೆಯ ಆಲಯಕ್ಕೆ ದಿನಕ್ಕೆರಡು ಸಂಧಿಗಳ ನೈವೇದ್ಯಕ್ಕಾಗಿ ನೀಡಿದ ಒಂದು ಗ್ರಾಮವನ್ನು ಗುರುತಿಸುತ್ತದೆ. ಕುಮಾರ ಕಂಪಣ ಹಾಗೂ ಅವನ ಅಧಿಕಾರಿಗಳ ಶಾಸನಗಳು ಹಲವೆಡೆ ದೊರೆತಿದ್ದು ಆಲಯಗಳಿಗೆ ನೀಡಿದ ದತ್ತಿಗಳನ್ನು ಗುರುತಿಸುತ್ತವೆ. ಅವನ ಅಧಿಕಾರಿಗಳಲ್ಲಿ ಸಾಳುವ ಮಂಗಿದೇವ, (ಕಂಪಣನ ಸೇನಾನಿ) ಸೋಮಪ್ಪ ; ಗೋಪಣ್ಣರುಗಳು ಉಲ್ಲೇಖಾರ್ಹರು. ಸಾಳುವ ಮಂಗಿದೇವನು ಚಿತ್ತೂರು, ಸುತ್ತಮುತ್ತಲ ಪ್ರದೇಶಗಳನ್ನು ಆಳುತ್ತಿದ್ದು ನಂತರದ ಸಾಳುವರ ಕೇಂಧ್ರವಾಯಿತು. ಸೋಮಪ್ಪನು ಕಂಪಣನ ಪ್ರಧಾನಿಯಾಗಿದ್ದ. ಕಂಪಣನ ಎರಡು ಶಾಸನಗಳಲ್ಲಿ ಇವನು ಹೆಸರಿಸಲ್ಪಟ್ಟಿದ್ದಾನೆ. ಪುಲಿನಾಡು ಪ್ರಾಂತ್ಯದಲ್ಲಿ- ಸುಂಕ ವಸೂಲಿ ಮಾಡುತ್ತಿದ್ದ ಮಾಯದೇವರಿಗೆ ಚಿತ್ತೂರು ರಾಜ್ಯದಲ್ಲಿದ್ದ ಕೂರ್ಮಾನಿ ಗ್ರಾಮದ ವಿಷ್ಣುದೇವಾಲಯ

ಕ್ಕಾಗಿ ಜಿಲ್ಲೆಯ ಮೂಲಕ ಹಾದುಹೋಗುವ ಎಲ್ಲ ವಸ್ತುಗಳ ಮೇಲೂ ಒಂದು ಭಾಗದ ಸುಂಕವನ್ನು ವಿಧಿಸಲು ಈತ ಆಜ್ಞೆಮಾಡಿದ. ಕಂಪಣನ ಬ್ರಾಹ್ಮಣ ಸೇನಾನಿಗಳಲ್ಲಿ ಒಬ್ಬ ಗೋಪಣ್ಣ ಚೆಂಜಿಯನ್ನು ಆಳುತ್ತಿದ್ದು,ಈತ ತಿರುಮಲೆಗೆ ತೀರ್ಥಯಾತ್ರೆಗೆಂದು ಹೋದಾಗ ಅಲ್ಲಿ ವೆಂಕಟೇಶ್ವರ ಸ್ವಾಮಿಯೊಡನೆ ಪೂಜೆಗೊಳ್ಳುತ್ತಿದ್ದ, ಶ್ರೀರಂಗಂ ಮೇಲಿನ ಮಹಮ್ಮದೀಯ ಧಾಳಿಯ ಕಾಲಕ್ಕೆ ಸುರಕ್ಷಿತವಾಗಿಡಲೆಂದು ಆಳಗಿಯ ಮಣವಾಳ ಪೆರುಮಾಳರನ್ನು ಶ್ರೀರಂಗದಿಂದ ತಿರುಮಲೆಗೆ ತರಲಾಗಿದ್ದುದನ್ನು ತಿರುಮಲೆಯ ಆಲಯದ ಅರ್ಚಕರ ಸಹಮತದೊಡನೆ ಮೊದಲು ಚೆಂಜಿಗೆ ತೆಗೆದುಕೊಂಡು ಹೋಗಿ ನಂತರ ಶ್ರೀರಂಗಕ್ಕೆ ಸೇರಿಸಿದ.

ಎರಡನೆ ಹರಿಹರನು ವಿಜಯನಗರದ ಸಿಂಹಾಸನವನ್ನು ಕ್ರಿ.ಶ.1377 ರಲ್ಲಿ ಏರಿದ ಹಾಗೂ ಕ್ರಿ.ಶ. 1404 ವರೆಗೆ ಆಳಿದ. 1370ರಲ್ಲಿ ಆತನ ಮಗ ದೇವರಾಯನು ಉದಯಗಿರಿಯ ರಾಜ್ಯಪಾಲನಾದದ್ದು ವಿಜಯನಗರ ಕೊಂಡವೀಡುಗಳ ನಡುವಣ ಸಂಬಂಧದಲ್ಲಿ ಒಂದು ಹೊಸ ಘಟ್ಟ. ಈ ಪ್ರಾಂತ್ಯದಲ್ಲಿ ಎರಡನೇ ಹರಿಹರನ ಆಳ್ವಿಕೆಯನ್ನು ಹಲವು ಶಾಸನಗಳು ದಾಖಲಿಸುತ್ತವೆ.ತಮಿಳಿನ ಮಾಸಿ ತಿಂಗಳಿನಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ಆಲಯದಲ್ಲಿ ಒಂದು ಉತ್ಸವವನ್ನು ಆರಂಭಿಸಿದ ಸಂಗತಿಯನ್ನು ಇವುಗಳಲ್ಲಿ ಒಂದು ಹೆಸರಿಸುತ್ತದೆ. ಎರಡನೆ ಹರಿಹರನು ಕ್ರಿ.ಶ.1404 ರಲ್ಲಿ ತೀರಿಕೊಂಡ ನಂತರ ವಿಜಯನಗರ ರಾಜ್ಯದ ಉತ್ತರಾಧಿಕಾರಕ್ಕೆ ವಿವಾದವಾಯಿತು.ಈ ಒಂದು ಅವ್ಯವಸ್ಥೆಯ ಲಾಭ ಪಡೆಯಲು ಕೊಂಡವೀಡಿನ ರೆಡ್ಡಿಗಳು ಉದಯಗಿರಿ ರಾಜ್ಯದ ಮೇಲೆ ಆಕ್ರಮಣ ನಡೆಸಿ ಕ್ರಿ.ಶ. 1406ರಲ್ಲಿ ಚಂದ್ರಗಿರಿ ಸೀಮೆಯಲ್ಲಿನ ಪುಲುಗುಲನಾಡಿನೊಂದಿಗೆ ಹಲವು ಸ್ಥಳಗಳನ್ನು ಆಕ್ರಮಿಸಿದರು.ಸೇನೆಯನ್ನು ಮುನ್ನಡೆಸಿದ ಮಲ್ಲರೆಡ್ಡಿ ರೆಡ್ಡಿರಾಜ-ಪೆದ್ದ ಕೋಮಟಿ ವೇಮನ ದಾಯಾದಿ - ಕ್ರಿ.ಶ.1413 ರ ವರೆಗೆ ಆಕ್ರಮಿತ ಸೀಮೆಯಲ್ಲಿಯೇ ಉಳಿದ. ಆದರೆ ಉದಯಗಿರಿಯಿಂದ ದೇವರಾಯನು ಸೇನೆಯನ್ನು ಕಳುಹಿಸಿ ಇವನನ್ನು ಸ್ಥಾನಭ್ರಷ್ಟನನ್ನಾಗಿಸಿದ. ಕ್ರಿ.ಶ.1405 ರಿಂದ ಕ್ರಿ.ಶ.1418 ರ ವರೆಗಿನ ಹಲವು ಶಾಸನಗಳು ಒಂದನೇ ದೇವರಾಯನು ಈ ಪ್ರದೇಶದ ಹಿಡಿತ ಹೊಂದಿದ್ದನ್ನು ತಿಳಿಸುತ್ತವೆ.ಇವು ರಾಜನಿಂದಲೂ, ಯುವರಾಜ ವಿಜಯಬುಕ್ಕ ಅಥವಾ ವಿಜಯಭೂಪತಿ ಅಥವಾ ವೀರ ಬುಕ್ಕನಿಂದಲೂ ಅವರ ಅಧೀನ ಅಧಿಕಾರಿಗಳಿಂದಲೂ ನೀಡಲಾದ ದತ್ತಿಗಳನ್ನು ದಾಖಲಿಸುತ್ತವೆ. ಈ ಪ್ರಾಂತ್ಯದಲ್ಲಿನ ಒಂದು ಶಾಸನ ಎರಡನೇ ಕಂಪಣನ ಮಗ ಜೊಮ್ಮನನ್ನು ಹೆಸರಿಸಿದೆ. ಎರಡನೇ ದೇವರಾಯನ (ಕ್ರಿ.ಶ.1422-1446) ಆಳ್ವಿಕೆಯನ್ನೂ ಹಲವಾರು ಶಾಸನಗಳು ದಾಖಲಿಸಿವೆ. ಈತನ ಅಧೀನನಾದ ಮಲ್ಲನ ಚಂದ್ರಗಿರಿ ರಾಜ್ಯವನ್ನು ಶಕ 1330 (ಕ್ರಿ.ಶ.1408) ರಿಂದ ಶಕವರ್ಷ 1366 (ಕ್ರಿ.ಶ.1444) ರವರೆಗೆ ಆಳಿದ. ಈತನ ಉತ್ತರಾಧಿಕಾರಿ ಸಾಳುವ,ಪೆರಿಮಲ್ಲಯದೇವ. (ಕ್ರಿ.ಶ.1463)ಗಜಪತಿರಾಜ ಕಪಿಲೇಂದ್ರನ ಮಗ ಹಮ್ಮೀರನು ಮಲ್ಲಿಕಾರ್ಜುನನ ಕಾಲದಲ್ಲಿ ವಿಜಯನಗರದ ವಿರುದ್ಧ ದಂಡೆತ್ತಿ ಬಂದು ಅನೇಕ ಸ್ಥಳಗಳನ್ನು ಆಕ್ರಮಿಸಿದ್ದೇ ಅಲ್ಲದೆ ಚಂದ್ರಗಿರಿ ಕೋಟೆಯನ್ನೂ ಹಿಡಿದ. ಆದರೆ ಇದುವರೆಗೆ ತಿಳಿಯದಿರುವ ಕಾರಣಗಳಿಂದಾಗಿ, ಒರಿಸ್ಸಾದ ಸೈನ್ಯ ಈ ಪ್ರಾಂತ್ಯವನ್ನು ಬಿಟ್ಟು ಹೊರಟಿತು.

ವಿಜಯನಗರದ ಮೇಲಿನ ಗಜಪತಿಗಳ ಪದೇ ಪದೇ ಆಕ್ರಮಣಗಳು,ಮಲ್ಲಿಕಾರ್ಜುನನ ಹತ್ಯೆ ಎರಡನೇ ವಿರುಪಾಕ್ಷನು ವಿಜಯನಗರ ಸಿಂಹಾಸನವನ್ನೇರಿದ್ದು-ದೀರ್ಘಕಾಲದಿಂದ ಕಾಯುತ್ತಿದ್ದ ವಿಚ್ಛಿದ್ರಕಾರಕ ಶಕ್ತಿಗಳಿಗೆ ಅವಕಾಶವನ್ನು ನೀಡಿದವು. ಕ್ರಿ.ಶ.1456 ರಲ್ಲಿ ಕುಲಧನವಾದ ಚಂದ್ರಗಿರಿ ರಾಜ್ಯವನ್ನು ಪಡೆದ ಚಂದ್ರಗಿರಿಯ ರಾಜ ಸಾಳುವಗುಂಡನ ಮಗ ಸಾಳುವನರಸಿಂಹನು ಆ ರಾಜಕತೆಯ ವರ್ಷಗಳಲ್ಲಿ ನಿಧಾನವಾಗಿ ತನ್ನ ಹಿಡಿತವನ್ನು ಚಿತ್ತೂರು, ಉತ್ತರ ದಕ್ಷಿಣ ಆರ್ಕಾಟುಗಳು ಕೋಲಾರ ಜಿಲ್ಲೆಗಳಿಗೆ ವಿಸ್ತರಿಸಿದ. ಇವನ ಪ್ರಾಬಲ್ಯ,ಎಷ್ಟು ಹೆಚ್ಚಿತೆಂದರೆ ಮಲ್ಲಿಕಾರ್ಜುನನ ಕಿರಿಯ ಮಗ ರಾಜಶೇಖರನು ಇವನ ಆಸ್ಥಾನದಲ್ಲಿ ಆಶ್ರಯಪಡೆದ.ಹೆಚ್ಚಿನ ಒಳಸಂಚುಗಾರರಂತೆ ಸಾಳುವ ನರಸಿಂಹನೂ ರಾಜ್ಯದಲ್ಲಿ ಪ್ರಭುತ್ವವನ್ನು ಸ್ಥಾಪಿಸುವುದಕ್ಕಿಂತಲೂ, ಸಿಂಹಾಸನವನ್ನು ಕೈವಶಮಾಡಿಕೊಳ್ಳುವುದು ಸುಲಭವೆಂದು ಕಂಡುಕೊಂಡ.ಹೀಗಾಗಿ ಎರಡನೇ ವಿರುಪಾಕ್ಷನ ಉತ್ತರಾಧಿಕಾರಿಯಾಗಿ ಸಿಂಹಾಸನವನ್ನೇರಿದ ಪ್ರೌಢದೇವರಾಯನನ್ನು ಓಡಿಸುವಂತೆ. ನರಸನಾಯಕನ ಹಿರಿತನದಲ್ಲಿ ಒಂದು ಸೈನ್ಯವನ್ನು ಕಳುಹಿಸಿದ. ನರಸನಾಯಕನಿಗೆ ಯಾವುದೇ ಅಡ್ಡಿಯೂ ಉಂಟಾಗದೆ ಪ್ರೌಢದೇವರಾಯನು ರಾಜಧಾನಿಯನ್ನು ತ್ಯಜಿಸಿದ. ಸಾಳುವ ನರಸಿಂಹನು ನರಸನಾಯಕನ ಹಿಂದೆಯೇ ಬಂದು ಕ್ರಿ.ಶ.1485 ರಲ್ಲಿ ಪಟ್ಟಾಭಿಷಿಕ್ತನಾದ.


(-ಮುಂದುವರೆಯುತ್ತದೆ.)






"ಗೋ ಮಹಾಸಮ್ಮೇಳನ" ವು (ತಿರುಪತಿ) ಮಹತಿ ಕಳಾಕ್ಷೇತ್ರದಲ್ಲಿ 2021, ಅಕ್ಟೋಬರ್ 30, 31 ರಂದು ನಿರ್ವಹಿಸಲಾಯಿತು. ಈ ಸಂದರ್ಭದಲ್ಲಿ ಜ್ಯೋತಿ ಪ್ರಜ್ವಲನೆ ಮಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ಯುವ ತುಳಸಿ ಫೌಂಡೇಷನ್ ಅಧ್ಯಕ್ಷರು ಮತ್ತು ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಣಿ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

# ತಿರುಮಲೆ ತಿರುಪತಿ ದೇವಸ್ಥಾನಗಳು





31-10-2021 ರಂದು ಗೋ ಮಹಾಸಮ್ಮೇಳನ ಪ್ರಾಂಗಣದಲ್ಲಿ ಗೋಧೂಳಿ, ಗೋಪೂಜೆಯ ನಂತರ ಗೋವಿಗೆ ಗ್ರಾಸವನ್ನು (ಹುಲ್ಲು) ನೀಡುತ್ತಿರುವ ಕಂಚಿಕಾಮಕೋಟಿ ಪೀಠಾಧಿಪತಿ ಜಗದ್ಗುರು ಶ್ರೀ ಶ್ರೀ ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿಯವರು.



ತಿ.ತಿ.ದೇವಸ್ಥಾನಗಳು ಮತ್ತು ಯುವ ತುಳಸಿ ಫೌಂಡೇಷನ್ ಅವರ ನೇತೃತ್ವದಲ್ಲಿ ಮಹತಿ ಕಳಾಕ್ಷೇತ್ರದಲ್ಲಿ ನಡೆದ 2021 ಅಕ್ಟೋಬರ್ 30,31 ರಂದು ಗೋಮಹಾ ಸಮ್ಮೇಳನ ಕಾರ್ಯಕ್ರಮವು ಅತ್ಯಂತ ವೈಭವವಾಗಿ ನಡೆಯಿತು. ನಮ್ಮ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ ಪೀಠಾಧಿಪತಿಗಳು, ಮಠಾಧಿಪತಿಗಳು ಮತ್ತು ಸ್ವಾಮೀಜಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರ ದಿವ್ಯ ಅನುಗ್ರಹ ಭಾಷಣವನ್ನು ನೀಡಿದರು.



ಗೋ ಆಧಾರಿತ ವ್ಯವಸಾಯದಿಂದ ಉತ್ಪತ್ತಿಸಿದ ಬಾಳೆಹಣ್ಣಿನ ಗೊಂಚಲುಗಳನ್ನು ನೋಡುತ್ತಿರುವ
ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು, ತಿ.ತಿ.ದೇ., ಕಾಯನಿರ್ವಹಣಾಧಿಕಾರಿ ಮತ್ತು ಇತರ ಉನ್ನತಾಧಿಕಾರಿಗಳು



ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ., ಆಡಳಿತ ಮಂಡಳಿ ಸದಸ್ಯರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್. ಜವಹರ್‌ರೆಡ್ಡಿ, ಐ.ಎ.ಎಸ್., ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ಮತ್ತು ಶ್ರೀ ವಿ. ವೀರಬ್ರಹ್ಮಂ, ಐ.ಎ.ಎಸ್., ಸಿ.ವಿ.ಮತ್ತು ಎಸ್.ಓ. ಶ್ರೀ ಗೋಪಿನಾಥ್ ಜೆಟ್ಟಿ ಐ.ಪಿ.ಎಸ್., ಮತ್ತು ಯುವ ತುಳಸಿ ಫೌಂಡೇಷನ್ ಅಧ್ಯಕ್ಷರು ಶ್ರೀ ಕೆ.ಶಿವಕುಮಾರ್ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.





ಗೋ ಆಧಾರಿತ ವ್ಯವಸಾಯದಿಂದ ಉತ್ಪತ್ತಿಸಿದ ಬೆಳೆಗಳು ಮತ್ತು ಧಾನ್ಯಗಳನ್ನು ಪರಿಶೀಲಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿಯವರು ಮತ್ತು ಇತರ ಉನ್ನತಾಧಿಕಾರಿಗಳು



ಗೋ ಮಹಾಸಮ್ಮೇಳನಕ್ಕೆ ಆಗಮಿಸಿದ ವಿಶ್ರಾಂತ ಐ.ಎ.ಎಸ್., ಅಧಿಕಾರಿ ಶ್ರೀ ವಿಜಯ ಕುಮಾರ್ ರವರಿಗೆ ಗೋ ಆಧಾರಿತ ಉತ್ಪತ್ತಿಗಳಿಗೆ ಸಂಬಂಧಿಸಿದ ಕಿಟ್ ಅನ್ನು ನೀಡುತ್ತಿರುವ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ. ವಿ. ವೀರಬ್ರಹ್ಮಂ, ಐ.ಎ.ಎಸ್., ರವರು



30-10-2021 ರಂದು (ತಿರುಪತಿ) ಮಹತಿ ಕಳಾಕ್ಷೇತ್ರದಲ್ಲಿ ಏರ್ಪಾಟು ಮಾಡಿದ ಪಂಚಗವ್ಯ ಸ್ಟಾಲ್‌ಗಳನ್ನು ಸಂದರ್ಶಿಸಿ ಪರಿಶೀಲಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಯವರು.



# ಗೋವಿಂದನ ಸಾಕ್ಷಿಯಾಗಿ ಗೋ ಮಹಾ ಸಮ್ಮೇಳನ


-ಶ್ರೀಮತಿ. ಎನ್. ಪಾರ್ವತಿ

9448074928


ಗೋರಕ್ಷಣೆಯಿಂದ ಧರ್ಮರಕ್ಷಣೆ ಎಂಬ ನಿನಾದದಿಂದ ತಿರುಮಲೆ ತಿರುಪತಿ ದೇವಸ್ಥಾನಗಳ ಆಶ್ರಯದಲ್ಲಿ ಅಕ್ಟೋಬರ್ 30, 31 ರಂದು ತಿರುಪತಿ ಮಹತಿ ಕಳಾಕ್ಷೇತ್ರದಲ್ಲಿ ಗೋವಿಂದನ ಸಾಕ್ಷಿಯಾಗಿ ಗೋಮಹಾ ಸಮ್ಮೇಳನ ಕಾರ್ಯಕ್ರಮವು"ನ ಭೂತೋ ನ ಭವಿಷ್ಯತಿ'' ಎನ್ನುವ ರೀತಿಯಲ್ಲಿ ಅತ್ಯಂತ ವೈಭವದಿಂದ ನಡೆಯಿತು. ಯುಗ ತುಳಸಿ ಫೌಂಡೇಶನ್ ಮತ್ತು ಶ್ರೀಗೋಧಾಮ ಪತ್ಮೇಡ,ರಾಜಸ್ಥಾನದವರ ಸಹಯೋಗದೊಂದಿಗೆ ದೇಶದ ಮೂಲೆ ಮೂಲೆಯಿಂದ ಬಂದಿದ್ದ ಜಗದ್ಗುರುಗಳು, ಪೀಠಾಧಿಪತಿಗಳು, ಮಠಾಧಿಪತಿಗಳು, ಸ್ವಾಮೀಜಿಯವರ ಸಮಕ್ಷಮದಲ್ಲಿ ನಡೆದ ಗೋ ಮಹಾ ಸಮ್ಮೇಳನವು ಗೋರಕ್ಷಣೆ, ಸಂರಕ್ಷಣೆ ಕರ್ತವ್ಯಕ್ಕೆ ನೂತನ ದಿಶಾ ನಿರ್ದೇಶನವನ್ನು ನೀಡಿತು.

ಮೊದಲನೆಯ ದಿನದಂದು ಸೇವ್ ಫೌಂಡೇಶನ್ ಅಧ್ಯಕ್ಷರು, ಗೋ ಆಧಾರಿತ ವ್ಯವಸಾಯ ಮಹರ್ಷಿ ಶ್ರೀವಿಜಯರಾಮ್ ನೇತೃತ್ವದಲ್ಲಿ ಸಾವಿರಕ್ಕಿಂತಲೂ ಹೆಚ್ಚು ರೈತರೊಂದಿಗೆ ಗೋ ಆಧಾರಿತ ವ್ಯವಸಾಯ ಕುರಿತು ಅವಗಾಹನೆ ಕಾರ್ಯಕ್ರಮ ನಡೆಯಿತು. ತಿರುಮಲೆ ತಿರುಪತಿ ದೇವಸ್ಥಾನಗಳ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬಾರೆಡ್ಡಿಯವರ ಅಮೃತ ಹಸ್ತದಿಂದ ಪ್ರಾರಂಭವಾದ ಈ ಕಾರ್ಯ ಕ್ರಮದಲ್ಲಿ ಉಭಯ ತೆಲುಗು ರಾಜ್ಯಗಳ ಗೋ ಆಧಾರಿತ ವ್ಯವಸಾಯ ಮಾಡುತ್ತಿರುವ ಉತ್ಸಾಹಿ ರೈತರು, ವ್ಯವಸಾಯ ಪಂಡಿತರು ತಮ್ಮ ಅನುಭವಗಳನ್ನು, ಆಲೋಚನೆಗಳನ್ನು ಹಂಚಿಕೊಂಡರು. ಮೊದಲಿಗೆ ಮಹತಿ ಕಳಾಕ್ಷೇತ್ರ ಪ್ರಾಂಗಣದಲ್ಲಿ ಹತ್ತಾರೂ ಸಂಖ್ಯೆಯಲ್ಲಿ ಏರ್ಪಾಟು ಮಾಡಿದ್ದ ಗೋ ಆಧಾರಿತ ವ್ಯವಸಾಯ ಉತ್ಪನ್ನಗಳ ಪ್ರದರ್ಶನ ಸ್ಟಾಲುಗಳನ್ನು ತಿರುಮಲೆ ತಿರುಪತಿ ದೇವಸ್ಥಾನಗಳ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಸ್ಟಾಲ್‌ಗಳನ್ನು ಪ್ರಾರಂಭಿಸಿದರು. ಪೂರ್ತಿಯಾಗಿ ಸಂಪ್ರದಾಯ ಪದ್ಧತಿಯಲ್ಲಿ ಗೋ ಆಧಾರಿತ ವಿಧಾನದಲ್ಲಿ ಬೆಳೆದ ಅನೇಕ ವ್ಯವ







ಸಾಯ ಉತ್ಪನ್ನಗಳನ್ನು ಗೋ ಆಧಾರಿತ ಪಂಚಗವ್ಯ ಉತ್ಪನ್ನಗಳನ್ನು ಪ್ರದರ್ಶನದಲ್ಲಿ ಕಾಣಬಹುದಾಗಿತ್ತು.

ನಂತರ ಸಮಾವೇಶವನ್ನು ಉದ್ದೇಶಿಸಿ ಅಧ್ಯಕ್ಷರ ನುಡಿಗಳನ್ನು ತಿಳಿಸಿದ ತಿ.ತಿ.ದೇ.,ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಗೋ ಆಧಾರಿತ ವ್ಯವಸಾಯಕ್ಕೆ ತಿ.ತಿ.ದೇ.,ಉನ್ನತ ಸ್ಥಾನವನ್ನು ನೀಡಿದ್ದು,ದೇವಸ್ಥಾನ ದಲ್ಲಿ ಗೋಮಾತಾ, ಗೋ ಆಧಾರಿತ ನೈವೇದ್ಯ, ನವನೀತ ಸೇವೆ ಯಂತಹ ಅನೇಕ ವಿನೂತನ ಕಾರ್ಯಕ್ರಮಗಳ ಮೂಲಕ ತಿ.ತಿ.ದೇ.,ಯ ಗೋ ರಕ್ಷಣೆಗೆ ಬದ್ಧವಾಗಿದೆ ಯೆಂದು ತಿಳಿಸಿದರು.ಗೋ ಆಧಾರಿತ ವ್ಯವಸಾಯದ ಮೂಲಕ ಬಂದಿರುವ ಉತ್ಪನ್ನಗಳನ್ನೇ ಸ್ವಾಮಿಯವರ ನೈವೇದ್ಯಕ್ಕೆ ಬಳಸುವುದಾಗಿ ಗೋ ಆಧಾರಿತ ವ್ಯವಸಾಯ ರೈತರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುವುದಲ್ಲದೇ ಮಾರ್ಕೆಟ್‌ಗಿಂತಲೂ ಹೆಚ್ಚು ದರವನ್ನು ನೀಡಿ ವ್ಯವಸಾಯ ಉತ್ಪನ್ನಗಳನ್ನು ಕೊಳ್ಳುತ್ತೇವೆ ಎಂದು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ರೈತರ ಹರ್ಷೋದ್ಗಾರಗಳ ಮಧ್ಯೆ ಪ್ರಕಟಿಸಿದರು.



ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಡಾ.ಕೆ.“ ಎಸ್. ಜವಹರ್ ರೆಡ್ಡಿಯವರು ಗೋರಕ್ಷಣೆಗಾಗಿ” ಸಂರಕ್ಷಣೆಗಾಗಿ ತಿ.ತಿ.ದೇ.,ಯವರು ನಿರ್ವಹಿಸುತ್ತಿರುವ ಕಾರ್ಯಗಳನ್ನು ವಿವರಿಸಿದರು.ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಾತಾ ನಿರ್ಮಲಾನಂದ ಯೋಗಭಾರತಿ ಯವರು ಗೋರಕ್ಷಣೆಯ ಅವಶ್ಯಕತೆಯನ್ನು,ಅನ್ನದಾನದ ಔಚಿತ್ಯವನ್ನು ವಿವರಿಸಿದರು.ಉಭಯ ತೆಲುಗು ರಾಜ್ಯ ಗಳಿಂದ ಬಂದಿದ್ದ ಅನೇಕ ಅನ್ನದಾತರು ಗೋ ಆಧಾರಿತ ವ್ಯವಸಾಯದ ಕುರಿತು ತಮ್ಮ ಅನುಭವಗಳನ್ನು ಹಂಚಿ ಕೊಂಡರು.ಸೇವ್ ಫೌಂಡೇಶನ್ ಅಧ್ಯಕ್ಷರಾದ ಶ್ರೀವಿಜಯ ರಾಮರವರೊಂದಿಗೆ ಅನೇಕರು ಉಪಸ್ಥಿತರಿದ್ದ ಪ್ರತಿಷ್ಠಿತ ವ್ಯವಸಾಯ ನಿಪುಣರು, ಶಾಸ್ತ್ರ ಪಂಡಿತರು ಗೋ ಆಧಾರಿತ ವ್ಯವಸಾಯ ವಿಧಾನಗಳನ್ನು, ಪದ್ಧತಿಗಳನ್ನು ರೈತರಿಗೆ ವಿವರಿಸಿದರು.

ಕಂಚಿಕಾಮಕೋಟಿ ಪೀಠಾಧಿಪತಿ ಜಗದ್ಗುರು ಶ್ರೀಶ್ರೀಶ್ರೀಶಂಕರ ವಿಜಯೇಂದ್ರ ಸರಸ್ವತಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿ,ಅತಿರಥ ಮಹಾರಥರ ಸಮಕ್ಷಮದಲ್ಲಿ ಗೋ ಮಹಾಸಮ್ಮೇಳ ನದ ಎರಡನೇ ದಿನದ ಸಮಾರಂಭವು



ಅಕ್ಟೋಬರ್ 31 ರಂದು ಸಾಯಂಕಾಲ ವೈಭವೋಪೇತವಾಗಿ ನಡೆಯಿತು. ತಿ.ತಿ.ದೇ.,ಅಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಮಾತನಾಡುತ್ತಾ ತೆಲುಗು ರಾಜ್ಯಗಳಲ್ಲಿನ ಗೋ ಶಾಲೆಗಳನ್ನು ಶ್ರೀವೇಂಕಟೇಶ್ವರ ಗೋ ಸಂರಕ್ಷಣಾ ಶಾಲೆಯೊಂದಿಗೆ ಅನುಸಂಧಾನ ಮಾಡಿ ಗೋವುಗಳ ಪೋಷ ಣೆಗೆ ಆರ್ಥಿಕ ಸಹಾಯ ನೀಡುವುದಾಗಿ ಸಭಿ ಕರ ಹರ್ಷೋದ್ಗಾರಗಳ ಗೋ ಮಾತೆ ಗೀತೆಯನ್ನು ಅಧ್ಯಕ್ಷರು, ಕಾರ್ಯನಿರ್ವಹಣಾಧಿಕಾರಿಯವರು ಬಿಡು ಗಡೆ ಮಾಡಿದರು.

ಯುಗ ತುಲಸಿ ಫೌಂಡೇಶನ್ ಅಧ್ಯಕ್ಷರು ಹಾಗೂ ತಿ.ತಿ.ದೇ.,ಆಡಳಿತ ಮಂಡಳಿ ಮಾಜಿ ಸದಸ್ಯರಾದ ಶ್ರೀ ಕೆ. ಶಿವಕುಮಾರ್ ಮಾತನಾಡುತ್ತಾ ಗೋ ರಕ್ಷಣೆ ಮಾಡಿದ ಗೋವಿಂದನ ಹಾದಿಯಲ್ಲಿ ನಡೆಯುತ್ತಿರುವ ತಿರುಮಲೆ ತಿರುಪತಿ ದೇವಸ್ಥಾನದವರು ಗೋ ವಿಶಿಷ್ಟತೆಯನ್ನು ವಿಶ್ವವ್ಯಾಪ್ತಿ ಮಾಡುವ ಜವಾಬ್ದಾರಿಯನ್ನು ತೆಗೆದುಕೊಂಡಿರುವುದಕ್ಕೆ ಅಭಿನಂದಿಸಿದರು. ಗುಡಿಗೊಂದು ಗೋಮಾತೆ, ಗೋ ಆಧಾರಿತ ನೈವೇದ್ಯ, ನವನೀತ ಸೇವೆಯಂತಹ ಅನೇಕ ವಿಶಿಷ್ಟ ಕಾರ್ಯಕ್ರಮಗಳನ್ನು ನಡೆಸುವುದಲ್ಲದೇ ಗೋವನ್ನು ಜಾತೀಯ ಪ್ರಾಣಿಯಾಗಿ ಪ್ರಕಟಿಸಬೇಕೆನ್ನುವ ಚಾರಿತ್ರಿಕ ತೀರ್ಮಾನವನ್ನು ಕೂಡಾ ತಿ.ತಿ.ದೇ.,ಯವರು ಮಾಡಿರುತ್ತಾರೆ ಎಂದು ಶ್ರೀ ಶಿವಕುಮಾರ್‌ರವರು ಶ್ಲಾಘೀಸಿದರು. ಗೋ ಮಹಾ ಸಮ್ಮೇಳನ ಕಾರ್ಯ ಕ್ರಮವನ್ನು ಕೂಡಾ ನ ಭೂತೋ ನ ಭವಿಷ್ಯತಿ ಎನ್ನುವ ರೀತಿಯಲ್ಲಿ ನಿರ್ವಹಿಸಿದ ತಿ.ತಿ.ದೇ., ಯವರಿಗೆ ಕೃತಜ್ಞತೆಗಳನ್ನು ತಿಳಿಸಿದರು. ಗೋವನ್ನು ಜಾತೀಯ ಪ್ರಾಣಿಯಾಗಿ ಪ್ರಕಟಿಸಬೇಕೆಂದು ಕೇಂದ್ರಕ್ಕೆ ಮನವಿ ಮಾಡುತ್ತಾ, ಸಂಕ್ರಾಂತಿ ನಂತರ ದೇಶ ವ್ಯಾಪ್ತಿಯಾಗಿ ಗೋ ಮಹಾರಥ ಯಾತ್ರೆಗೆ ಚಾಲನೆ ನೀಡಲಾಗುವುದು ಎಂದು ಶ್ರೀ ಶಿವಕುಮಾರ್ ರವರು ಪ್ರಕಟಿಸಿದರು.

ತಿ.ತಿ.ದೇ.,ಬೋರ್ಡ್ ಪ್ರತಿಪಾದಿಸಿದ ರೀತಿಯಲ್ಲಿ ಗೋಮಾತೆಯನ್ನು ಜಾತೀಯ ಪ್ರಾಣಿಯಾಗಿ ಪ್ರಕಟಿಸಬೇಕೆಂದು ಪ್ರಮುಖ ಯೋಗ ಗುರುಗಳು ಹಾಗೂ ಪತಂಜಲಿಯೋಗ ಪೀಠದ ಸಂಸ್ಥಾಪಕರಾದ ಶ್ರೀ ಬಾಬಾರಾಮದೇವ್ ಕೇಂದ್ರಕ್ಕೆ ಮನವಿ ಮಾಡಿದರು. ದೇಶದ ಮುಖ್ಯಮಂತಿಗಳೆಲ್ಲರೂ ತಿ.ತಿ.ದೇ.,ಪ್ರತಿಪಾದನೆಯನ್ನು ಕಾನೂನು ಮಾಡಲು ಸಹಕರಿಸಬೇಕೆಂದು ಕೋರಿದರು. ಭುವನೇಶ್ವರಿ ಪೀಠದ ಪೀಠಾಧಿಪತಿಯಾದ ಶ್ರೀ ಕಮಲಾನಂದ ಭಾರತಿ ಸ್ವಾಮೀಜಿ, ಉಡುಪಿ ಪೇಜಾವರ ಅಧೋಕ್ಷಜಾ ಮಠದ ಪೀಠಾಧಿಪತಿಗಳಾದ ಶ್ರೀವಿಶ್ವ ಪ್ರಸನ್ನತೀರ್ಥ ಮಹಾಸ್ವಾಮೀಜಿ, ಉತ್ತರಾಖಂಡ ಶ್ರೀಗೋಪಾಲಮಣಿ ಮಹಾರಾಜ,ಒರಿಸ್ಸಾದ ಶ್ರೀಪರಮಹಂಸ ಪ್ರಜ್ಞಾನಂದ ಮಹಾರಾಜ,






ರಾಜಸ್ಥಾನದವರಾದ ಶ್ರೀರಾಧಾ ಕೃಷ್ಣಜೀ ಮಹಾರಾಜ, ಶ್ರೀಗೋಧಾಮ ಮಹಾತೀರ್ಥಪತ್ ಮೇಡ ಮತ್ತು ರಾಜ ಸ್ಥಾನದ ಗೌ ಋಷಿ ಶ್ರೀದತ್ ಶರಣಾನಂದ ಮಹಾರಾಜ ರವರು ತಮ್ಮ ಗೋಸಂದೇಶವನ್ನು ತಿಳಿಸಿದರು.

ಅವಧೂತದತ್ತಪೀಠ ಉತ್ತರಾಧಿಕಾರಿ ಪೂಜ್ಯ ಶ್ರೀದತ್ತ ವಿಜಯಾನಂದ ತೀರ್ಥರು,ಕರ್ನಾಟಕ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿಯವರು, ಜಗದ್ಗುರುಶಂಕರಾ ಚಾರ್ಯ ಶ್ರೀಶ್ರೀಶ್ರೀರಾಘವೇಶ್ವರ ಭಾರತಿ ಮಹಾ ಸ್ವಾಮೀ ಜಿಯವರು, ಏರ್ಪೇಡು ವ್ಯಾಸಾಶ್ರಮ ಶ್ರೀ ಪರಿಪೂರ್ಣಾ ನಂದಗಿರಿ ಸ್ವಾಮೀಜಿಯವರು ತಮ್ಮ ಅನುಗ್ರಹ ಭಾಷಣ ವನ್ನು ಮಾಡಿದರು. ಗೋಮಾತಾ ರಕ್ಷಣೆಗೆ ತಿ.ತಿ.ದೇ., ಪ್ರಾರಂಭಿಸಿದ ಉದ್ಯಮವು ವಿಶ್ವವ್ಯಾಪ್ತಿಯಾಗ ಬೇಕೆಂದು ಮುಖ್ಯ ಅತಿಥಿಗಳಾದ ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಶ್ರೀಶ್ರೀಶ್ರೀಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿಯವರು ಆಶಯ ವ್ಯಕ್ತ ಪಡಿಸಿದರು.ಗೋ ಸಂರಕ್ಷಣೆ ನಿರ್ಣಯವು ದೇಶದ ಸಂಕ್ಷೇಮಕ್ಕೆ ಉಪ ಯೋಗವಾಗುತ್ತದೆಂದು ಜಗದ್ಗುರುಗಳು ಅಭಿಪ್ರಾಯಿಸಿದರು. ಶೃಂಗೇರಿ ಶಾರದಾ ಪೀಠಾಧಿಪತಿ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಯವರು ಕಳುಹಿಸಿದ್ದ ವೀಡಿಯೋ ಸಂದೇಶವನ್ನು ಪ್ರದರ್ಶಿಸಲಾ ಯಿತು. ಕಾರ್ಯಕ್ರಮದ ಮುನ್ನಜಗದ್ಗುರು ಶ್ರೀಶ್ರೀಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಯವರು ಪ್ರಾರಂಭಿಸಿದ ಗೋಧೂಳಿ ಕಾರ್ಯಕ್ರಮವು ಆಹ್ವಾನಿತ ರನ್ನು ರಂಜಿಸಿತು. ಕಪಿಲಗೋವಿಗೆ ಮತ್ತು ಕರುವಿಗೆ ಸ್ವಾಮೀಜಿ ಪ್ರತ್ಯೇಕ ಪೂಜೆಗಳನ್ನು ಸಲ್ಲಿಸಿದರು. ಕಳಾ ಕ್ಷೇತ್ರದ ವತಿಯಿಂದ ಏರ್ಪಾಟು ಮಾಡಿದ್ದ ಸಪ್ತ ಗೋ ಜಾತಿಗಳ ಪ್ರದರ್ಶನವು ಗೋ ಬಂಧುಗಳಿಗೆ ಅನಿರ್ವಚ ನೀಯವಾದ ಆನಂದಾನುಭೂತಿಯನ್ನು ಉಂಟು ಮಾಡಿತು. ಉತ್ತರ ಮತ್ತು ದಕ್ಷಿಣ ಭಾರತದ ಸಂಗಮವಾಗಿ ಜರುಗಿದ ಗೋ ಮಹಾಸಮ್ಮೇಳನಕ್ಕೆ ಹಾಜರಾದ ಅತಿರಥ ಮಹಾರಥರನ್ನು ತಿ.ತಿ.ದೇ., ವೈಭವವಾಗಿ ಸತ್ಕರಿಸಿತು ಗೋರಕ್ಷಣೆ, ಸಂರಕ್ಷಣೆಗಾಗಿ ತಿ.ತಿ.ದೇ.,ಇಂತಹ ಕಾರ್ಯ





ಕ್ರಮಗಳನ್ನು ಇನ್ನಷ್ಟು ಹಮ್ಮಿಕೊಳ್ಳಬೇಕೆಂದು, ಸಕಲ ದೇವತಾ ಸ್ವರೂಪವಾದ ಗೋವು ಸಾಧ್ಯವಾದ ಮಟ್ಟಿಗೆ ಸದ್ಯದಲ್ಲೇ ಜಾತೀಯ ಪ್ರಾಣಿಯಾಗಿ ಘೋಷಿತವಾಗಲೆಂದು ಆ ಗೋವಿಂದನ ಶ್ರೀ ಚರಣಾರವಿಂದಗಳನ್ನು ಪ್ರಾರ್ಥಿಸೋಣ.

## ಸ್ವಸ್ತೀರ್ವಚನ

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯ್ಯೇನ ಮಾರ್ಗೇಣ ಮಹಿಂ ಮಹಿಶಾಃ॥
ಗೋಬ್ರಾಹ್ಮಣೇಭ್ಯ ಶುಭಮಸ್ತು ನಿತ್ಯಂ
ಲೋಕಾ ಸ್ಸಮಸ್ತಾ ಸ್ಸುಖಿನೋ ಭವಂತು॥

ಈ ಭೂಮಿಯನ್ನು ಪಾಲಿಸುವ ಪಾಲಕರು ನ್ಯಾಯ-ಮಾರ್ಗದಲ್ಲಿ ಪಾಲಿಸಲಿ! ಗೋ-ಬ್ರಾಹ್ಮಣರಿಂದ ಶುಭವುಂಟಾಗಲಿ! ಸಮಸ್ತ ಲೋಕಗಳು ಸುಖದಿಂದಿರಲಿ! ಸಮಸ್ತ ಪ್ರಜೆಗಳಿಗೆ ಕ್ಷೇಮವುಂಟಾಗಲಿ!

**ಜೈ ಗೋಮಾತಾ - ಜೈ ಗೋವಿಂದಾ**











# ಗೀತೆಯ ಮಾಧುರ್ಯ

- ಡಾ।। ರಾಮಚಂದ್ರದಾಸ್ ಸಿ.ಜೆ.

ಒಂದು ಪರ್ವವೇ ಮಹಾಭಾರತ ವನ್ನು ಅಲಂಕರಿಸಿರುವುದು ಗಮನಾರ್ಹ.ಶ್ರೀ ಮದ್ಭಗವ ದ್ಗೀತೆಯು ಸಾಕ್ಷಾತ್ ಭಗವಂತನ ದಿವ್ಯವಾಣಿಯಾಗಿದೆ. ಇದು ಒಂದು ಪರಮ ರಹಸ್ಯಮಯ ಗ್ರಂಥವಾಗಿದ್ದು, ವೇದಗಳ ಸಾರವನ್ನು ಹೊಂದಿದೆ.ಇದರ ರಚನೆಯಲ್ಲಿ ಎಷ್ಟು ಸರಳತೆ ಇದೆಯೋ,ಅರ್ಥದಲ್ಲಿ ಅಷ್ಟೇ ಗೂಢ ಮತ್ತು ಗಂಭೀರವಾಗಿದೆ.''ಸರ್ವ ಶಾಸ್ತ್ರಮಯೀ ಗೀತಾ...ಎಂದು ಭೀಷ್ಮಪರ್ವದಲ್ಲಿ ಉಲ್ಲೇಖಿತವಾಗಿದೆ. ಶ್ರೀಕೃಷ್ಣನ ಮುಖಾರವಿಂದದಿಂದ ಹೊರಟು, ವೇದವ್ಯಾಸ ರಿಂದ ಶ್ಲೋಕಬದ್ಧವಾಗಿ 700 ಶ್ಲೋಕಗಳನ್ನೊಳಗೊಂಡು, ಹದಿನೆಂಟು ಅಧ್ಯಾಯಗಳಲ್ಲಿ ವಿಭಾಜಿಸಿ ಮಹಾಭಾರತದಲ್ಲಿ ಸೇರಿಸಿರುವುದು ಜಗತ್ತಿಗೆ ಮಹದುಪಕಾರವಾಗಿದೆ.

"ಭಗವದ್ಗೀತೆ''ಎಂದಾಕ್ಷಣ ಸಂಚಲನ ಮೂಡಿ ಸುವಂತಹ ಆಕರ್ಷಣೆಯನ್ನು ಹೊಮ್ಮಿಸುತ್ತದೆ.ಇದನ್ನು, ಪಂಚಮ ವೇದದಂತಿರುವ ಮಹಾಭಾರತದ ಸಾರ ಎಂದೇ ನಂಬಲಾಗಿದೆ. ಭಾರತೀಯರ ಧರ್ಮ,ಸಂಸ್ಕೃತಿ, ನಾಗರೀ ಕತೆಗಳ ಸಮಗ್ರ ದರ್ಶನವನ್ನು ಮಾಡಿಸಿ, ಸಕಲ ವರ್ಗದ ಜನರಿಗೆ ಉಪಯುಕ್ತಕರವಾದ ಧರ್ಮ ನೀತಿ, ನಿಯಮಗಳನ್ನು ಹೊಂದಿರುವ ನವರಸಭರಿತ ಕಾವ್ಯವಾಗಿದ್ದು, "ಅರಸುಗಳಿ ಗಿದು ವೀರ...ಎಂಬುದಾಗಿ ವರ್ಣಿತವಾಗಿದೆ. ಇದರಲ್ಲಿ ಧಾರ್ಮಿಕ, ಸಾಮಾಜಿಕ, ಲೌಕಿಕ, ರಾಜನೀತಿ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರ, ಆಚರಣೆ ಮುಂತಾದುವು ಗಳ ಬಗ್ಗೆ ದೊರಕುವ ಮಾಹಿತಿ, ಸಂದೇಶ ಇಂದಿಗೂ ಪ್ರಸ್ತುತ ಮತ್ತು ಎಂದಿಗೂ ಪ್ರಸ್ತುತ್ಯ.

ಗೀತಾ ಸಹಸ್ರ ನಾಮೈವ ಸ್ತವರಾಜೋಹ್ಯನುಸ್ಮೃತಿಃ।
ಗಜೇಂದ್ರ ಮೋಕ್ಷಣಂ ಚೈವ ಪಂಚರತ್ನಾನಿ ಭಾರತೇ ॥

ವೇದವ್ಯಾಸ ಪ್ರಣೀತ ಮಹಾಭಾರತದಲ್ಲಿ ಅತ್ಯಮೂಲ್ಯ ವಾದ ಐದು ರತ್ನಗಳಾದ ಭಗವದ್ಗೀತೆ, ವಿಷ್ಣುಸಹಸ್ರನಾಮ, ಭೀಷ್ಮಸ್ತವರಾಜ, ಅನುಸ್ಮೃತಿ ಮತ್ತು ಗಜೇಂದ್ರ ಮೋಕ್ಷ ಇದ್ದು ಜೊತೆಗೆ "ಸನತ್ಸುಜಾತೀಯ" ಭಾಗವೂ ಆತ್ಮ ವಿಜ್ಞಾನದ ರತ್ನ ಪೇಟಿಕೆಯಾಗಿದೆ. ಮೋಕ್ಷ ಧರ್ಮವನ್ನು ನಿರೂಪಿಸುವ

## ಹಿನ್ನೆಲೆ

ಶ್ರೀಹರಿಯ ಸಂಕಲ್ಪಾನುಸಾರ ಕಾರಣವಿಲ್ಲದೆ ಯಾವ ಕಾರ್ಯವೂ ಬ್ರಹ್ಮಾಂಡದಲ್ಲಿ ನಡೆಯುವುದಿಲ್ಲ. ಅದೂ ಅಲ್ಲದೆ, ವೇದವ್ಯಾಸರ ಅನುಗ್ರಹದಿಂದ ಇಡೀ ಮಹಾಭಾರತದ ಒಂದೊಂದು ಶ್ಲೋಕವನ್ನು ಅರ್ಥಮಾಡಿಕೊಂಡು ಬರೆದ ಗಣೇಶಾಂಶ ಸಂಭೂತರಾದ ಗೋಪಾಲದಾಸರು.''ನಿನ್ನ ಒಂದು ಕಾರ್ಯವು ದ್ವಂದ್ವವಾಯಿತು. ಎಂಬಂತೆ ಕುರುಕ್ಷೇತ್ರ ಮಹಾಸಂಗ್ರಾಮವು ಒಂದು ನಿಮಿತ್ತವಾಗಿ, ಶಿಷ್ಟ ರಕ್ಷಣ, ದುಷ್ಟ ಶಿಕ್ಷಣದ ಕಾರ್ಯವು, ನಡೆದು, ಭೂಭಾರ ಹರಣವಾಯಿತು, ಎಂದಿದ್ದಾರೆ.

ಈ ಮಹಾ ಸಂಗ್ರಾಮವು,ಸರಸ್ವತೀ ನದಿಯ ದಕ್ಷಿಣ ಭಾಗ ಮತ್ತು ದೃಶದ್ವತೀ ನದಿಯ ಉತ್ತರ ಭಾಗದ ಮಧ್ಯದಲ್ಲಿ ಉದ್ದ-5 ಯೋಜನ, ಅಗಲ-5 ಯೋಜನ ವಿಸ್ತಾರ ಹೊಂದಿದ ಈ ಸ್ಥಳವು ಇಂದಿನ ಹರಿಯಾಣ ರಾಜ್ಯದಲ್ಲಿದ್ದು "ಕುರುಕ್ಷೇತ್ರ" ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ ಎಂದು ನಂಬಲಾಗಿದ್ದು, ಇದರ ವಿವರ ವನ ಪರ್ವ ಮತ್ತು ಶಲ್ಯ ಪರ್ವದಲ್ಲಿ ವರ್ಣಿತ



ವಾಗಿದ್ದು,ಇಲ್ಲಿಯೇ ನಡೆದಿದೆ ಎಂದು ಉಲ್ಲೇಖಿತವಾಗಿದೆ.ಈ ಸ್ಥಳಕ್ಕೆ "ಸಮಂತ ಪಂಚಕ"ಎಂಬ ಹೆಸರೂ ಇದೆ. ಕುರುಕ್ಷೇತ್ರ ಮಹಾಸಂಗ್ರಾಮವು ನಡೆಯುವುದು ನಿಶ್ಚಿತವಾದಾಗ,ಇದಕ್ಕೆ ಒಂದು ರೀತಿಯಲ್ಲಿ ಕಾರಣ ಕರ್ತನಾದ ಧೃತರಾಷ್ಟ್ರನನ್ನು ಕುರಿತು ವೇದವ್ಯಾಸರು ನೀನು ಈ ಘೋರವಾದ ಸಂಗ್ರಾಮ ವನ್ನು ನೋಡಲು ಇಚ್ಛಿಸುವುದಾದರೆ, ನಿನಗೆ ದಿವ್ಯ ದೃಷ್ಟಿಯನ್ನು ಕೊಡುತ್ತೇನೆ ಎಂದಾಗ ನಾನು ಕೇಳಲು ಮಾತ್ರ ಬಯಸುತ್ತೇನೆ ಎಂದಾಗ, ಸಂಜಯನಿಗೆ ಆ ದಿವ್ಯ ದೃಷ್ಟಿಯನ್ನು ನೀಡಿದರು. ಯುದ್ಧದ ಪ್ರಾರಂಭದ ದಿನವಾದ ಮಾರ್ಗ ಶಿರಮಾಸದ ಶುಕ್ಲ ಪಕ್ಷದ ಏಕಾದಶಿಯಂದು ಶ್ರೀಕೃಷ್ಣನ ಸಾರಥ್ಯದಲ್ಲಿ ಅರ್ಜು ನನು ರಣರಂಗ ಪ್ರವೇಶಿಸಿ,ತನ್ನ ರಥವನ್ನು ಎರಡು ಸೈನ್ಯಗಳ ಮಧ್ಯದಲ್ಲಿ ನಿಲ್ಲಿಸುವಂತೆ ಶ್ರೀ ಕೃಷ್ಣನಲ್ಲಿ ಪ್ರಾರ್ಥಿಸಿದನು. ಅದೇ ರೀತಿ,ಉಭಯ ಸೇನೆಗಳ ಮಧ್ಯದಲ್ಲಿ ರಥವು ನಿಂತಾಗ, ಅರ್ಜು ನನು ಭೀಷ್ಮ, ದ್ರೋಣ ಕೃಪ, ಅಶ್ವಾತ್ಥಮ ಮತ್ತಿತರ ಬಂಧು ಬಾಂಧವರನ್ನು ನೋಡಿ,ರಾಜ್ಯದಾಹದಿಂದ ಇವರನ್ನೆಲ್ಲಾ ಸಂಹರಿಸಬೇಕೇ?ಇದರಿಂದ ನಾನು ಕುಲ ಘಾತಕರಾಗು ವೆನು ಇತ್ಯಾದಿಯಾಗಿ ಚಿಂತಿಸಿ ಶಸ್ತ್ರತ್ಯಾಗ ಮಾಡಿದನು ಆಗ ಭಗವಂತನಾದ ಶ್ರೀ ಕೃಷ್ಣನು ಅರ್ಜುನನ್ನು ಕುರಿತು, ಅವನನ್ನು ಪುನಃ ಯುದ್ಧ ಸನ್ನದ್ಧನನ್ನಾಗಿಸಲು,"ನಿನ್ನ ಸ್ವಧರ್ಮಾಚರಣೆ ಮಾಡುವುದು ಅತ್ಯವಶ್ಯಾ ಎಂದು ಹೇಳುತ್ತಾ ಸಾಂಖ್ಯಯೋಗ, ಕರ್ಮಯೋಗ,ಜ್ಞಾನಯೋಗ,ಭಕ್ತಿಯೋಗ ಇತ್ಯಾದಿಗಳನ್ನೊಳ ಗೊಂಡ ವಿವರವಾದ ಉಪದೇಶವನ್ನು ಮಾಡಿದನು. ಭಗ ವಂತನ ವದನಾರವಿಂದದಿಂದ ಬಂದಿದ್ದರಿಂದ ಇದು "ಭಗವ ದ್ಗೀತೆ"ಎಂದು ಪ್ರಸಿದ್ಧವಾಗಿದ್ದು ಈ ದಿನವನ್ನು "ಗೀತಾ ಜಯಂತಿ" ಎಂಬ ಪ್ರಸಿದ್ಧ ನಾಮದಿಂದ ಜ್ಞಾನಪೂರ್ಣವಾದ ಹಬ್ಬವಾಗಿ ಆಚರಿಸಲಾಗುತ್ತಿದೆ. ಮನುಷ್ಯನ ಶರೀರವು ಧರ್ಮ ಕ್ಷೇತ್ರವಾಗಿದ್ದು ಇದರಲ್ಲಿ ಜೀವರ ಕರ್ಮವನ್ನಾಧರಿಸಿ, ತತ್ವಾಭಿ ಮಾನಿ ದೇವತೆಗಳು ಹಾಗೂ ತತ್ವಾಭಿಮಾನಿ ದೈತರ ನಡುವೆ ಪ್ರತಿಕ್ಷಣದಲ್ಲಿಯೂ ಯುದ್ಧ ನಡೆಯುತ್ತಿರುವುದರಿಂದ ಭಗವಂತ ನಿಂದ ಉಪದೇಶಿತವಾದ ಈ ಭಗವದ್ಗೀತೆಯು ಜೀವನದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿದೆ.

ಈ ಮದ್ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗಗಳೆಂದು, ಕ್ರಮವಾಗಿ ಆರು-ಆರು ಅಧ್ಯಾಯಗಳ ಮೂರು ಷಟ್ಕಗಳಿವೆ ಎಂದು ಭಾವಿಸಲಾಗಿದೆ.ಮೊದಲನೇ ಷಟ್ಕದ ಪ್ರಥಮ ಅಧ್ಯಾಯವು ಕೇವಲ ಪ್ರಸ್ತಾವನಾ ರೂಪದಲ್ಲಿದೆ. ಎರಡರಿಂದ ಆರನೇ ಅಧ್ಯಾ ಯದವರೆಗೆ ಸಾಂಖ್ಯಯೋಗ (ಜ್ಞಾನಯೋಗ), ಕರ್ಮಯೋಗ ಮತ್ತು ಧ್ಯಾನ ಯೋಗದ ವರ್ಣನೆ ಇದ್ದು, ಎಲ್ಲಾ ವಿಷಯಗಳ ಮಿಶ್ರಣವನ್ನು ಹೊಂದಿದೆ.ಎರಡನೇ ಷಟ್ಕವಾದ ಏಳರಿಂದ ಹನ್ನೆ ರಡನೇ ಅಧ್ಯಾಯದವರೆಗೆ ಪ್ರಧಾನವಾಗಿ ಭಕ್ತಿ ಯೋಗದ ಬಗ್ಗೆ ವರ್ಣಿಸಲಾಗಿದೆ. ಮೂರನೇ ಷಟ್ಕವಾದ ಹದಿಮೂರರಿಂದ ಹದಿ ನೇಳನೇ ಅಧ್ಯಾಯದವರೆಗೆ, ಜ್ಞಾನ ಯೋಗ, ಭಕ್ತಿಯೋಗ ದೈವೀ ಮತ್ತು ಆಸುರೀ ಸಂಪತ್ತಿನ ವ್ಯಾಖ್ಯೆ,ಶ್ರದ್ಧೆ,ಆಹಾರ,ಯಜ್ಞ, ದಾನ, ತಪಸ್ಸು ಇತ್ಯಾದಿಗಳ ನಿರೂಪಣೆ ಇದೆ.

ಹದಿನೆಂಟನೆ ಅಧ್ಯಾಯವು ಉಪಸಂಹಾರವಾದು ದರಿಂದ ಅದರಲ್ಲಿ ಕರ್ಮ, ಭಕ್ತಿ ಮತ್ತು ಜ್ಞಾನಯೋಗಗಳನ್ನು ಪುನಃ ವರ್ಣಿಸಿದ್ದು, ಅಂತ್ಯದಲ್ಲಿ ಶರಣಾಗತಿ ಪ್ರಧಾನವಾದ ಭಕ್ತಿ ಯೋಗದ ಉಪದೇಶದಿಂದ ಪರ್ಯವಸಾನ ಮಾಡಲಾಗಿದೆ. ಜ್ಞಾನ, ವಿಜ್ಞಾನ ಪೂರ್ವಕವಾಗಿ ಪರಮಾತ್ಮನನ್ನು ಉಪಾಸಿಸಿ ತಿಳಿದುಕೊಳ್ಳುವುದನ್ನು ಜ್ಞಾನ ವಿಜ್ಞಾನ ಯೋಗ"ಎಂದೂ ಹೆಸರಿ ಸಲಾಗಿದೆ.ಗೀತೆಗೆ ಸಂಬಂಧಿಸಿದಂತೆ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತದಲ್ಲಿ ಅನೇಕ ಮಹನೀಯರು ಟೀಕೆಗಳು, ವ್ಯಾಖ್ಯಾ ನಗಳು ಇತ್ಯಾದಿಗಳನ್ನು ರಚಿಸಿದ್ದು,ಈ ಗ್ರಂಥವು ವಿಶ್ವಮಾನ್ಯ ವಾಗಿದೆ. ಮಹಾಭಾರತದಲ್ಲಿ ಈ ಗೀತೆಯ ಮಹಾತ್ಮೆ ವರ್ಣಿಸು ವಾಗ -

ಗೀತಾ ಗಂಗಾಚ ಗ್ರಾಯತ್ರಿ ಗೋವಿಂದೇತಿ ಹೃದಿ ಸ್ಥಿತೇ ।
ಚತುರ್ಗಕಾರ ಸಂಯುಕ್ತೇ ಪುನರ್ಜನ್ಮನವಿದ್ಯತೇ ॥

ಎಂದು ಬಣ್ಣಿಸಿದೆ. ಇದು ಕೇವಲ ವಾಚನ ಗ್ರಂಥವಾಗಿರದೇ ಅನುಷ್ಠಾನ ಗ್ರಂಥವಾಗಿರುವುದು ಹೆಗ್ಗಳಿಕೆ. ಪ್ರಂಪಚದ ಅತಿ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿರುವ ಕೀರ್ತಿ ಹೊಂದಿದೆ.

ಮಾನವನು ಸುಖದಲ್ಲಿದ್ದಾಗ ಯಾರ ಸಹಾಯವನ್ನು ಅಪೇಕ್ಷಿಸಲಾರ,ಆದರೆ ಕಷ್ಟದಿಂದ ಕುಗ್ಗಿದಾಗ, ಮುಕ್ಕರಿಸಿ ಬಿದ್ದಾಗ ಅವನಿಗೆ ಆಂತರಿಕವಾಗಿ ಸಹಾಯ,ಮಾರ್ಗದರ್ಶನ ಅತೀ ಅವಶ್ಯಕವಾಗಿದ್ದು, ಗೀತೆಯು, ಸಂಜೀವಿನಿಯಂತೆ ಇದೆ. ಶ್ರೀಮನ್ಮಧ್ವಾಚಾರ್ಯರಿಗೂ ಗೀತೆಗೂ ವಿಶೇಷ ಸಂಬಂಧ ವಿದ್ದು,ಮಹಾಭಾರತವು ಪಾರಿಜಾತವಾದರೆ, ಗೀತೆ ಅದರ ಮಧುವಾಗಿದೆ ಎನ್ನುತ್ತಾ,ಶ್ರೀಕೃಷ್ಣ ಕೇವಲ ಪಾರ್ಥನಿಗೆ ಮಾತ್ರ ಸಾರಥಿಯಲ್ಲ ಇಡೀ ಜೀವಕೋಟಿಗೆ ಬಿಂಬರೂಪಿನಲ್ಲಿದ್ದು ಸಾರಥಿಯಾಗಿದ್ದಾನೆ, ಎಂದಿದ್ದಾರೆ.

ಗೀತೆಯ ಯಾವ ಶ್ಲೋಕವನ್ನು ನೋಡಿದರೂ ಅಲ್ಲಿ ಜ್ಞಾನಜ್ಯೋತಿ ಹೊರಹೊಮ್ಮಿ, ಆಬಾಲ ವೃದ್ಧರಿಗೂ ಜೀವನ ದಲ್ಲಿ ಉತ್ಸಾಹ,ಕರ್ತವ್ಯದಲ್ಲಿ ಗೌರವ ಆಪತ್ತಿನಲ್ಲಿ ಧೈರ್ಯ, ಸಂಶಯ ನಿವಾರಣೆ ಮಾಡುವ ಮಾರ್ಗದರ್ಶಿಯಾಗಿದೆ. ಶ್ರೀ ಜಗನ್ನಾಥ ದಾಸರು.

ಇದು ಸುಧಾಮಣಿ ಚಿಂತಿಸುವವರಿ - 1

ಗಿದು ಅಭೀಷ್ಟವನೀತ ಸುರತರು - 1

- ವಿದು ಮನದ ಕಾಮಿತವ

ಕರಕೊಂಬುವುದಕೆ ಸುರಧೇನು॥

ಎಂದು ಕೊಂಡಾಡಿದ್ದಾರೆ.

"ಮಹಾಭಾರತ ತೈಲ ಪೂರ್ಣಃ ।
ಪ್ರಜ್ವಾಯಿತೋ ಜ್ಞಾನಮಯ ಪ್ರದೀಪ ಃ "

ಎಂಬ ಆಪ್ತ ವಚನಗಳಿವೆ.''ಶ್ರೀ ಗೀತಾರ್ಥಮು ಸಂಗೀತಾರ್ಥಮು" ಎಂಬುದಾಗಿ ಶ್ರೀ ತ್ಯಾಗರಾಜರು ಬಣ್ಣಿ ಸಿದ್ದಾರೆ. ಪದ್ಮಪುರಾಣದಲ್ಲಿನ ಒಂದು ಸ್ವಾರಸ್ಯ,ಮಹಾ ಲಕ್ಷ್ಮಿಯು ಶ್ರೀಹರಿಯನ್ನು ಕುರಿತು "ಪ್ರಭು, ಕಣ್ಣು ಮುಚ್ಚಿ ಏಕೆ ನಿದ್ದೆ ಮಾಡುತ್ತಿರುವಂತೆ ಕಾಣುತ್ತಿರುವೆ? ಎಂದಾಗ ಶ್ರೀ ಹರಿಯು "ದೇವಿ, ವೇದವ್ಯಾಸರು ರಚಿಸಿದ ಭಗವದ್ಗೀತೆ ಸಕಲ ಶಾಸ್ತ್ರಗಳ ಸಾರವಾಗಿದೆ.ಅದರ ಅರ್ಥ ಗಾಂಭೀರ್ಯಕ್ಕೆ ನಾನು ಮನಸೋತು. ಅದನ್ನೇ ಆಲೋಚಿಸುತ್ತಾ ಆನಂದ ಪರವಶನಾಗಿ ಕಣ್ಣು ಮುಚ್ಚಿಕೊಂಡಿರುತ್ತೇನಷ್ಟೇ" ಎಂದು ಉತ್ತರಿಸಿದ್ದಾನೆ. ಶ್ರೀ ಹರಿಯು ತಾನೇ ವೇದವ್ಯಾಸ ರೂಪ ದಿಂದ ಹೇಳಿದ್ದು ಅದರ ಅರ್ಥ ಗಾಂಭೀರ್ಯಕ್ಕೆ ಸ್ವರಮಣ ನಾದ ತಾನೇ ಮೈಮರೆತಿದ್ದಾನೆ, ಎನ್ನುವುದು ಲೋಕಮೋಹಕ ವಷ್ಟೇ.

**ಶ್ರೀ ಕೃಷ್ಣ ಜಗತ್ತಿಗೆ ನೀಡಿದ ಚೆಂದಾದ ಮತ್ತು ಉಪಯುಕ್ತವಾದ ಕೆಲವು ಸಂದೇಶಗಳು.**

- ನಿನ್ನ ಕೆಲಸ ನೀನು ಮಾಡು, ಫಲಿತಾಂಶದ ಬಗೆ ನನಗೆ ಬಿಡು,(ಯಾವ ಬಂಧು ಅಥವಾ ಸ್ನೇಹಿತನಾಗಲಿ ಹೀಗೆ ಹೇಳ ಬಲ್ಲ?)

- ಮನಸ್ಸಿಗೆ ಉದ್ವೇಗವನ್ನುಂಟು ಮಾಡದಂತೆ ಸತ್ಯವೂ "ಅನುದ್ವೇಗ ಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್".

- ಆಯುಸ್ಸು, ಸತ್ವ, ಬಲ, ಆರೋಗ್ಯ, ಸುಖ, ಪ್ರೀತಿ, ಇವು ಗಳನ್ನು ವರ್ಧಿಸುವಂತಹ ಸಾತ್ವಿಕ ಆಹಾರವನ್ನು ಸೇವಿಸಬೇಕು. ಮಿತಿ ಮೀರಿ ತಿನ್ನುವವನಿಗಾಗಲಿ, ಏನನ್ನೂ ತಿನ್ನದೆ ಕೇವಲ ಲೌಕಿಕ ಉಪವಾಸ (ಉಪ =ಹತ್ತಿರ, ವಾಸ =ಇರುವುದು ಅಂದರೆ ಮಾನಸಿಕವಾಗಿ ಭಗವಂತನ ಚಿಂತನೆ ಮಾಡುವುದು ಎಂದರೆ ಜ್ಞಾನಪೂರ್ಣವಾಗಿ ಉಪವಾಸ ಮಾಡಬೇಕು)ಮಾಡುವವನಿ ಗಾಗಲಿ, ಅತಿಯಾಗಿ ನಿದ್ದೆ ಮಾಡುವವನಿಗಾಗಲಿ, ನಿದ್ದೆಯನ್ನೇ ಬಿಟ್ಟವನಿಗಾಗಲಿ ಯೋಗವು ಸಿದ್ಧಿಸಲಾರದು.

- ಆಹಾರ, ವಿಹಾರದಲ್ಲಿ, ಕರ್ಮ ಮಾಡುವುದರಲ್ಲಿ ನಿದ್ರೆ ಎಚ್ಚರಗಳಲ್ಲಿ ನಿಯಮಿತ ಪರಿಮಿತಿಯುಳ್ಳವನು ದುಃಖದಿಂದ ದೂರವಾದ ಯೋಗ ಸಿದ್ಧಿಯನ್ನು ಪಡೆದುಕೊಳ್ಳುವನು.

- ಜಗನ್ನಾಥದಾಸರು "ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು, ಸಾಧಾರಣವಲ್ಲವೊ ಸಾಧು ಪ್ರಿಯನೇ" ಎಂದಿದ್ದಾರೆ.

-ಅನನ್ಯ ಭಾವದಿಂದ ಯಾರು ನನ್ನನ್ನು ಧ್ಯಾನಿಸಿ ಭಕ್ತಿ ಯಿಂದ ಉಪಾಸನೆ ಮಾಡುವರೋ, ನನ್ನಲ್ಲಿಯೇ ಮನಸ್ಸನ್ನು ಲೀನವಾಗಿಸುವರೋ ಅಂತಹವರ ಯೋಗ - ಕ್ಷೇಮದ ಭಾರ ವನ್ನು ಸ್ವತಃ ನಾನೇ ಹೊರುತ್ತೇನೆ.

- ಅನನ್ಯ ಭಕ್ತಿಯಿಂದ ನನ್ನನ್ನು ಧ್ಯಾನಿಸುತ್ತಾ, ಎಲೆ ಯಾಗಲೀ, ಹೂವಾಗಲೀ ಹಣ್ಣಾಗಲೀ, ನೀರಾಗಲೀ ಇವುಗಳನ್ನು ನನಗೆ ಸಮರ್ಪಿಸಿದರೆ ಅದನ್ನು ನಾನು ಪ್ರೀತಿಯಿಂದ ಸ್ವೀಕರಿಸು ತ್ತೇನೆ, ಎಂಬಿತ್ಯಾದಿಯಾಗಿ ಹೇಳಿದ್ದಾನೆ.

ಹೀಗೆ ಗೀತೆಯನ್ನು, ಅದರ ಮಾಧುರ್ಯವನ್ನು ವರ್ಣಿ ಸುತ್ತಾ ಹೊರಟರೆ ಸಾವಿರಾರು ಪುಟಗಳ ಗ್ರಂಥವೇ ರಚನೆಯಾಗಿ ಬಿಡುತ್ತದೆ. ಇಂತಹ ಮಹಾನ್ ಕೃತಿಯನ್ನು ಪಡೆದ ನಾವೇ ಧನ್ಯರು.

ಶ್ರೀ ಕೃಷ್ಣಾರ್ಪಣಮಸ್ತು॥

# ಶ್ರೇಷ್ಠ ಅನುಭಾವಿ ಮಹಿಪತಿದಾಸರು

-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ
80504 36752

ಛಟ್ಟಿ ಅಮಾವಾಸ್ಯೆ ಮಹಿಪತಿದಾಸರ ಕಾಲವಾದ ದಿನ. ಮಹಿಪತಿದಾಸರು ಮೂಲತಃ ಬಾಗಲಕೋಟೆ ಜಿಲ್ಲೆಯ "ಕಾಥವಟೆ" ಮನೆತನದವರು, ಆದರೆ ಕಾಲಾಂತರದಲ್ಲಿ ಮಹಿಮತಿರಾಯರ ತಂದೆ "ಮೌನಭಾರ್ಗವ" ಗೋತ್ರಜ ಕೊನೇರಿರಾಯರು ತಮ್ಮ ಹೆಂಡತಿಯಾದ ಲಕ್ಷ್ಮೀಬಾಯಿ ಜೊತೆ ಬೆಳಗಾವಿ ಜಿಲ್ಲೆಯ ಅಥಣಿ, ತಾಲ್ಲೂಕಿನ 'ಐಗಳಿ' ಎಂಬ ಗ್ರಾಮದಲ್ಲಿ ವೆಂಕಟೇಶ ದೇವರನ್ನು ಅರ್ಚಿಸುತ್ತ ಕರ್ಣಿಕ ವೃತ್ತಿಯೊಂದಿಗೆ ಸುಖವಾಗಿದ್ದರು. ಕೋನೇರಿ ರಾಯರು ವಿದ್ವಾಂಸರು ಷಟ್‌ಶಾಸ್ತ್ರ ಪಂಡಿತರು ಮತ್ತು ಸಂಗೀತ ಆಸಕ್ತರಾಗಿದ್ದರು. ಇವರಿಗೆ ಮೊದಲನೇ ಮಗ ವೆಂಕಟೇಶ ಮತ್ತು ಎರಡನೇ ಮಗ ಗುರುರಾಯ (ಮಹಿಪತಿರಾಯ) ಸಂಸಾರ ಬೆಳೆದ ಹಾಗೆ ನಿರ್ವಹಿಸಲು ಕಷ್ಟವಾದಾಗ ವಿಜಯಪುರಕ್ಕೆ ಕೋನೇರಿ ರಾಯರು ಬಂದು ನೆಲಸಿದರು. ಆಗ ಆದಿಲ್‌ಶಾಹಿ ಆಡಳಿತ ಇದ್ದರು. ಹಿಂದೂ ಮುಸ್ಲಿಂ ಧರ್ಮದಲ್ಲಿ ದ್ವೇಷದ ವಾತಾವರಣ ಇರದೆ ಸ್ನೇಹ ಸೌಹಾರ್ದತೆಯಿಂದ ಕೂಡಿತ್ತು. ಮುಂದೆ ಮಕ್ಕಳಿಬ್ಬರು ಬೆಳೆದು ದೊಡ್ಡವರಾದ ಮೇಲೆ ಹಿರಿಯವನಾದ ವೆಂಕಟೇಶನು ವಿದ್ಯಾಭ್ಯಾಸ ಮಾಡಿ ಮುಂದೆ ಐಗಳಿ ಗ್ರಾಮದಲ್ಲಿ ತನ್ನ ಹೆಂಡತಿಯಾದ ತುಕ್ಕವ್ವಳ ಜೊತೆ ಕುಲದ ಕರ್ಣಿಕ ವೃತ್ತಿ ಮತ್ತು ವೆಂಕಟೇಶ ದೇವರ ಅರ್ಚನೆ ಮಾಡ್ತಾ ಅಲ್ಲಿಯೇ ವಾಸಿಸತೊಡಗಿದ.

ಇತ್ತ ಮಹಿಪತಿರಾಯರು ತಮ್ಮ ತಂದೆಯಂತೆ ಷಟ್ ಶಾಸ್ತ್ರ ಕಲೆತು ನಿತ್ಯ ಜಪತಪಗಳಲ್ಲಿ ತೊಡಗಿ ಅನುಷ್ಠಾನ ಮಾಡ್ತಾ ರಾಮಾಯಣ, ಮಹಾಭಾರತ ಭಾಗವತ್ ಮಧ್ವಶಾಸ್ತ್ರ ಹೀಗೆ ಕಲಿತು ಆಧ್ಯಾತ್ಮ ಕಡೆ ಹೆಚ್ಚಿನ ಒಲವು ತೋರಿಸುತ್ತಾ ಸಾಧನೆಯ ಮಾರ್ಗದಲ್ಲಿ ನಡೆದರು. ಇವರು ಆದಿಲ್‌ಶಾಹಿ



ಆಸ್ಥಾನದ ಪಕ್ಕದಲ್ಲಿರುವ ಇರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕಟ್ಟೆಯ ಮೇಲೆ ಪ್ರವಚನ ಹೇಳುತ್ತಿದ್ದರು. ಇವರ ವಾಕ್ ಚಾತುರ್ಯ ಮತ್ತು ಮಧುರ ಸ್ಪಷ್ಟತೆಯ ಪ್ರವಚನಕ್ಕೆ ಎಲ್ಲರ ಮನಸೂರೆಗೊಂಡು ಯಾವ ಜಾತಿ ಭೇದ ಇಲ್ಲದೆ ಎಲ್ಲ ವರ್ಗದ ಜನರು ಇವರ ಪ್ರವಚನ ಕೇಳಲು ಬರುತ್ತಿದ್ದರು. ಇವರು ಕನ್ನಡ ಉರ್ದು, ಮರಾಠಿ ತೆಲುಗು, ಪಾರ್ಸಿ, ಸಂಸ್ಕೃತ ಬಹು ಭಾಷಾ ಪಂಡಿತರಿದ್ದರು. ಇವರ ಕೀರ್ತಿ ವಿಜಯಪುರ ಮತ್ತು ಸುತ್ತಮುತ್ತೆಲ್ಲ ಪಸರಿಸತೊಡಗಿತ್ತು. ಇವರ ಪ್ರವಚನ ಶೈಲಿ, ಆದಿಲ್‌ಶಾಹಿಯ ಆಪ್ತರಲ್ಲೊಬ್ಬರಾದ ಸರದಾರ ಖವಾಸಖಾನನಿಗೆ ಇವರ ಕೀರ್ತಿ ಹೆಸರು ಎಲ್ಲವೂ ತಿಳಿದಿತ್ತು. ಒಂದು ದಿನ ಖವಾಸಖಾನನು ಇವರ ಪ್ರವಚನ ಕೇಳಿ ಆನಂದಿತನಾಗಿ ತನ್ನ ಅರಮನೆಗೆ ಆಮಂತ್ರಿಸಿ, ತನ್ನ ಕಾರ್ಯದರ್ಶಿಯಾಗಲು ವಿನಂತಿಸಿಕೊಂಡನು ಮಹಿಪತಿರಾಯರು ಖವಾಸಖಾನನ ಮಾತಿಗೆ ಕಟ್ಟು ಬಿದ್ದು ಒಪ್ಪಿಕೊಂಡರು. ಒಂದು ದಿನ ಲೆಕ್ಕಪತ್ರದಲ್ಲಿ ತೊಡಕು ಉಂಟಾಗಿ ವಿಚಾರ ಮಾಡುತ್ತ ಕುಳಿತಿದ್ದ ಖವಾಸಖಾನನನ್ನು ನೋಡಿ ಮಹಿಪತಿರಾಯರು ವಿಚಾರಿಸಿದಾಗ ಲೆಕ್ಕಪತ್ರದಲ್ಲಿನ ಸಮಸ್ಯೆ ತೋರಿಸಿದಾಗ ಇವರು ಅದನ್ನು ಸರಳವಾಗಿ ಬೇಗನೆ ಬಗೆಹರಿಸಿದರು. ಆಗ ಖವಾಸಖಾನ ಸಂತೋಷಗೊಂಡನು ಈ ಲೆಕ್ಕದ ವಿಷಯ ಆದಿಲ್‌ಶಾಹಿಗೆ ತೋರಿಸಿ ಅವರ ಮುಂದೆ ಇದನ್ನು ಬಗೆಹರಿಸಿದ ಮಹಿಪತಿರಾಯರು. ಇದನ್ನು ಕಂಡು ಅದಿಲ್‌ಶಾಹಿ ಸಂತೋಷಗೊಂಡು ಇಂತಹ "ಅಮೂಲ್ಯ ರತ್ನ" ನನಗೆ ಪರಿಚಯಿಸಿದೆ ಖವಾಸಖಾನ್‌ಗೆ ಎಂದು ಹೊಗಳಿದರು. ಇವರನ್ನು ಅಸನದ ಮೇಲೆ ಕುಳ್ಳಿರಿಸಿ ಸನ್ಮಾನಿಸಿ ತಾವು ನನ್ನ ರಾಜ್ಯ ಬೊಕ್ಕಸದ ಕೋಶಾಧಿಕಾರಿ ಆಗಬೇಕೆಂದು ಹೇಳಿ ರಾಜಮುದ್ರೆ ಇರುವ ಉಂಗುರ ತೊಡಿಸಿ ಎಲ್ಲ ಮರ್ಯಾದೆ ಮಾಡಿ ಸತ್ಕರಿಸಿದನು. ಇವರ ಕೀರ್ತಿ ಎಲ್ಲಕಡೆ ಹಬ್ಬಿತು. ಕೊನೇರಿಯಾರು ಮುಂದೆ ಕುಲ್ಬುರ್ಗಿ ದೇಶಮುಖರ ಮನೆತನದ

ತಿರುಮಲಾ (ತಿಮ್ಮವ್ವ) ಎಂಬಾಕಿ ಜೊತೆ ಮದುವೆ ಆಯಿತು. ಹೀಗೆ ದಿನ ಕಳೆಯುತ್ತಿದ್ದಾಗ ಅಣ್ಣ ವೆಂಕಟೇಶ ತೀರಿ ಹೋದ ಮೇಲೆ ಅತ್ತಿಗೆಯಾದ ತುಕ್ಕವ್ವ ಇವರ ಜೊತೆಯಲ್ಲಿಯೇ ಇದ್ದರು.

ಕೆಲ ಕಾಲ ನಂತರ ತಿಮ್ಮವ್ವಳಿಗೆ ಮಕ್ಕಳಿಲ್ಲದ ಕೊರಗು ಕಾಡ ಹತ್ತಿತ್ತು, ಮಹಿಪತಿರಾಯರು ಒಂದು ದಿನ ಆದಿಲ್‌ಶಾಹಿ ಆಸ್ಥಾನದ ಪಕ್ಕದಲ್ಲಿರುವ ಕಂದಕ ಪಕ್ಕಕ್ಕೆ ನಡೆದುಕೊಂಡು ಬರುತ್ತಿರುವಾಗ ಮುಸ್ಲಿಂವಲ್ಲಿಗಳಾದ (ಸೂಫಿ ಸಂತರಾದ ) ಶಾನುಂಗ ಮತ್ತು ಶಾನುಂಗಿ ಎಂಬ ಅಣ್ಣತಂಗಿ ವಲ್ಲಿಗಳಿದ್ದರು. "ಮೌತ್ ಕಾ ಘಾಣ " ಎಂದು ಅನ್ನುತ್ತಾ ತಿರುಗುತ್ತಿದ್ದರು ಇವರ ಮಾತು ಸತ್ಯವಾಗುತ್ತಿತ್ತು, ಅರೇ! ಭೇಟಾ ಮಹಿಪತಿ ಇಲ್ಲಿ ಬಾ ಅಂತ ಕರೆದು ನಿನ್ನ ಕೈಯಲ್ಲಿರುವ ರಾಜಮುದ್ರೆ ಉಂಗುರ ಕೊಡು ನೋಡುತ್ತೇವೆ ಅಂದಾಗ ಮಹಿಪತಿರಾಯರು ಉಂಗುರ ಕೊಟ್ಟಕೂಡಲೇ ನೋಡ್ತಾ ಪಕ್ಕದಲ್ಲಿರುವ ಕಂದಕಕ್ಕೆ ಎಸೆದರು. ಆಗ ! ಗಾಬರಿಯಿಂದ ನಾನು ಈ ಉಂಗುರ ಇರದೆ ಆಸ್ಥಾನದೊಳಗೆ ಕಾಲಿಡಲಾಗುವುದಿಲ್ಲ ಅಂದಾಗ ಕೂಡಲೇ ತಂಗಿ ಶಾನುಂಗಿ ಕಂದಕಕ್ಕೆ ಹಾರಿ ಬೊಗಸೆ ತುಂಬಾ ಉಂಗುರ ತಂದುಕೊಡಲು ಎಲ್ಲವೂ ಒಂದೇ ತರನಾಗಿ ಇದ್ದದ್ದು ಕಂಡು, ಮಹಿಪತಿರಾಯರು ಆಶ್ಚರ್ಯಗೊಂಡು ವಿಚಾರದಲ್ಲಿರುವಾಗಲೇ ಶಾನುಂಗ,ಅರೇ ! ಭೇಟಾ ಏನು ವಿಚಾರ ಮಾಡುತ್ತಿರುವಿ ಈ ಕ್ಷುಲ್ಲಕ ವಸ್ತು ವಿಷಯಗಳ ಸಂಸಾರ ವ್ಯಾಮೋಹ ಬಿಡು. ಇಲ್ಲಿಯೇ ಸಮೀಪದಲ್ಲಿರುವ ಸಾರವಾಡ ಗ್ರಾಮದಲ್ಲಿ ಒಬ್ಬ ಯೋಗಿವರಣ್ಯೇರ ಗುರುಗಳಾದ ರುದ್ರಾಂಶ ಸಂಭೂತರಾದ ಶ್ರೀ ಭಾಸ್ಕರ ಸ್ವಾಮಿಗಳು ತಪೋನಿರತರಾಗಿದ್ದಾರೆ. ಅವರು ನಿನ್ನ ಸ್ವರೂಪೋದ್ಧಾರಕ ಗುರುಗಳು ನಿನ್ನ ಸಲುವಾಗಿ ಆರು ತಿಂಗಳಿಂದ ನಿನ್ನ ಬರುವಿಕೆಗಾಗಿ ಕಾಯುತ್ತಿದ್ದಾರೆ ನೀನು ಅಲ್ಲಿಗೆ ಹೋಗು ಎಂದು ಹೇಳಿದರು. ಈ ವಿಚಾರದಲ್ಲಿ ಮನೆಗೆ ಬಂದರು ಹೆಂಡತಿಯಾದ ತಿಮ್ಮವ್ವಾ ಚಿಂತಿತ ಮುಖ ನೋಡಿ ಕೇಳಿದಾಗ ನಡೆದ ವಿಷಯ ಹೇಳಿದರು. ಈಕೆ ಈ ವಿಷಯ ಕೇಳಿ ತಬ್ಬಿಬ್ಬುಗೊಂಡು ತನ್ನ ಪತಿಯಾದ ಮಹಿಪತಿರಾಯರ ಮುಂದೆ ಮಕ್ಕಳ ಪಡೆಯುವ ಸಲುವಾಗಿ ನಾನು ಹಲವು ತಿಂಗಳಿಂದ ಸಾರವಾಡಕ್ಕೆ ಅವರ ಆಶೀರ್ವಾದ ಪಡೆಯಲು ಹೋಗುತ್ತಿದ್ದೆ, ಆದರೆ ಇಷ್ಟು ದಿನವಾದರೂ ಆಶೀರ್ವಾದ ಕೊಟ್ಟಿದ್ದಿಲ್ಲ, ನನಗೂ ಇದೇ ಸ್ವಾಮಿಗಳು ನೀನು ನಿನ್ನ ಪತಿ ಜೊತೆ ಬಾ ಆಗ ಆಶೀರ್ವದಿಸಿ ಫಲ ನೀಡುವೆ ಅಂತ ಅಂದಿದ್ದಾರೆ ಎಂದು ಅಂದಾಗ ಮಹಿಪತಿರಾಯರು ವಿಸ್ಮಯಗೊಂಡು ಮನೆಯಲ್ಲಿಯೂ ಇಬ್ಬರ ವಿಷಯ ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು.

ಮರುದಿನ ಸತಿಪತಿಗಳಿಬ್ಬರು ಸಾರವಾಡಕ್ಕೆ ಹೋಗಿ ಗುರುಗಳನ್ನು ನೋಡಿ ಆಶೀರ್ವಾದ ಪಡೆದರು. ತಿಮ್ಮವ್ವಳಿಗೆ ಜೋಡು ಫಲಗಳ ಹಾಕಿ ಇಬ್ಬರು ಗಂಡು ಸಂತಾನವಾಗುತ್ತದೆ. ಒಬ್ಬನು ದೇಶವನ್ನಾಳುವ ಶೂರನಾದರೆ ಮತ್ತೊಬ್ಬ ಆಧ್ಯಾತ್ಮದಲ್ಲಿ ಸಾಧನೆ ಮಾಡುವ ಪುತ್ರ ಆಗುತ್ತಾನೆ ಎಂದು ಆಶೀರ್ವದಿಸುತ್ತಾರೆ. ನಂತರ ವಿಜಯಪುರಕ್ಕೆ ಬಂದು ದಿವಾನ ಪದವಿ ತ್ಯಾಗ ಮಾಡಿ ಇದ್ದ ಎಲ್ಲ ಸ್ವತ್ತನ್ನು ದಾನ ಮಾಡಿ ಕುಟುಂಬದ ಸಮೇತ ಸಾರವಾಡಕ್ಕೆ ಬಂದು ನೆಲೆಸುತ್ತಾರೆ. ಆದಿಲ್‌ಶಾಹಿ ಮತ್ತು ಖವಾಸ ಖಾನ ಎಷ್ಟೇ ಹೇಳಿ ಕಳಿಸಿದರು ಬರದೆ ದೃಢ ನಿಶ್ಚಯದಿಂದ ಎಲ್ಲ ತಿರಸ್ಕರಿಸಿ ಮಹಿಪತಿ ಸ್ವಾಮಿಗಳು ಸಾರವಾಡಕ್ಕೆ ಬಂದರು. ಗುರೂಪದೇಶ ಪಡೆದು ನಿತ್ಯ ಅನುಷ್ಠಾನ ಮಾಡಿ ಹನ್ನೆರಡು ವರುಷಕ್ಕೆ ಸಿದ್ಧಿಸುವ ಯೋಗ ಕೇವಲ ಹನ್ನೊಂದು ತಿಂಗಳಲ್ಲಿ ಸಾಧಿಸಿದರು. ಅಪರೋಕ್ಷ ಜ್ಞಾನಿಗಳಾದರು. ಭಾಸ್ಕರ ಸ್ವಾಮಿಗಳು ಇವರ ತಪೋನಿಷ್ಠೆ ಮೆಚ್ಚಿ ನಿನ್ನಿಂದ ಲೋಕ ಕಲ್ಯಾಣವಾಗಬೇಕಾಗಿದೆ. ಇನ್ನು ನೀನು ವಿಜಯಪುರಕ್ಕೆ ಹೋಗಿ ಜನರಿಗೆ ಆಧ್ಯಾತ್ಮ ಮಾರ್ಗ ತೋರಿಸಿ ನಡೆಸು ನಿನ್ನಿಂದ ಧರ್ಮ ರಕ್ಷಣೆ ಆಗಲಿ ಅಂತ ಹೇಳಿ ಅಪ್ಪಣೆ ಕೊಟ್ಟರು. ಆಗ ಆದಿಲ್‌ಶಾಹಿ ಕಾಲದಲ್ಲಿ ಜಾತಿಮತ ಅಂತ ಕಚ್ಚಾಟ ಇದಿದ್ದಿಲ್ಲಾ ಇವರು ಬರುವ ವಿಷಯ ತಿಳಿದು ಇವರಿಗೆ ಖವಾಸಖಾನ ಮುಖಾಂತರ ಸರಳವಾದ ಮನೆ ಇರುವ ವ್ಯವಸ್ಥೆ ಮಾಡಿದನು. ಇದನ್ನು ಅರಿತ ಮಹಿಪತಿದಾಸರು ತಿರಸ್ಕಾರ ಮಾಡಿದರು. ರಾಜನ ಪ್ರೀತಿಯ ವಿನಂತಿ ಮೇರೆಗೆ ಒಪ್ಪಿಕೊಂಡರು. ತಿಮ್ಮವ್ವಾ ಆಶೀರ್ವಾದ ಫಲವಾಗಿ ಅವಳಿ ಗಂಡು ಮಕ್ಕಳಿಗೆ ಜನ್ಮ ನೀಡಿದಳು. ಮೊದಲನೆಯವನು ದೇವರಾಯ, ಎರಡನೆಯವನು ಕೃಷ್ಣರಾಯ. ಹೀಗೆ ಮಹಿಪತಿದಾಸರ ಕೀರ್ತಿ ಎಲ್ಲಡೆ ಹಬ್ಬಿ ಜಾತಿಭೇದ ಇಲ್ಲದೆ ಇವರ ದರ್ಶನಕ್ಕೆ ತಂಡೋಪತಂಡವಾಗಿ ಬಂದು ಇವರ ಆಶೀರ್ವಾದ ಪಡೆಯಲು ಜನರು ಬರುತ್ತಿದ್ದರು.

ಮುಂದೆ ವಿಜಯಪುರದಲ್ಲಿ ಅಸ್ತಿರತೆಯಿಂದ ಯುದ್ಧ ಪ್ರಾರಂಭವಾಯಿತು ಸಾವು ನೋವುಗಳು ಹೆಚ್ಚಾಯಿತು. ಮಹಾಮಾರಿ ಪ್ಲೇಗ್ ಬಂತು ಹಾಗೆ ಬರಗಾಲ ಶುರುವಾಯಿತು. ಇದರಿಂದ ಮಹಿಪತಿದಾಸರು ಕುಟುಂಬ ಸಮೇತ ವಿಜಯಪುರ ಬಿಟ್ಟು ಕಲ್ಬುರ್ಗಿ ಜಿಲ್ಲೆಯ ಶಾಹಪುರಗೆ ಹೋಗಿ ಮಂದಾಕಿನಿ ಸರೋವರದ ತಟದಲ್ಲಿ ಒಂದು ಗುಡ್ಡದ ಪಕ್ಕದಲ್ಲೇ ಗುಹೆ, ನಿತ್ಯವೂ ಇವರು ತಮ್ಮ ಅನುಷ್ಠಾನ ಮಾಡ್ತಾ ಮೂರು ವರುಷ ಕಳೆದರು. ಅಲ್ಲಿಯೇ ಹನುಮಂತಮೂರ್ತಿಯನ್ನು ಸ್ಥಾಪಿಸಿ ಪೂಜಿಸುತ್ತಿದ್ದರು. ಬಂದ ಜನರಿಗೆ ಸದ್ಬೋಧನೆ ಮಾಡ್ತಾ ಇದ್ದರು. ಅಲ್ಲಿಯೇ ಇವರಿಗೆ ಏಕಾಂತ ಅನುಷ್ಠಾನಕ್ಕೆ ದಕ್ಕೆ ಬರಲು ಪರಮಾತ್ಮನ ಅಪ್ಪಣೆಯಂತೆ ಕಾಖಂಡಕಿಗೆ ಹೋಗಲು ಪ್ರೇರಣೆಯಾಯಿತು. ಈಗಲೂ ಅವರು ಸ್ಥಾಪಿಸಿದ ಹನುಮಂತನಿಗೆ "ಕಾಖಂಡಕೀಶ" ಎಂತಲೂ ಮತ್ತು ಇವರು ಕುಳಿತು ಅನುಷ್ಠಾನ ಮಾಡುತ್ತಿದ್ದ ದಿನ್ನೆಯನ್ನು "ಮಹಿಪತಿದಾಸರ ದಿನ್ನೆ" ಎಂದು ಪ್ರಚಲಿತಲ್ಲಿದೆ ಮುಂದೆ ಕುಟುಂಬ ಸಮೇತ ಕಾಖಂಡಕಿಗೆ ಬರಲು ಅಲ್ಲಿಯೂ ಊರ ಕರುಣಿಕನಿಗೆ ಇವರು ಬರುವ ಮುನ್ಸೂಚನೆ ಸಿಕ್ಕಿತ್ತು, ಆದಲಿಂದ ಮಹಿಪತಿದಾಸರನ್ನು ಊರ ಹಿರಿಯರೊಂದಿಗೆ ತಾಳ, ಮದ್ದಳೆ ಸಮೇತ ಬರಮಾಡಿ

ಕೊಂಡನು. ಕರುಣಿಕರು ಉಳಿಯಲು ಮನೆ ಕೊಟ್ಟರೆ, ಊರ ಪಟೇಲ್ ತಮ್ಮ ಹೊಲದಲ್ಲಿಯ ಶಮಿವೃಕ್ಷದ ಕೆಳಗೆ ಅನುಷ್ಠಾನ ಮಾಡಲು ಅವರಿಗೆ ಹೇಳಿದನು.ಹೀಗೆ ದಿನಗಳು ಕಳೆಯುತ್ತಿರಲು,ತಿಮ್ಮವ್ವಾ ಹಠಾತ್ತನೆ ಜ್ವರಕ್ಕೆ ಅಸುನೀಗಿದಳು.

ಮುಂದೆ ಅಣ್ಣನ ಹೆಂಡತಿಯಾದ ತುಕ್ಕವ್ವಳ ಆರೈಕೆಯಲ್ಲಿ ಮಕ್ಕಳು ಬೆಳೆದರು. ಮೊದಲನೇ ಮಗನಾದ ದೇವರಾಯನನ್ನು ಕಲ್ಬುರ್ಗಿ ದೇಶಮುಖರು ತಮ್ಮ ಮಗಳ ನೆನಪಿಗಾಗಿ ಮೊಮ್ಮಗನನ್ನು ತಮ್ಮಲ್ಲಿ ಕರೆದುಕೊಂಡು ಹೋಗಿ ಅವನಿಗೆ ಯುದ್ಧ ಕೌಶಲ್ಯ ತರಭೇತಿ ಕೊಡಿಸಿ ಮುಂದೆ ಪೇಶ್ವೆ ಮಹಾರಾಜನ ಬಳಿ ಸೇನಾಧಿಪತಿಯಾಗಿ ಮುಂದೆ, ಜಾಲವಾದಿ ಮತ್ತು ಇತರ ಹತ್ತು ಹಳ್ಳಿಗಳಿಗೆ ಆಳುವ ಸರದಾರನಾಗಿ ಕಾಂತ ಕ್ಷೇತ್ರ ಜನಾನುರಾಗಿಯಾಗಿ ಬೆಳೆದನು.ಇವರು ಹಲವೂ ಸಾಹಿತ್ಯಗಳನ್ನು ರಚಿಸಿದ್ದಾರೆ.

ಇನ್ನೊಬ್ಬ ಮಗ ಕಾಖಂಡಕಿಯಲ್ಲಿಯೇ ಇದ್ದು ಅವರು ತಮ್ಮ ತಂದೆಯಾದ ಮಹಿಪತಿದಾಸರನ್ನು ಗುರುಗಳಾಗಿ ಸ್ವೀಕರಿಸಿ ತಂದೆಯನ್ನೇ ಅನುಸರಿಸಿ ಆಧ್ಯಾತ್ಮ ಸಾಧನೆಯಲ್ಲಿ ನಡೆದವರು. ಇವರು ಸಾವಿರಾರು ದೇವರ ಸಾಹಿತ್ಯ ಉಗಾಭೋಗ, ಕೀರ್ತನೆಗಳು ಬರೆದಿದ್ದಾರೆ.

ಮರಡೆಪ್ಪ ಎಂಬುವನು ಭಕ್ತಿಯಿಂದ ದಿನವೂ ಇವರ ಸೇವೆ ಮಾಡುತ್ತಿದ್ದನು.ಒಂದು ದಿನ ಇವನ ಹೆಂಡತಿ ತೀರಿ ಹೋದರು ಗುರುಗಳ ಸೇವೆಯಲ್ಲಿ ಇರುವುದಾಗಿ ಹೇಳಿ ಕಳಿಸಿದನು, ನಂತರ ಮಹಿಪತಿದಾಸರು ಇವನಿಗೆ ತಿಳಿ ಹೇಳಿ ಕಳಿಸಿದರು.ಇತ್ತ ಮಹಿಪತಿದಾಸರ ಅತ್ತಿಗೆಯಾದ ತುಕ್ಕವ್ವ ನಿಮ್ಮ ಸೇವೆ ಮಾಡಿದಕ್ಕೆ ಇನ್ನು ಮಕ್ಕಳ ಸಣ್ಣವು ಇವೆ. ನೀವು ಕರುಣೆ ತೋರಿ ಉಳಿಸಿ,ನಾನು ಎಷ್ಟೋ ಪುಣ್ಯ ಪುರುಷರು, ಸ್ವಾಮಿಗಳು ತಮ್ಮ ಹಸ್ತದಿಂದ ಅಥವಾ ಆಶೀರ್ವಾದದ ಬಲದಿಂದ ಉಳಿಸಿದ್ದಾರೆ. ನೀವು ಅದೇಕೆ ನಿಮ್ಮ ಕರುಣೆ ಮತ್ತು ಪುಣ್ಯದ ಬಲದಿಂದ ಉಳಿಸಬೇಕು ನೀವು ಈ ಹಿಂದೆ ನನಗೆ ಮಾತು ಕೊಟ್ಟಿದ್ದೀರಿ ನಿಮ್ಮ ಸಾಧನೆಯ ತಪಸ್ಸಿನ ಶಕ್ತಿ ತೋರಿಸುವುದಾಗಿ ಎಂದು ತುಕ್ಕವ್ವ ಜ್ಞಾಪಿಸಿದಳು. ಅವರು ತಮ್ಮ ಮಾತಿನ ಫಲವಾಗಿ ತಮ್ಮ ಮೈ ಮೇಲಿನ ಹೊದ್ದುಕೊಳ್ಳುವ ಶಾಲಿಯನ್ನು ಕೊಟ್ಟರು. ಅದನ್ನು ತೆಗೆದುಕೊಂಡು ಹೋಗಿ ಹೆಣದ ಮೇಲೆ ಹೊದಿಸಲು ಸತ್ತ ಮರಡೆಪ್ಪನ ಹೆಂಡತಿ ಎದ್ದು ಕುಳಿತಳು. ಗುರುಗಳು ಇದ್ದಲ್ಲಿಗೆ ಬಂದು ಸಾಷ್ಟಾಂಗ ಎರಗಿದರು. ನಂತರ ಅತ್ತಿಗೆಗೆ ಇನ್ನು ನಾನು ಸೃಷ್ಟಿಯ ವಿರುದ್ಧ ಈ ತರಹ ಯಾವುದೇ ಪವಾಡ. ನಾನು ಮಾಡುವುದಿಲ್ಲಾ ಎಂದು ಹೇಳಿದರು.

ಬಂದ ಭಕ್ತರಿಗೆ ಧರ್ಮೋಪದೇಶ ಮಾಡುತ್ತಾ ಧರ್ಮಪಾಲನೆ ಮಾಡಿದರು ಹಾಗೆಯೇ ಬಂದ ಭಕ್ತರಿಗೆ ಸನ್ಮಾರ್ಗದ ಹಾದಿಯಲ್ಲಿ ನಡೆಸುತ್ತಿದ್ದರು.

ಮುಂದೆ ತಮ್ಮ ಅವಸಾನದ ಕಾಲ ಅರಿತು ಮಗ ಕೃಷ್ಣಾ ರಾಯರನ್ನು ಕರೆಯಿಸಿ ಜಾಲವಾದಿಯಿಂದ ದೇವರಾಯನನ್ನು ಕರೆಯಲು ಹೇಳಿದರು, ಮುಂದೆ ಮಕ್ಕಳಿಬ್ಬರ ಜೊತೆಯಲ್ಲಿ ಕೊಲ್ಹಾರಕ್ಕೆ ಹೋಗಿ ತಮ್ಮ ಮನೆತನದ ಗುರುಗಳಾದ ಮತ್ತು ಉತ್ತರಾದಿ ಮಠದ ಹಿರಿಯ ಶಿಷ್ಯರಾದ ಪ್ರಲ್ಹಾದಚಾರ್ಯ ಉಮರ್ಜಿ ಅವರನ್ನು ಭೇಟಿಯಾಗಿ, ಕೃಷ್ಣ ನದಿಯ ತಟದಲ್ಲಿ ಸ್ಥಿರವಾದ ಆಸನ ಹಾಕಿ ಅನುಷ್ಠಾನಕ್ಕೆ ಕುಳಿತರು. ಸರಿಯಾದ ಏಳನೇ ದಿನವಾದ ಕಾರ್ತಿಕ ವದ್ಯ ಅಮಾವಾಸ್ಯೆಯ ದಿನ ಇವರ ಪ್ರಾಣ ಪಕ್ಷಿಯು ಶ್ರೀಹರಿಯಲ್ಲಿ ಸೇರಿತು.ಇವರನ್ನು ವೈಕುಂಠ ದ್ವಾರಪಾಲಕರಾದ ಜಯ ವಿಜಯರಲ್ಲಿ,"ವಿಜಯರ ಅಂಶ" ಎಂದು ಹೇಳಿದ್ದಾರೆ.

ಎಲ್ಲ ವಿಧಿವಿಧಾನಗಳು ಮುಗಿಸಿ ಮಕ್ಕಳಿಬ್ಬರು ತಮ್ಮ ತಮ್ಮ ಊರಿಗೆ ಹೋದರು. ಆದರೆ ಕೃಷ್ಣರಾಯರಿಗೆ ತಂದೆ ಎನಿಸಿದ ಗುರುವಾದ ಮಹಿಪತಿರಾಯರ ನೆನಪು ಬಹಳ ಬಂದು ದುಃಖಿಸುತ್ತಾ ಮಲಗಿದ್ದಾಗ ಕನಸಿನಲ್ಲಿ ಮಹಿಪತಿದಾಸರು ಬಂದು ನಾನು ನಿತ್ಯ ಅನುಷ್ಠಾನ ಮಾಡುತ್ತಿದ್ದ ಶಮಿವೃಕ್ಷ ಭೂಮಿಯ ಕೆಳಗೆ ನಾನು ನೂರಾ ಎಂಟು ಸಾಲಿಗ್ರಾಮ ರೂಪದಲ್ಲಿರುವೆ ಅದರಿಂದ ನನ್ನ ವೃಂದಾವನ ಕಟ್ಟಿಸು ನಾನು ಅಲ್ಲಿರುವೆ ಎಂದು ಹೇಳಿದರು. ಆದರಂತೆ ಕೃಷ್ಣರಾಯರು ವೃಂದಾವನ ಕಟ್ಟಿಸಿ, ಯೋಗದಂಡ, ಪಾದುಕಾ ಇಟ್ಟು ಪೂಜೆ ಮಾಡುತ್ತಾ ಇದ್ದರು.

ಈಗಲೂ ಅದೇರೀತಿ ವಿಧಾನ ನಡೆದು ಬಂದಿದೆ. ಬಂದ ಭಕ್ತರನ್ನು ಉದ್ಧರಿಸುತ್ತಾ ಕಾಖಂಡಕಿಯಲ್ಲಿ ನೆಲಸಿದ್ದಾರೆ. ಮಹಿಪತಿದಾಸರ ಪುರಂದರದಾಸರು ಮತ್ತು ಕನಕದಾಸರ ಅನಂತರ ಕಾಲ ಘಟ್ಟ ಮತ್ತು ವಿಜಯದಾಸರು ಬರುವ ಮುಂಚೆ (ಹಿಂದಿನ) ಮಹಿಪತಿದಾಸರ ಕಾಲ ಘಟ್ಟ ಬರುತ್ತದೆ.

ಹೀಗೆ ಮಹಿಪತಿದಾಸರ ಕೃತಿಗಳು ವಿಫುಲ, ಹಾಗೆ ವೈವಿಧ್ಯಮಯ ಇವರು ಬಹು ಭಾಷಾ ವಿಶಾರದಾಗಿದ್ದರಲ್ಲದೆ ಬಹು ಭಾಷೆಯಲ್ಲಿ ಸಾಹಿತ್ಯಗಳನ್ನು ರಚಿಸಿದ್ದಾರೆ.ಕನ್ನಡ, ತೆಲುಗು, ದಖಣಿ, ಮರಾಠಿ, ಪರ್ಷಿಯನ್ ಭಾಷೆಗಳಲ್ಲಿ ಇವರ ಸಾಹಿತ್ಯ ರಚನೆಗಳು ಇವೆ. ಕೀರ್ತನೆಗಳು ಸ್ತೋತ್ರ, ಆರತಿ ಪದ, ಕೋಲಾಟದ ಪದ (ದಶಾವತಾರದ ಕೋಲು,ಕೋಲೆನ್ನ ಕೋಲ ಶ್ರೀ ಹರಿಯ ಬಲಗೊಂಬೆ, ಕೋಲೆ ಶೋಭಾನ ಪದ ಜನ ಸಾಮಾನ್ಯರಿಗೆ ಲಾವಣಿ ಪದ, ಹಂತಿಪದ, ಸುಗ್ಗಿ ಪದ, ಸತ್ಸಂಗದ ಹಾಡು ತ್ರಿಪದಿ ಚೌಪದಿಗಳು ಸಾಂಗತ್ಯ ಭಾಮಿನಿ, ವಾರ್ಧಕಷಟ್ಪದಿ ಹೀಗೆ ಮಹಿಪತಿರಾಯರ,ಸಾಹಿತ್ಯವು ಸಂಪದ್ಭರಿತ ಹಾಗೆ ವಿಶಾಲ ದೃಷ್ಟಿಕೋನದಿಂದ ಕೂಡಿದೆ.

ಇವರೂ ಕನ್ನಡ ಉರ್ದು, ಮರಾಠಿ, ತೆಲುಗು, ಪಾರ್ಸಿ, ಸಂಸ್ಕೃತ ಬಹು ಭಾಷಾ ಪಂಡಿತರಿದ್ದರು. ಇವರ ಒಟ್ಟು ಅಂಕಿತ 14 ಇವೆ ಇವರ ಸಾಹಿತ್ಯ 700 ಕೃತಿಗಳಿಗಿಂತ ಹೆಚ್ಚು ರಚಿಸಿ ಅದರಲ್ಲಿ ಹರಿ ಸರ್ವೋತ್ತಮತ್ವದ ಬಗ್ಗೆ ಬಹಳ ಪದ್ಯಗಳು ಇವೆ. ಹೀಗೆ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

# ಆಯುರ್ವೇದ ಮತ್ತು ನಾವು

- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

6



ಆಯುರ್ವೇದವು ಅಷ್ಟಾಂಗ ಶಾಸ್ತ್ರದೊಡನೆ ಶರೀರ ವಿಜ್ಞಾನ, ಶರೀರಕ್ರಿಯಾ ವಿಜ್ಞಾನ, ದ್ರವ್ಯಗುಣ ವಿಜ್ಞಾನ ಮತ್ತು ರಸಶಾಸ್ತ್ರ ಎಂಬ ಅಂಗಗಳನ್ನೂ ಹೊಂದಿದೆ. ಆಯುರ್ವೇದವು ತನ್ನದೇ ಆದ ಕರ್ತೃಗಳನ್ನು ಹೊಂದಿದೆ. ಭಾರತೀಯರ ಆಹಾರ ವಿಚಾರ ವಿಹಾರಗಳಿಗೆ ಅನುಗುಣವಾಗಿ 'ಸ್ವಸ್ಥವೃತ್ತ' ಎಂಬ ವಿಭಾಗವೂ ಇದೆ.

ಆಯುರ್ವೇದದ ಅಷ್ಟಾಂಗಗಳಲ್ಲಿ ವೊದಲನೆಯದಾದ 'ಕಾಯಚಿಕಿತ್ಸೆ' ಎಂಬ ವಿಭಾಗಕ್ಕೆ "ಚರಕಸಂಹಿತೆ" ಯೇ ಆಧಾರಗ್ರಂಥ. ಬಾಹ್ಯ ಪ್ರಪಂಚದಲ್ಲಿ ಇರುವಂತೆ ಶರೀರದಲ್ಲಿಯೂ ಅಗ್ನಿಯಿದೆ. ಉದರದ ಒಳಭಾಗದಲ್ಲಿರುವ ಅಗ್ನಿಗೆ ಜಠರಾಗ್ನಿ, ಕೋಷ್ಠಾಗ್ನಿ, ಔದಾರ್ಯ ತೇಜಸ್ ಪಾಚಕ ಪಿತ್ತ ಎಂಬ ಸಂಕೇತಗಳೂ ಇವೆ. ಈ ಅಗ್ನಿಯು ನಾವು ಸೇವಿಸಿದ ಆಹಾರವನ್ನು ಪಾತ ಮಾಡುತ್ತದೆ. ರಸ, ರಕ್ತ ಮೊದಲಾದ ಸಪ್ತಧಾತುಗಳಲ್ಲಿ ವಿಶಿಷ್ಟ ಅಗ್ನಿಗಳು ಜಠರಾಗ್ನಿಯಿಂದ ಬಲವನ್ನೂ ಪಡೆದು ತಮ್ಮ ಆಹಾರಾಂಶಗಳನ್ನು ಪಾತ ಮಾಡುತ್ತವೆ. ಕೋಷ್ಠಾಗ್ನಿ ಮತ್ತು ಧಾತ್ವಗ್ನಿಗಳು ಪ್ರಾಕೃತವಾಗಿರುವಾಗ ಶರೀರ ಅನೇಕ ರೋಗಗಳಿಗೆ ತುತ್ತಾಗುತ್ತದೆ. ಆ ಸಮಯದಲ್ಲಿ ಅಗ್ನಿಯನ್ನು ಪ್ರಾಕೃತ ಸ್ಥಿತಿಗೆ ತರುವುದೇ ರೋಗನಿವಾರಣೆಯ ಕ್ರಮ.

'ಕಾಯಚಿಕಿತ್ಸೆ' ಎಂದರೆ 'ಕಾಯಾಗ್ನಿಚಿಕಿತ್ಸೆ' ಎಂಬುದೇ ಈ ವಿಭಾಗದ ಮೂಲ ಸಿದ್ಧಾಂತ.ಚರಕಸಂಹಿತೆಯಲ್ಲಿರುವ ಇತರ ಸಿದ್ದಾಂತಗಳೆಲ್ಲವೂ ಅಗ್ನಿತತ್ತ್ವವನ್ನೇ ಮುಖ್ಯವಾಗಿಟ್ಟುಕೊಂಡು ಬೆಳೆದಿವೆ. ಜಠರಾಗ್ನಿಯನ್ನು ದೀಪನ ಮಾಡುವುದಕ್ಕಾಗಿ ಬಾಯಿಯ ಮೂಲಕವೇ ಔಷಧೀಯ ಪ್ರಯೋಗ ಮಾಡುತ್ತಾರೆ. ಔಷಧಿಗಳಲ್ಲಿ ಹೆಚ್ಚಿನವು ಗಿಡಮೂಲಿಕೆಗಳಿಂದ ತಯಾರಾದವು. ನಿರುಪದ್ರವಿಯೂ,ಯಶಸ್ವಿಯೂ ಆಗಿರುವ ಕಾಯ ಚಿಕಿತ್ಸಾ ಕ್ರಮವನ್ನು ವಿವರಿಸುವ ಚರಕಸಂಹಿತೆಗೆ ಆಯುರ್ವೇದ ವೈದ್ಯ ವಿಜ್ಞಾನದಲ್ಲಿ ಮಹತ್ತ್ವದ ಸ್ಥಾನವಿದೆ.

ವೈದಿಕರ ಪರಿಭಾಷೆಯಲ್ಲಿ ಆಯುರ್ವೇದವು ಉಪವೇದ. ಋಗ್ವೇದ ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳಿಗೆ ಹೊಂದಿ ಆಯುರ್ವೇದ ಧನುರ್ವೇದ, ಗಂಧರ್ವವೇದ ಮತ್ತು ಸ್ಥಾಪತ್ಯವೇದಗಳೆಂಬ ನಾಲ್ಕು ಉಪವೇದಗಳಿವೆ ಒಂದೊಂದು ಪ್ರಧಾನವೇದದ ಭಾವವನ್ನು ಕ್ರಮವಾಗಿ ಅನುಸರಿಸಿ ಒಂದೊಂದು ಉಪವೇದವಿದೆ.

ಶಲ್ಯತಂತ್ರಾದಿ ಹಲವು ಆಯುರ್ವೇದ ತಂತ್ರಗಳು ಪ್ರಯೋಗದ ಶಿಲ್ಪಶಾಸ್ತ್ರವನ್ನು ಅವಲಂಭಿಸಿರುವುದರಿಂದ ಸುಶ್ರುತಾದಿ ಸಂಹಿತಾಚಾರ್ಯರು ಆಯುರ್ವೇದವನ್ನು ಅಥರ್ವವೇದಕ್ಕೆ ಹೋಲಿಸಿದ್ದಾರೆ. ಆದರೆ ಆಯುಃ ಪ್ರಮಾಣವು ಆತ್ಮ ಪ್ರಕಾಶದ ನಿಲುವನ್ನೇ ಪ್ರಧಾನವಾಗಿ ಹೊಂದಿರುವುದರಿಂದ ಋಗ್ವೇದದ ಭಾವ ಪ್ರಧಾನವಾದ ಉಪವೇದವು ಆಯುರ್ವೇದವಾಗಿರುವುದೆಂದು ವೈದಿಕರು ಮನ್ನಿಸಿದ್ದಾರೆ.

ಆಯುಷ್ಯವು ಎಲ್ಲಿ ಅಥವಾ ಯಾವುದರಿಂದ ಲಭಿಸುವುದೊ ಎಂದು ಆಯುರ್ವೇದ. ಸಂಹಿತಾಚಾರ್ಯರ ಈ ನಿರುಕ್ತದಿಂದ ಆಯುಃ ಪ್ರಮಾಣದ ಆಧಾರಭೂತ ಪ್ರಾಣಶಕ್ತಿಯನ್ನರಿತು ಜೀವದ ಮೂಲಭೂತ ಪವಿತ್ರ ಸತ್ಯವನ್ನು ಹೊಂದಿ ನಿರಂತರ ಸುಖದಿಂದ ಚಿರಾಯುವಾಗಿ ಬಾಳುವುದೇ ಆಯುರ್ವೇದ ಎಂದೆನಿಸುವುದು. ಸುಖ ಜೀವನದ ಸತ್ವದ ವಿಸ್ಮೃತಿಯಾಗದೆ ಅರಿವಿನಿಂದ ಇರುವುದೇ ಆಯುರ್ವೇದ.

ಆಯುರ್ವೇದದ ಇತಿಹಾಸದ ವಿಷಯ ವೇದಪುರಾಣಗಳಲ್ಲಿ, ಅಶೋಕನ ಶಿಲಾಶಾಸನಗಳಲ್ಲಿ ಮತ್ತು ಬೇರೆ ದೇಶಗಳಿಂದ ಬಂದ ಸಂದರ್ಶಕರು ಬರೆದಿಟ್ಟ ಗ್ರಂಥಗಳಲ್ಲಿ ಸಿಗುತ್ತದೆ. ಆಯುರ್ವೇದದ ಇತಿಹಾಸವನ್ನು ವೇದಪೂರ್ವಕಾಲ, ವೇದಕಾಲ, ಆಯುರ್ವೇದ ಸಾಹಿತ್ಯಕಾಲ, ಬೌದ್ಧಕಾಲ, ಮಹಮ್ಮದೀಯ ಕಾಲ ಇಂಗ್ಲಿಷರ ಕಾಲ, ಸ್ವತಂತ್ರ ಭಾರತದ ಕಾಲ ಎಂದು ವಿಭಾಗ ಮಾಡಬಹುದು.

# ತಿರುಮಲೆ ಕಾಲಮಾನಾಚರಣೆಗಳು

**ಧಾರಾವಾಹಿ - 8**

- ಮೂಲ . ಡಾ॥ ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಸದ್ಭಕ್ತ ನೀಲಕಂಠಾರ್ಚ್ಯ ನೃಸಿಂಹಾಯ ನಮೋ ನಮಃ

(ಸದ್ಭಕ್ತನಾದ ನೀಲಕಂಠನ ಕೈಯಿಂದ ಅರ್ಚಿತನಾದ ನೃಸಿಂಹನಿಗೆ ಅನಂತ ನಮಸ್ಕಾರಗಳು)

ಎಂದು ವರಾಹ ಪುರಾಣದಲ್ಲಿರುವಂತೆ ಅಷ್ಟೋತ್ತರ ಶತನಾಮಾವಳಿಯಂದು ಸುಂದರ ತಿರುಮಲಗಿರಿಯ ಮೇಲೆ ಪರಮ ಶಿವನಿಗಾಗಿ ಸ್ವಾಮಿ ಪುಷ್ಕರಿಣಿ ಪಶ್ಚಿಮ ತೀರದಲ್ಲಿ ಆವಿರ್ಭವಿಸಿದ ವೇಂಕಟಾದ್ರಿಸಿಂಹನಂತೆ ಸುಂದರನರಸಿಂಹಸ್ವಾಮಿ ಆದಿಕಾಲದಿಂದಲೂ ಪ್ರತಿನಿತ್ಯ ವೈಖಾನಸಾಗಮಯುಕ್ತ ವಿಧಾನದಲ್ಲಿ ಆರಾಧಿಸಲ್ಪಡುತ್ತಾನೆ. ಹೀಗಿರುವಾಗ ಒಂದು ವಿಶೇಷವಾದ ದಿನದಂದು ಶೈವಜನರು ಬಂದು ತಮ್ಮ ಆರಾಧ್ಯ ದೇವತೆಯಾದ ಶಿವನಿಗಾಗಿ ಪ್ರತ್ಯಕ್ಷನಾದ ಸುಂದರನಾರಸಿಂಹನ ಸಮೀಪ ನಾವು ಶಿವನನ್ನು ಪ್ರತಿಷ್ಠಾಪಿಸೋಣ ಎಂದರು. ಆಗ ಆ ಸ್ಥಳದಲ್ಲಿ ವಾಸಿಸುತ್ತಿದ್ದ ಶ್ರೀ ವೈಷ್ಣವರು, ಅರ್ಚಕರೆಲ್ಲರೂ ಸೇರಿ ರಾಜನ ಆಸ್ಥಾನಕ್ಕೆ ಸಾಗಿ ಶ್ರೀ ವೈಕುಂಠದ ಕ್ರೀಡಾಚಲವೇ ಈ ಪರ್ವತವಾಗಿದೆಯೆಂದು ವರಾಹ, ವಾಮನ, ಮಾರ್ಕಂಡೇಯ ಬ್ರಹ್ಮಾಂಡಾದಿ ಪುರಾಣಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟ ಈ ವಿಷ್ಣು ಕ್ಷೇತ್ರದಲ್ಲಿ ಶಿವ ಪ್ರತಿಷ್ಠೆಯು ಸೂಕ್ತವಲ್ಲವೆಂದು ವಿವರಿಸಲು ಆ ಶೈವರೆಲ್ಲರೂ ರಾಜನ 'ಆಜ್ಞೆಯಂತೆ ತೊಲಗಿ ಹೋಗಿದ್ದಾರೆ.

ಅನಂತರ ಆ ಸ್ಥಳೀಯರಾದ ಹಿರಿಯರು ಈ ವಿಧದಲ್ಲಿ ದೇವತಾ ತಾರತಮ್ಯವುಂಟಾದರೂ ಈ ನರಸಿಂಹ ಸ್ವಾಮಿಯ ಮೊದಲಿನಂತೆಯೇ ಪ್ರಸಿದ್ಧನಾಗಿ, ಆರಾಧ್ಯನಾಗಿದ್ದಾನೆ, ಆದರೆ ಅದು ಕಲಿಯುಗದ ಆರಂಭದ ದಿನಗಳು ಒಬ್ಬ ಪಾಪಿಗೆ ತನ್ನ ಪಾಪದ ಅರಿವಾಗಿ ದೇವತಾತಾರತಮ್ಯ ಸ್ಥಳವು ಕನಸಿನಲ್ಲಿ ಕಂಡು ಬರಲು ಈ ಲಕ್ಷ್ಮಿಸಹಿತನಾದ ನರಸಿಂಹನಲ್ಲಿರುವೆಂದೂ ಉಗ್ರಮೂರ್ತಿಯಾಗಿರುವುದರಿಂದ ಈ ದೇವರಿಗೆ ನಿತ್ಯಾರಾಧನೆಯಾಗದಂತೆ ಮಾಡಿ ಈ ಸ್ಥಳವು ಪ್ರಸಿದ್ಧಿಯಾಗದಂತೆ ಮಾಡಿದ ಸಮಾಚಾರವು ಶ್ರೀಭಗವದ್ರಾಮಾನುಜಾಚಾರ್ಯರು ಕೇಳಿಸಿಕೊಂಡರು ಮನದಲ್ಲೇ ಚಿಂತಿಸಿ, ಈ ಸ್ವಾಮಿ ಪುರಾಣ ಪ್ರಸಿದ್ಧನಾಗಿರುವುದರಿಂದ, ಆಳ್ವಾರರ ಸ್ತೋತ್ರಗಳಿಗೆ ಪಾತ್ರನಾಗಿರುವುದರಿಂದ ಈತನ ಆರಾಧನೆಯಲ್ಲಿ ಲೋಪ ತಂದ ಸ್ಥಳಕ್ಕೆ ಅನಿಷ್ಟ ಸಂಭವಿಸುವುದೆಂದು ಕನಸು ಕಂಡಿದ್ದಾರೆ. ಈ ದೇವತೆಗೆ ಪ್ರತ್ಯೇಕಾಲಯವಿದ್ದರೂ ಸಹ ಮೊದಲು ಎಸೆಯಲಾದ ಅಮರ್ಯಾದೆಯನ್ನು ನೆನೆದು ಇನ್ನು ಮುಂದೆ ಹಾಗಾಗಬಾರದೆಂದು ನಿರ್ಣಯಿಸಿದರು. ಅವರು ವೇಂಕಟೇಶ್ವರನ ಗುಡಿಯಲ್ಲೇ ನರಸಿಂಹನೂ ಇರಬೇಕೆಂದು ಸ್ವಾಮಿಯ ಈಶಾನ್ಯ ದಿಗ್ಭಾಗದಲ್ಲಿ ಉಗ್ರರೂಪ ಮುಪಶಮನವಾಗುವಂತೆ ವಿಮಾನಾಭಿಮುಖವಾಗಿ ಪ್ರತಿಷ್ಠಾಪನೆ ಮಾಡಿ ನರಸಿಂಹಾರ್ಚನೆ ನಿಂತು ಹೋದ ಸ್ಥಳದಲ್ಲೇ ತಪ್ಪಿಸ್ಥರಿಗೆ ಅವರ ತಪ್ಪು



ಮನವಾಗುವಂತೆ ಶಸ್ತ್ರಾನುಸಾರ ನಿತ್ಯಾರಾಧನೆಯನ್ನು ನಡೆಸುವಂತೆ ಕಟ್ಟಳೆಯನ್ನು ಹಾಕಿದ್ದಾರೆ.

ಮಾರ್ಕಂಡೇಯ ಮುನಿ ವೇಂಕಟಾಚಲ ಯಾತ್ರೆ ಮಾಡುವ ಸಮಯದಲ್ಲಿ ತಿರುಮಲೆ ಮಾರ್ಗ ಮಧ್ಯದಲ್ಲಿ -

ಆರುಹ್ಯಾಂ ವೆಂಕಟಂ ಶೈಲಂ ಮಧ್ಯೇಮಾರ್ಗಂ ದದರ್ಶ ಹ
ನರಸಿಂಹಾಗುಹಾಸ್ಥಾನಂ ಲೋಕವಿಖ್ಯಾತಿ ವೈಭವಂ
ಲಕ್ಷ್ಮಿನೃಸಿಂಹ ಪ್ರಹ್ಲಾದವರದಾನಂತ ವೈಭವ
ದಾಸಾನುದಾಸ ದೇವೇಶ ಮಾಂ ಪಾಹಿ ಮಧುಸೂದನ
ಇತಿ ಪ್ರಣಮ್ಯ ಶುದ್ಧೇನ ಸ್ವಾಮಿಪುಷ್ಕರಿಣೀಂ ಗತಃ

(ತಿರುಮಲೆಯ ಬೆಟ್ಟ ಹತ್ತಿ ಮಾರ್ಗ ಮಧ್ಯದಲ್ಲಿ ಲೋಕಪ್ರಖ್ಯಾತ ವಾದ ನೃಸಿಂಹ ಗುಹಾ ಸ್ಥಳವನ್ನು ಕಂಡೆನು. ಲಕ್ಷ್ಮೀ ನೃಸಿಂಹ ಪ್ರಹ್ಲಾದವರದಾ ಅಪಾರ ವೈಭವಾ! ಮಧುಸೂದನಾ! ದೇವದೇವಾ! ದಾಸಾನುದಾಸನಾದ ನನ್ನನ್ನು ನೀನು ಕಾಪಾಡುವುದು ಎಂದು ಶುದ್ಧ ಪ್ರಾಣರಾದ ಅಗಸ್ತ್ಯರು ಶಿಷ್ಯ ನೊಂದಿಗೆ ಸ್ವಾಮಿ ಪುಷ್ಕರಿಣಿಗೆ ತೆರಳಿದರು)

ಅಂದ ಹಾಗೆ , ಮಾರ್ಕಂಡೇಯ ಮಹರ್ಷಿಗೆ ಶ್ರೀನೃಸಿಂಹಸ್ವಾಮಿ ಪ್ರತ್ಯಕ್ಷನಾದನೆಂದು ಮಾರ್ಕಂಡೇಯ ಪುರಾಣದಲ್ಲಿರುವಂತೆ ಸ್ವಾಮಿ ಅವೀರ್ಭವಿಸಿದ ಗುಹೆಯ ಪ್ರದೇಶದಲ್ಲಿ ಒಂದು ಆಲಯವನ್ನು ನಿರ್ಮಿಸಿ ಶ್ರೀನೃಸಿಂಹ ಸ್ವಾಮಿಗೆ ಶ್ರೀವೈಖಾನಸಾಗಮ ಪ್ರೋಕ್ತವಾಗಿ ಪ್ರತಿಷ್ಠಾಪನೆ ಮಾಡಿ ನಿತ್ಯ ಪೂಜೆಗೈಯುವಂತೆ ಮಾಡಿದರು.

ಅನಂತಾಚಾರ್ಯರು (ಆನಂದಾಳ್ವಾನ್) ಹೂ ಗೊಂಚಲು, ಮಾಲೆಗಳನ್ನು ಕಟ್ಟಿ ಸ್ವಾಮಿಗೆ ಸಮರ್ಪಿಸುತ್ತಿದ್ದರು. ಶ್ರೀ ಅನಂತಾಚಾರ್ಯರು ಮಾಡುತ್ತಿದ್ದ ಕೈಂಕರ್ಯದಿಂದ ಸ್ವಾಮಿ ತೃಪ್ತಿಹೊಂದುತ್ತಿದ್ದು ಆತನ ಭಾವ ಶುದ್ಧಿಯನ್ನು ಜನರೆಲ್ಲರಿಗೂ ತಲುಪುವಂತೆ, ತಿಳಿಯುವಂತೆ ಮಾಡಲು ಶ್ರೀವೆಂಕಟಾಚಲಪತಿ ಕನ್ಯಾಮಾಸದ ಬ್ರಹ್ಮೋತ್ಸವ ಸಂದರ್ಭದಲ್ಲಿ ಏಳನೇ ಉತ್ಸವ ದಿನದಂದು ರಾತ್ರಿ ವೇಳೆಯಲ್ಲಿ ತಾನು ಅಲಮೇಲ್‌ಮಂಗಳೂ ರಾಜಕುಮಾರ-ರಾಜಕುಮಾರಿಯರಾಗಿ ಅನಂತಾಚಾರ್ಯರ ಹೂ ದೋಟಕ್ಕೆ ನುಗ್ಗಿ ದಾಳಿಗೈದು ಹೂಗಳನ್ನು ಕೊಯ್ದುಕೊಂಡು ಹಿಂದಿರುಗಿ ಹೋಗುವ ವೇಳೆ ಅನಂತಾಚಾರ್ಯರು ನೋಡಿ ಕಳ್ಳ ಹೂಗಳನ್ನು ಕೊಯ್ದುಕೊಂಡು ಹೋಗುತ್ತಿದ್ದಾನೆಂದು ಹಿಡಿಯಬೇಕೆಂದು ಬೆನ್ನಟ್ಟಿ ಹೋಗಲು,ಸ್ವಲ್ಪ ಸಮಯದ ನಂತರ ಅದೃಶ್ಯನಾಗಿದ್ದಾನೆ. ಅನಂತಾ ಚಾರ್ಯರು ಹಿಂದಿರುಗಿ ಬರಲು ಅವರ ತೋಟವು ನಂದನವನವಾಗಿ ಕಂಡು ಬರಲು ಅದರ ಐತಿಹ್ಯವನ್ನು ತೋರಲು ಉತ್ಸವದಲ್ಲಿ ಶ್ರೀನಿವಾಸನಿಗೆ ಪ್ರತಿ ವರ್ಷವೂ ಅನುಷ್ಠಾನಗೊಳಿಸಲೆಂದು ಬ್ರಹ್ಮೋತ್ಸವದ ಏಳನೇ ದಿನದಂದು ಉದ್ಯಾನ ವಿಹಾರಾರ್ಥವಾಗಿ ಮೆರವಣಿಗೆ ಮಾಡಬೇಕೆಂದು ಕಟ್ಟಾಜ್ಞೆ ವಿಧಿಸಿದ್ದಾರೆ.

ಕ್ರಿಮಿಕಂಠ ಚೋಳನ ಕಾಲದಲ್ಲಿ ಅವ್ಯಪದೇಶನೊಬ್ಬನು (ಹೆಸರನ್ನು ಹೇಳಬಾರದವ, ಪೌಪಿಷ್ಠನು) ಒಬ್ಬ ಅನೇಕ ಜನ್ಮದ ಪಾಪವಶ್ಯನಾದವ ನಾಗಿ ತನ್ನ ದಂಡಿನೊಂದಿಗೆ ಬಂದು ಚೋಳದೇಶದ ಅನೇಕ ವಿಷ್ಣು ದ್ರೋಹ ಗಳನ್ನಾಗಿಸಿ ಕಾವೇರಿ ತೀರದಲ್ಲಿರುವ ಕಣ್ವಮಹಾಮುನಿ ಪ್ರತ್ಯಕ್ಷನಾದ ಶ್ರೀ ಗೋವಿಂದರಾಜಸ್ವಾಮಿ ದೇವಾಲಯವನ್ನು ಅಮೂಲಾಗ್ರವಾಗಿ ಧ್ವಂಸ ಮಾಡಿದ್ದಾನೆ. ಇದನ್ನು ಕೇಳಿದ ಶ್ರೀಭಗವದ್ರಾಮಾನುಜರು ಪುರಾಣ ಪ್ರಸಿದ್ಧವಾದ ಶ್ರೀ ಕುಲಶೇಖರಾಳ್ವಾರರು, ತಿರುಮಂಗೈಳ್ವಾರರು ಮುಂತಾದ ಶ್ರೀವೈಷ್ಣವ ಭಕ್ತರೆಲ್ಲರಿಗೆ ಶ್ರದ್ಧಾ ಪಾತ್ರವಾದ ದಿವ್ಯಸ್ಥಳಗಳೊಂದಿಗೆ ನೆಲಸಮ ಧ್ವಂಸವಾಗಬಾರದೆಂದು ಚಿಂತಿಸಿ ಭವಿಷ್ಯದ್ವೃತ್ತಾಂತ ಜ್ಞಾನಪರಿಪೂರ್ಣ ವಾಗಿ ಆ ಸನ್ನಿಧಿಯಲ್ಲಿ ಈ ಮೊದಲು ಭಗದವತಾರವಾಗಿರುವುದರಿಂದ ತಿರುಮಲಕ್ಕೆ 'ಅದಿವಾರಮು' (ಬೆಟ್ಟದಲ್ಲಿ ಮೊಟ್ಟ ಮೊದಲು ಬಂದು ಸೇರಿದ) ಶ್ರೀ ಗೋವಿಂದರಾಜುಸ್ವಾಮಿ, ಶ್ರೀ ವೆಂಕಟಾಚಲಪತಿಯೊಡನೆ ಅಭಿಮಾನ ಪಾತ್ರರಾಗಿ ಮೆರವಣಿಗೆ ಮಾಡುವಂತೆ ಹೇಳಲು ಅದನ್ನನು ಸರಿಸಿ ಪ್ರತಿದಿನ ರಾತ್ರಿ ವೆಂಕಟಾಚಲಪತಿಯು ದಿವ್ಯ ಪ್ರಸಾದವನ್ನಂಗೀಕರಿಸಿದ ಬಳಿಕ ಅರ್ಚಕರು ಶ್ರೀ ಶಠಗೋಪವನ್ನು ವಸ್ತ್ರಾಚ್ಛಾದಿತವನ್ನಾಗಿ ಮಾಡಿ ಕೈಗಳ ಮೇಲೆ ಧರಿಸಿ, "ಛತ್ರ ಚಾಮರಗಳೊಂದಿಗೆ ಶ್ರೀಕೃಷ್ಣ (ಶರ್ಮ) ಮಂಟಪದಲ್ಲಿ (ವೆನ್ನುಮಾಲೈಯಟ್ಟಾನ್ ಮಂಡಪ) ದಕ್ಷಿಣಾಭಿಮುಖವಾಗಿ ನಿಂತು ಕೊಂಡು ಆಗ ದೇವಾಲಯದ ಕೈಂಕರ್ಯಗಳು ಕಟ್ಟೆಗಳನ್ನು (ಪ್ರಶಸ್ತಿ ಕಾವ್ಯ ವಿಶೇಷ) ಶೋತ್ರ - ಬಡಿಸಿ, ಅರುಳಪ್ಪಾಡು? (ಮಂಗಳವಾಗಲಿ) ಶ್ರೀ ಚಿತ್ರ ಕೂಟ ಸನ್ನಿಧಿಕೈಂಕರ್ಯ ನಿರತರಾಗಿ ಶ್ರೀ ವೆಂಕಟಾಚಲಪತಿ ಅಧಿಕಾರ ದಂಡ ಮುದ್ರೆ ನಿರ್ವಾಹಕರಿಗೂ, ವಿಶ್ವಕ್ಸೇನರಿಗೂ (ಸೇನೈ ಮೊದಲಿ ಯಾರ್) ಎಂದು ಉಚ್ಚರಿಸಿ ದೇವಾಲಯದಲ್ಲಿ ಪಾರುಪತ್ಯ, ಗುಡಿಮಣಿ (ಯಂತಹ ಅಧಿಕಾರಿಗಳು ) ನಿರ್ವಹಿಸುತ್ತಿರುವ ಶ್ರೀವೈಷ್ಣವರಿಗೆ ಶೇಷವಸ್ತ್ರ, ಶ್ರೀಶಠಗೋಪ ನೀಡಬೇಕೆಂದು ಕಟ್ಟಳೆ ವಿಧಿಸಿದ್ದಾರೆ.

ಶ್ರೀ ವೆಂಕಟೇಶ್ವರಸ್ವಾಮಿ ಆಳ್ವಾರ್ ತಿರುವರಂಗಪ್ಪೆರುಮಾಳ್ ಆರ್ಯರಿ (ಪ್ರಬಂಧಕಾರರು) ಗೋಸ್ಕರ ಅಧ್ಯಯನೋತ್ಸವ ಸಂದರ್ಭದ ಸ್ಥಳಾಂತರಗೊಳ್ಳುವುದೊಂದೇ ಅಲ್ಲದೇ 'ಇಯಜ್ಞ' ಮೊದಲಾದ ನಾಲಾ ಯರ ದಿವ್ಯ ಪ್ರಬಂಧಗಳನ್ನು ಇಪ್ಪತ್ತೂರು ದಿನಗಳು ಪ್ರತಿನಿತ್ಯ ಪಠಿಸುವಂತೆ ಅದರ ನಂತರ ಶ್ರೀ ಜ್ಞಾನವರಾಹ ಸ್ವಾಮಿ ಒಂದೇ ದಿನದಿ ಪಠಿಸುವಂತೆ ತದ ನಂತರ ಈ ರೀತಿಯಾಗಿ ಶ್ರೀಗೋವಿಂದರಾಜ ಸ್ವಾಮಿ ಪಠಿಸುವಂತೆ ಅದಾದ ನಂತರ ಶ್ರೀ ಜ್ಞಾನ ವರಾಹ ಸ್ವಾಮಿ ಒಂದೇ ದಿನದಿ ಪಠಿಸುವಂತೆ ತದ ನಂತರ ಇನ್ನಿತರ ಉತ್ಸವಗಳು ವೆಂಕಟಾಚಲಪತಿಯೊಡನೆ ಒಂದೇ ಕಾಲದಲ್ಲೊಂದೇ ಅಲ್ಲದೇ ಕಾಲ ಭೇದಗಳೊಂದಿಗೆ (23 ದಿನಗಳು) ಜರುಗು ವಂತೆ ಏರ್ಪಾಟು ಮಾಡಿದನು.

**(-ಮುಂದುವರೆಯುತ್ತದೆ.)**

ಧಾರಾವಾಹಿ - 6

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



ಭಗವದ್ಗೀತೆಯ ಮುಂದುವರೆದ ಭಾಗ

ಆ ಮಧ್ಯಸ್ಥಾಯಿಯಲ್ಲಿರುವವರಿಗೂ ಈ ಭಗವದ್ಗೀತೆ ಒಳ್ಳೆಯ ಪರಿಣಾಮ ಬೀರುತ್ತದೆ ಎಂದು ತಿಳಿಸುತ್ತಿರುವಂತಿದೆ. ಧೃತರಾಷ್ಟ್ರ ಉತ್ತಮ ಸ್ಥಾನದಲ್ಲಿರುವ ರಾಜ್ಯ ಅಂತಹವರಿಗೂ ಈ ಭಗವದ್ಗೀತೆ ಉತ್ತಮ ಫಲವನ್ನು ನೀಡುತ್ತದೆ ಎಂದು ಮೂರು ಜನರ ಮೂಲಕ ಇನ್ನೊಂದು ರೀತಿಯ ಸಂಕೇತವನ್ನು ಶ್ರೀ ಕೃಷ್ಣನು ನೀಡುತ್ತಿದ್ದಾನೆ.

ಈ ರೀತಿ ನಾವು ಯಾವ ಕೋನದಿಂದ ಯೋಚಿಸಿದರೂ ಸರಿ ಒಂದು ರೀತಿಯಲ್ಲಿ ಈ ಮಾರ್ಗವನ್ನು ಪ್ರವೇಶಿಸುತ್ತೇವೆ. ಆ ರೀತಿ ಮಾಡಿದಾಗ ನಮಗೂ ಈ ಭಗವದ್ಗೀತಾಮೃತವನ್ನು ಅಸ್ವಾದಿಸುವ ಯೋಗ್ಯತೆ ಪರಿಪೂರ್ಣವಾಗಿ ದೊರೆಯುತ್ತದೆ. ಆದರೆ ಯಾವ ಸ್ಥಳದಲ್ಲಿ ಯಾವ ವಿಭಾಗದಲ್ಲಿ ಪ್ರವೇಶಿಸಬೇಕು ಎಂಬುದನ್ನು ಚೆನ್ನಾಗಿ ಅರಿತಿರಬೇಕು.

ಎಲ್ಲಾ ಹಂತಗಳನ್ನು ಸಮೀಪಿಸಿದಾಗ ಅರ್ಜುನನ ವಿಭಾಗದಲ್ಲೇ ಪ್ರವೇಶಿಸಬೇಕು.

ಈ ಅರ್ಜುನನ ವೈಶಿಷ್ಟ್ಯತೆ ಏನೆಂದರೆ ನೇರವಾಗಿ ಶ್ರೀಕೃಷ್ಣ ಪರಮಾತ್ಮನಿಂದಲೇ ಉಪದೇಶವನ್ನು ಪಡೆದುಕೊಳ್ಳುವ ಅರ್ಹತೆಯನ್ನು ಗಳಿಸಿರುವ ಭಗವಂತ. ಈ ರೀತಿಯ ಅರ್ಹತೆ, ಯೋಗ್ಯತೆಯನ್ನು ಸೃಷ್ಟಿಯ ಆದಿಯಲ್ಲಿ ಮರೀಚಾದಿ ಪ್ರಜಾಪತಿಗಳಿಗೆ ಸನಕಾದಿಗಳಿಗೆ ಮಾತ್ರಾ ಉಂಟಾಗಿತ್ತು. ಪುನಃ ವಿವಸ್ವಂತ ನಂತಹವನಿಗೆ ಉಂಟಾಗಿತ್ತು. ಆ ಪರಮಾತ್ಮನ ಸಂದೇಶವನ್ನು ಪಡೆದುಕೊಳ್ಳುವ ಯೋಗ್ಯತೆ ಅರ್ಜುನನಿಗೆ ಮಾತ್ರವೇ ಇದೆ. ಆದ್ದರಿಂದ ನಮ್ಮಂತಹ ಹುಲು ಮಾನವರು ಅರ್ಜುನನಂತೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಆ ಪರಮಾತ್ಮ ಪ್ರತ್ಯಕ್ಷವಾಗಿ ಇಲ್ಲಿಗೆ ಬರುವುದಿಲ್ಲವಾದ್ದರಿಂದ ಕಲಿಯುಗದಲ್ಲಿರುವ ಮಾನವರಿಗೆ ಪ್ರತ್ಯಕ್ಷವಾದರೆ ಯಾವ ರೀತಿಯ ಕೋರಿಕೆಗಳನ್ನು ಬಯಕೆಗಳನ್ನು ಕೇಳಿ ಕೊಳ್ಳುತ್ತಾರೆಂದು ಪರಮಾತ್ಮನಿಗೆ ಸ್ಪಷ್ಟವಾಗಿ ತಿಳಿದಿದೆ. ಆದ್ದರಿಂದ ದೇಹದೊಂದಿಗೆ ಪರಮಾತ್ಮನು ಪ್ರತ್ಯಕ್ಷವಾಗುವುದಿಲ್ಲ.ಆ ಪರಮಾತ್ಮನು ಅರ್ಚಾವತಾರ ಮೂರ್ತಿಯಾಗಿ ಆತನ ಸಂಕಲ್ಪದಲ್ಲಿ ಈ ಉಪದೇಶಾಮೃತವನ್ನು ಗ್ರಹಿಸೋಣ. ಹಾಗೆಯೇ ಅವನ್ನೆಲ್ಲಾ ನಮ್ಮ ಜೀವನದಲ್ಲಿ ಸಾರ್ಥಕ ಮಾಡಿಕೊಳ್ಳೋಣ.

ಈ ಉಪದೇಶಕ್ಕೆ ಮಹಾರಾಜರು ಮಾತ್ರಾಯೋಗ್ಯರೇ? ಇನ್ಯಾರು ಅರ್ಹರಲ್ಲವೇ? ಇನ್ಯಾರು ಭಗವಂತನ ಅನುಗ್ರಹಕ್ಕೆ ಪಾತ್ರರಾಗುವುದಿಲ್ಲವೇ? ಅಂದರೆ ಅನೇಕ ಮಹಾರಾಜರು, ವೀರರು, ಯೋಧರು ಇಲ್ಲಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾದವರಿದ್ದಾರೆ. ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಬೇಕೆಂದರೆ ನಿನ್ನ ಸ್ವಕರ್ತವ್ಯವನ್ನು ಶ್ರದ್ಧೆಯಿಂದ ಮಾಡ ಬೇಕು. ಸ್ವಕರ್ತವ್ಯವನ್ನು ಪರಿಪೂರ್ಣವಾಗಿ ಮಾಡುವಂತಹಾ ಸಂಕಲ್ಪವನ್ನು ಹೊಂದಿರಬೇಕು. ಅಂತಹವರ ಮೇಲೆ ಭಗವಂತನ ಅನುಗ್ರಹ ಸಂಪೂರ್ಣವಾಗಿರುತ್ತದೆ. ಶ್ರೀಮದ್ಭವದ್ಗೀತೆಯಲ್ಲಿ ಶ್ರೀಕೃಷ್ಣನು ಅನೇಕ ವೀರರ ಹೆಸರನ್ನು ಅಲ್ಲಲ್ಲಿ ಹೆಸರಿಸುವುದರ ಮೂಲಕ ತಾನು ಅವರನ್ನು ಅನುಗ್ರಹಿಸಿದ ರೀತಿಯನ್ನು ಸ್ಪಷ್ಟವಾಗಿ ಸೂಚಿಸಿದ್ದಾನೆ. ಅವರನ್ನೆಲ್ಲಾ ದುರ್ಯೋಧನನ ಮಾತಿನ ಮೂಲಕ ನಮಗೆ ತೋರಿಸಿಕೊಡುತ್ತಿದ್ದಾನೆ. ಆ ದುರ್ಯೋಧನನ್ನು ಇಂತಹ ಮಹಾವೀರರ ಮೇಲೆ,ಸತ್ಪುರುಷರ ಮೇಲೆ ಎಂತಹ ಅಸೂಯೆಯನ್ನು ಹೊಂದಿದ್ದಾನೆ. ಆದರಿಂದ ಯಾವ ರೀತಿಯ ದುಷ್ಪರಿಣಾಮ ಉಂಟಾಗುತ್ತದೆಂದು ನಮ್ಮೆಲ್ಲರಿಗೂ ತಿಳಿಸುವುದಕ್ಕಾಗಿಯೇ ಕೆಲವು ಸತ್ಪುರುಷರ ಹೆಸರುಗಳನ್ನು ದುರ್ಯೋಧನನ ಬಾಯಿಂದ ಕೇಳಿಸುತ್ತಿದ್ದಾನೆ. ಆ ಸತ್ಪುರುಷರ ಹೆಸರನ್ನು ಕ್ರಮೇಣ ಈ ಶ್ಲೋಕಗಳ ಮೂಲಕ ತಿಳಿದುಕೊಳ್ಳೋಣ ನಾಲ್ಕನೆಯ ಶ್ಲೋಕದಲ್ಲಿ ದುರ್ಯೋಧನ ದ್ರೋಣಾಚಾರ್ಯ ನನ್ನೇ ಅವಮಾನಿಸುವುದಲ್ಲದೇ ಎದಿರಿನಲ್ಲಿದ್ದ ಮತ್ತಷ್ಟು ವೀರರನ್ನೂ ಅವಮಾನಿಸುತ್ತಾ ಮಾತನಾಡುತ್ತಿದ್ದಾನೆ.

ಅತ್ರಶೂರಾ ಮೆಹೇಷ್ವಾಸಾ ಭೀಮಾರ್ಜುನನ ಸಮಾಯುಧಿ
ಯುಯುಧಾಮೋ ವಿರಾಟಶ್ಚ ದ್ರುಪವಶ್ಚ ಮಹಾರಥಃ

ಪಾಂಡವಸೈನ್ಯದಲ್ಲಿ ಅನೇಕ ವೀರರು, ಶೂರರು, ಇದ್ದಾರೆ. ದೊಡ್ಡ ದೊಡ್ಡ ಬಿಲ್ಲುಬಾಣಗಳನ್ನು ಧರಿಸಿದ್ದಾರೆ. ಧನಸ್ಸುಗಳ ಬೃಹದಾಕಾರದಲ್ಲಿದೆ. ಎಲ್ಲರಿಗೂ ಪರಾಕ್ರಮವಿದೆ. ಭೀಮ, ಅರ್ಜುನರು ಸಮಾನರಾಗಿದ್ದಾರೆ.ಯುಯುಧಾನ, ವಿರಾಟ, ದ್ರುಪದರಂತಹಾ ವೀರರಿದ್ದಾರೆ. ಇವರಲ್ಲಿ ದುರ್ಯೋಧನನ ಅಸೂಯೆ ಯಾವ ರೀತಿ ಕಂಡು ಬರುತ್ತಿದೆ? ಸ್ವಲ್ಪ ಎಚ್ಚರಿಕೆಯಿಂದ ಗಮನಿಸಿದರೆ ಯುಯುಧಾನ' ಎಂದು ಮೊದಲು ಹೇಳಿದ ಅಂದರೆ ಚೆನ್ನಾಗಿ ಯುದ್ಧಮಾಡು ಎಂದರ್ಥ.ಕೃಷ್ಣನ ತಮ್ಮನ ವರಸೆಯಾಗಿರುವ ಸಾತ್ಯಕಿ ಎಂಬ ವೀರನಿಗೆ ಈ ಬಿರುದು ಇದೆ. ಸಾತ್ಯಕಿಯ ಹೆಸರು ಮೊದಲು ಏಕೆ ಹೇಳಿದ? ಪಾಂಡವ ವೀರರಲ್ಲಿ ಈ ಮೊದಲು ಹೇಳಬೇಕಾದ ಹೆಸರು ಅರ್ಜುನ!

(ಮುಂದುವರೆಯುತ್ತದೆ.)



ಧಾರಾವಾಹಿ - 5

# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ



## ಚಂದ್ರಗ್ರಹ ಪರಿಚಯ

1. ಚಂದ್ರಗ್ರಹ ಸರಾಸರಿ 3,84,000 ಕಿ.ಮೀ. ಭೂಮಿಯಿಂದ ದೂರದಲ್ಲಿದ್ದಾನೆ.

2. ಚಂದ್ರಗ್ರಹದ ಆಕಾರ - ಅಂಡಾಕಾರ.
3. ಚಂದ್ರಗ್ರಹದ ವ್ಯಾಸ 3476 ಕಿ.ಮೀ.

4. ಚಂದ್ರಗ್ರಹ ಭೂಮಿಯ ಉಪಗ್ರಹ ಆದರೆ ಇದನ್ನು ಗ್ರಹ ಎಂದು ಜೋತಿಷ್ಯ ಶಾಸ್ತ್ರದಲ್ಲಿ ಪರಿಗಣಿಸಲಾಗಿದೆ.

5.ಚಂದ್ರಗ್ರಹ 27. 32.166 ದಿನಗಳಲ್ಲಿ ಎಲ್ಲಾ ನಕ್ಷತ್ರಗಳನ್ನು ಪ್ರವೇಶಿಸುತ್ತಾನೆ.

6. ಒಂದು ಪೂರ್ಣಿಮದಿಂದ ಮುಂದಿನ ಪೂರ್ಣಿಮದ ವರೆಗೆ ಒಂದು ಚಂದ್ರಮಾಸವೆಂದು ಪರಿಗಣಿಸಲಾಗಿದೆ. (29.5306 ದಿನಗಳ ಪೂರ್ಣಿಮದಿಂದ ಪೂರ್ಣಿಮದವರೆಗೆ)

7. ಚಂದ್ರಗ್ರಹವನ್ನು ಸೌರವ್ಯೂಹದ ರಾಣಿಯೆಂದು ಪರಿಗಣಿಸಲಾಗಿದೆ.

8.ಚಂದ್ರಗ್ರಹ ಮನುಷ್ಯನ ಬುದ್ಧಿಯನ್ನೂ ಪ್ರತಿನಿಧಿಸುತ್ತಾನೆ.

9.ಚಂದ್ರಗ್ರಹದ ಲಿಂಗ ಸ್ತ್ರೀಲಿಂಗ

10. ಚಂದ್ರಗ್ರಹ ಮನುಷ್ಯನ ಆಗುಹೋಗುಗಳನ್ನು ನಿಯಂತ್ರಿಸುತ್ತಾನೆ.

11. ಚಂದ್ರಗ್ರಹವನ್ನು ರಾತ್ರಿಯ ರಾಣಿಯೆಂದು ಪರಿಗಣಿಸಲಾಗಿದೆ.

12. ಚಂದ್ರಗ್ರಹ ಪಾತಿವ್ರತ್ಯ ಮತ್ತು ವಂಶವೃದ್ಧಿಯ ಕಾರುಬಾರಮಾಡುವುದೆಂದು ಪರಿಗಣಿಸಲಾಗಿದೆ.

13. ಚಂದ್ರಗ್ರಹ ನಿಶಾಕರ ಗ್ರಹವೆಂದು ಪರಿಗಣಿಸಲಾಗಿದೆ.

14.ಚಂದ್ರಗ್ರಹ ವಾಯುವ್ಯ ದಿಕ್ಕಿನ ಒಡೆಯನೆಂದು ಪರಿಗಣಿಸಲಾಗಿದೆ.

15. ಚಂದ್ರಗ್ರಹ ವರ್ಷ ಋತುವಿನ ಕಾರುಬಾರ ಮಾಡುವುದೆಂದು ಪರಿಗಣಿಸಲಾಗಿದೆ.

16. ಚಂದ್ರಗ್ರಹದಲ್ಲಿ ನೀರಿನ ಅಂಶಜಾಸ್ತಿ ಇರುವುದೆಂದು ಪರಿಗಣಿಸಲಾಗಿದೆ.



- ಆರ್. ಶ್ರೀನಿಧಿ
99705 65978

17. ಚಂದ್ರಗ್ರಹದ ಬಣ್ಣ ಬೆಳ್ಳಿಯನ್ನು ಹೋಲುವ ಬಿಳಿ ಬಣ್ಣ.

18. ಚಂದ್ರಗ್ರಹವು ಮನುಷ್ಯನ ಬುದ್ಧಿ, ನಿದ್ರೆ, ಎಲ್ಲಾ ವಿಧದ ಹೂಗಳು ಮತ್ತು ಹಣ್ಣುಗಳ ಮೇಲೆ ಅಧಿಪತ್ಯವನ್ನು ವಹಿಸಿದೆ.

19.ಚಂದ್ರಗ್ರಹವು ಜನಸಮೂಹ, ವಾಣಿಜ್ಯ, ವ್ಯಾಪಾರ ಹಾಗೂ ದ್ರವ ವಸ್ತುವಿಗೆ ಸಂಬಂಧಿಸಿದ ಉದ್ಯೋಗಗಳ ಮೇಲೆ ಕಾರುಬಾರ ಮಾಡುವುದೆಂದು ಪರಿಗಣಿಸಲಾಗಿದೆ.

20. ಚಂದ್ರಗ್ರಹವು ಕಾಲಪುರುಷನಿಗೆ ಸ್ಥೂಲಕಾಯವಾದ ದೇಹ, ಬಿಳಿಯ ಬಣ್ಣ, ಸುಂದರ ಕಣ್ಣುಗಳು, ತೆಳುವಾದ ಕಪ್ಪು ಬಣ್ಣದ ತಲೆಯ ಕೂದಲು ಮೃದುವಾಗಿ ಮಾತಾಡುವ ಹಾಗೂ ಮೃದು ಸ್ವಭಾವಗಳನ್ನು ಕೊಡುತ್ತದೆ.

21. ಚಂದ್ರಗ್ರಹವು ಗಂಡಿನ ಎಡಗಡೆ ಕಣ್ಣಿನ ಮೇಲೆ, ಹೆಣ್ಣಿನ ಬಲಗಣ್ಣಿನ ಮೇಲೆ, ಅನ್ನನಾಳದ ಮೇಲೆ, ಹೊಟ್ಟೆಯ ಮೇಲೆ,ಅಂಡಾಶಯದ ಮೇಲೆ, ಮೇದಸ್ಸನ ಮೇಲೆ, ಮೂತ್ರ ಕೋಶದ ಮೇಲೆ ಅಧಿಕಾರ ಮಾಡುತ್ತದೆ.

22.ಶುಕ್ಲ ಪಕ್ಷದ ಚಂದ್ರ ರಕ್ತವಾಹಿನಿ, ನರಮಂಡಲ ಹಾಗೂ ಮಾಂಸ ಖಂಡದ ಮೇಲೆ ಅಧಿಕಾರ ಮಾಡುತ್ತದೆ.

23.ಕೃಷ್ಣಪಕ್ಷದ ಚಂದ್ರ ರಕ್ತನಾಳ ಇಂದ್ರಿಯ ಗ್ರಹಣ ಶಕ್ತಿಯ ಮೇಲೆ ಅಧಿಕಾರ ಮಾಡುತ್ತದೆ.

24.ಚಂದ್ರನ ಸ್ಥಾನ ನೀಚತ್ವದಲ್ಲಿರುವಾಗ ಕಾಲಪುರುಷನಿಗೆ ನಿರ್ಭಾಗ್ಯ, ಶೈಶವಾವಸ್ಥೆ ಹಾಗೂ ವೃದ್ಧಾವಸ್ಥೆಯಲ್ಲಿ ರೋಗ ಕಾಣಿಸಿಕೊಳ್ಳುವುದು, ಅಂಗಗಳನ್ನು ವಿಕಾರಗೊಳ್ಳುವುದಾಗಿ, ತುಂಬ ಚಿಂತಾಪರನಾಗಿ, ನಿರ್ಧಾರಿಸಲು ಅಶಕ್ತನನ್ನಾಗಿ, ಅವಿಚಾರದಿಂದ ನುಗ್ಗುವವನನ್ನಾಗಿ, ಚಿಂತೆಗೊಳಗಾಗುವವನಾಗಿ ಹಾಗೂ ನಿರಾಶಾವಾದಿಯನ್ನಾಗಿ ಮಾಡುತ್ತದೆ.

25. ಚಂದ್ರಗ್ರಹದ ಸ್ಥಾನ ಉಚ್ಚತ್ವದಲ್ಲಿರುವಾಗ ಕಾಲಪುರುಷನಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಕಲ್ಪಿಸುತ್ತದೆ. ಮೃದುಸ್ವಭಾವ, ಆರೋಗ್ಯವಂತನಾಗಿ, ಐಶ್ವರ್ಯವಂತನಾಗುವ, ಅಪೇಕ್ಷೆವುಳ್ಳವನಾಗಿ, ಮಾನಸಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಅಭಿರುಚಿಉಳ್ಳವನಾಗಿ ಹಾಗೂ ರುಚಿಯಾದ ಹಣ್ಣುಗಳನ್ನು ಇಚ್ಚಿಸುವವನ್ನಾಗಿ ಮಾಡುತ್ತದೆ.

26. ಚಂದ್ರಗ್ರಹದ ನೀಚತ್ವದ ಸ್ಥಾನದಿಂದ ಕಾಡುವ ಕಾಯಿಲೆಗಳು-ಹುಚ್ಚುಹಿಡಿಯುವುದು, ಕಣ್ಣಿಗೆ ಸಂಬಂಧ ಪಟ್ಟ ಕಾಯಿಲೆ,ಮೂರ್ಛೆರೋಗ, ಕೆಮ್ಮು ಮತ್ತು ಶೀತ, ಪಾರ್ಶ್ವವಾಯು, ಅಂಡವಾಯು ಉದರಶೂಲೆ , ದಮ್ಮು ಅರ್ಬುದ ರೋಗ, ಗಡ್ಡೆಕಾಯಿಲೆ ವಿಷಮಜ್ವರ.

27. ಕಿತ್ತಳೆಹಣ್ಣು, ಕಲ್ಲಂಗಡಿ ಹಣ್ಣು, ಸೌತೆಕಾಯಿ, ಹಣಬೆ, ಸಿಹಿಕುಂಬಳಕಾಯಿ,ಕಬ್ಬು,ಹೂಕೋಸು, ವಿಳ್ಳೆದಳ್ಳೆ, ಬೆಳ್ಳಿ, ಉಪ್ಪು, ಅಕ್ಕಿ, ಕೋಸು, ಹಣ್ಣಿನರಸ, ಹಾಲಿನ ಕೆನೆ, ಮೊಸರು, ಪಾದರಸ ಮತ್ತು ವಿದೇಶಿ ಮದ್ಯವನ್ನು ಚಂದ್ರಗ್ರಹವು ಪ್ರತಿನಿಧಿಸುತ್ತದೆ.

28. ನಾಯಿ, ಬೆಕ್ಕು, ಇಲಿ, ಭೂಜಲದ ಪ್ರಾಣಿಗಳು, ಕುದುರೆಗಳನ್ನು ಚಂದ್ರಗ್ರಹವು ಪ್ರತಿನಿಧಿಸುತ್ತದೆ.

29. ಬೆಟ್ಟಗುಡ್ಡಗಳ ಪ್ರದೇಶ, ಕೋಟೆ, ಮಹಾಸಾಗರ, ನದಿ, ವಾಸದ ಮನೆ ಇವುಗಳು ಚಂದ್ರಗ್ರಹದ ವಾಸಸ್ಥಾನ.

30.ಮುತ್ತು , ಬಿಳಿಯ ಬಣ್ಣದ ರತ್ನಗಳನ್ನು ಚಂದ್ರಗ್ರಹವು ಪ್ರತಿನಿಧಿಸುತ್ತದೆ.

31. ಬೆಳ್ಳಿ, ಬಿಳಿಯ ಬಣ್ಣದ ಲೋಹಗಳನ್ನು ಪ್ರತಿನಿಧಿಸುತ್ತದೆ.

**ಏಕಭುಕ್ತಂ ಸದಾರೋಗ್ಯಂ**

**ದ್ವಿಭೂಕ್ತಂ ಬಲವರ್ಧನಮ್।**

**ತ್ರಿಭುಕ್ತೇ ವ್ಯಾಧಿ ಪೀಡಾ ಸ್ಯಾತ್**

**ಚತುರ್ಭುಕ್ತೇ ಮೃತಿರ್ಧ್ರುವಮ್॥**

ಒಂದು ಸಲ ಊಟ ಮಾಡುವುದು ಸದಾ ಆರೋಗ್ಯಕಾರಿ. ಎರಡು ಸಲ ಊಟ ಮಾಡುವುದು ಬಲವನ್ನು ಹೆಚ್ಚಿಸುತ್ತದೆ. ಮೂರು ಸಲ ಊಟ ಮಾಡುವುದು ಕಾಯಿಲೆಯಿಂದ ನರಳುವುದಕ್ಕಾಗುತ್ತದೆ. ನಾಲ್ಕು ಸಲ ಊಟ ಮಾಡುವುದು ನಿಶ್ಚಯವಾಗಿ ಸಾಯುವುದಕ್ಕೆ ಕಾರಣವಾಗುತ್ತದೆ.



ಧಾರಾವಾಹಿ- 8

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

### ಹಿಂದಿನ ಸಂಚಿಕೆಯಿಂದ

ಒಟ್ಟು ಹನ್ನೆರಡು ಆಳ್ವಾರ್‌ಗಳ ಪ್ರಬಂಧಗಳ ಸಂಖ್ಯೆ ೨೪. ಪಾಶುರಗಳು ೪೦೦೦. ಈ ದಿವ್ಯ ಪ್ರಬಂಧಗಳಲ್ಲಿ ಮಧುರ ಕವಿ ಆಳ್ವಾರ್ ರಚನೆ ೧೧ ಪಾಶುರಗಳು ತೊಂಡರಡಿಪ್ಪೊಡಿ ಆಳ್ವಾರ್ ಅವರ ಎರಡು ಪ್ರಬಂಧಗಳ ಪಾಶುರಗಳ ಸಂಖ್ಯೆ 55, ನಮ್ಮಾಳ್ವಾರ್ ತಿರುವಾಶಿರಿಯಂನ ಪಾಶುರಗಳು ೭. ಪೆರಿಯಾಳ್ವಾರ್ ತಿರುಪ್ಪಲ್ಲಾಂಡ್ ೧೨, ತಿರುಮಂಗೈ ಆಳ್ವಾರ್ ಅವರ ತಿರುವೆಳುಕ್ಕೂತ್ತಿರುಕ್ಕೈ ೧,ಆಂಡಾಳ್‌ನ ತಿರುಪ್ಪಾವೈ ೩೦. ಈ ಪಾಶುರಗಳು ಒಟ್ಟು ಸಂಖ್ಯೆ ೧೧೬. ಈ ಪಾಶುರ ಗಳಲ್ಲಿ ತಿರುವೇಂಗಡದ ಪ್ರಸ್ತಾಪ ಕಂಡು ಬರುವುದಿಲ್ಲ ಎಂದಾಗ ಮಿಕ್ಕ ಪಾಶುರಗಳಲ್ಲಿ ವೇಂಗಡದ ಪ್ರಸ್ತಾಪ ತುಂಬಿದೆ ಎನ್ನುವ ಅರ್ಥವಲ್ಲ. ಈ ಮಿಕ್ಕ ಪಾಶುರಗಳಾದ ೩೮೮೪ ನೊಳಗೊಂಡ ೧೭ ಪ್ರಬಂಧಗಳಲ್ಲಿ ಕೇವಲ ೨೦೦ ಪಾಶುರಗಳಲ್ಲಿ ಮಾತ್ರ ತಿರುವೇಂಗಡದ ಪ್ರಸ್ತಾಪ ಬರುತ್ತದೆ ಎಂಬುದಾಗಿ ತಿರುಪತಿ ದೇವಸ್ಥಾನದ ಪ್ರಕಟನೆ ಯಾದ 'ಆಳ್ವಾರುಲ ಮಂಗಳಶಾಸನ ಪಾಶುರಮುಲು' ಎನ್ನುವ ಪುಸ್ತಕ ತಿಳಿಸುತ್ತದೆ. ಆದರೇ ಇದರಲ್ಲಿ 'ತಿರುಪ್ಪಲ್ಲಾಂಡ್', 'ತಿರುಪ್ಪಾವೈ', ರಾಮಾನುಜನೂತ್ತಂದಾದಿ' ಮತ್ತು 'ಅಧಿಕಾರ ಸಂಗ್ರಹ' ಎನ್ನುವ ಪ್ರಬಂಧಗಳಲ್ಲಿನ ಪಾಶುರಗಳೂ ಸೇರ್ಪಡೆಗೊಂಡಿವೆ. ಈ ಪಾಶುರಗಳ ಹಂಚಿಕೆ ಈ ಕೆಳಕಂಡಂತಿವೆ.

| | | |
|---|---|---|
| ಪೊಯ್ಗಯ್ ಆಳ್ವಾರ್ | ಮೊದಲ್‌ತಿರುವಂದಾದಿ | ೧೦ ಪಾಶುರಗಳು |
| ಪೂದತ್ತಾಳ್ವಾರ್ | ಇರಂಡಾಂ ತಿರುವಂದಾದಿ | ೯ ಪಾಶುರಗಳು |
| ಪೇಯಾಳ್ವಾರ್ | ಮೂನ್ರಾಂ ತಿರುವಂದಾದಿ | ೧೯ ಪಾಶುರಗಳು |
| ತಿರುಮಳಿಶೈ ಆಳ್ವಾರ್ | ನಾನ್ಮುಗನ್ ತಿರುವಂದಾದಿ | ೧೨ ಪಾಶುರಗಳು |
| | ತಿರುಚ್ಛಂದವಿರುತ್ತಂ | ೨ ಪಾಶುರಗಳು |

| | | |
|---|---|---|
| ನಮ್ಮಾಳ್ವಾರ್ | ತಿರುವಿರುತ್ತಂ | ೮ ಪಾಶುರಗಳು |
| | ಪೆರಿಯ ತಿರುವಂದಾದಿ | ೧ ಪಾಶುರಗಳು |
| | ತಿರುವಾಯ್ಮೊಳಿ | ೩೫ ಪಾಶುರಗಳು |
| ಕುಲಶೇಖರಾಳ್ವಾರ್ | ಪೆರುಮಾಳ್ ತಿರುಮೊಳಿ | ೧೧ ಪಾಶುರಗಳು |
| ಆಂಡಾಳ್ | ತಿರುಪ್ಪಾವೈ | ೧ ಪಾಶುರಗಳು |
| | ನಾಚ್ಚಿಯಾರ್ ತಿರುಮೊಳಿ | ೧೬ ಪಾಶುರಗಳು |
| ಪೆರಿಯಾಳ್ವಾರ್ | ತಿರುಪ್ಪಲ್ಲಾಂಡ್ | ೧ ಪಾಶುರಗಳು |
| | ಪೆರಿಯಾಳ್ವಾರ್ ತಿರುಮೊಳಿ | ೭ ಪಾಶುರಗಳು |
| ತಿರುಪ್ಪಾಣಿ ಆಳ್ವಾರ್ | ಅಮಲನಾದಿ ಪಿರಾನ್ | ೨ ಪಾಶುರಗಳು |
| ತಿರುಮಂಗೈ ಆಳ್ವಾರ್ | ಪೆರಿಯ ತಿರುಮೊಳಿ | ೫೫ ಪಾಶುರಗಳು |
| | ತಿರುಕ್ಕುರುಂದಾಂಡಗಂ | ೧ ಪಾಶುರಗಳು |
| | ತಿರುನೆಡುಂದಾಂಡಗಂ | ೪ ಪಾಶುರಗಳು |
| | ಶಿರಿಯತಿರುಮಡಲ್ | ೧ ಪಾಶುರಗಳು |
| | ಪೆರಿಯತಿರುಮಡಲ್ | ೨ ಪಾಶುರಗಳು |
| ತಿರುವಂಗತ್ತಮುದನಾರ್ | ರಾಮಾನುಜನೂತ್ತಂದಾದಿ | ೨ ಪಾಶುರಗಳು |
| ವೇದಾಂತದೇಶಿಕರು | ಅಧಿಕಾರ ಸಂಗ್ರಹಂ | ೧ ಪಾಶುರಗಳು |
| | ಒಟ್ಟು | ೨೦೦ ಪಾಶುರಗಳು |

ಇಲ್ಲಿ ಸ್ವಲ್ಪ ಸ್ಪಷ್ಟೀಕರಣ ಬೇಕಿದೆ. ಈ ಪಟ್ಟಿಯ ತಿರುಪ್ಪಲ್ಲಾಂಡ್‌ನಲ್ಲಾಗಲೀ, ತಿರುಪ್ಪಾವೈನಲ್ಲಾಗಲೀ ವೇಂಗಡದ ಪ್ರಸ್ತಾಪವಿಲ್ಲ. ಇದನ್ನು ಆಗಲೇ ಹೇಳಿ ಆಗಿದೆ. ಆದರೆ ಅವನ್ನು ಏತಕ್ಕೆ ಸೇರಿಸಿರುವರೆಂದು ಮುಂದೆ ವಿಶ್ಲೇಷಿಸೋಣ. ಇದೇ ರೀತಿ ತಿರುವರಂಗತ್ತಮುದನಾರ್ ಮತ್ತು ವೇದಾಂತ ದೇಶಿಕರು ಆಳ್ವಾರ್ ಪಟ್ಟಕ್ಕೆ ಸೇರುವುದಿಲ್ಲ. ರಾಮಾನುಜನೂತ್ತಂದಾದಿಯನ್ನು ಪ್ರಬಂಧಗಳ ಜೊತೆ ಅನುಸಂಧಾನ ಮಾಡುವ ಕ್ರಮ ಇರುವುದರಿಂದ ಅದನ್ನು ಸೇರಿಸಿದ್ದಾರೆಂದು ಊಹಿಸಬೇಕಾಗಿದೆ. ಆದರೆ ವೇದಾಂತದೇಶಿಕರ ಅಧಿಕಾರ ಸಂಗ್ರಹವನ್ನು ಏತಕ್ಕಾಗಿ ಸೇರಿಸಿರುವರೆಂಬುವುದು ತಿಳಿಯುವುದಿಲ್ಲ. ಅಂತೂ ತಿರುವೇಂಗಡವನ್ನು ಹಾಡಿರುವ ಆಳ್ವಾರ್ ಪಾಶುರದ ಸಂಖ್ಯೆ ಮೇಲಿನ ಪಟ್ಟಿಯ ಪ್ರಕಾರ ೧೯೫ ಎಂದಾಗುತ್ತದೆ.

ಡಾ|| ಎನ್. ಎಸ್. ಅನಂತರಂಗಾಚಾರ್ಯರ 'ಆಳ್ವಾರುಗಳೂ ಮತ್ತು ಶ್ರೀಮದ್ವೇಂಕಟನಾಯಕನೂ" ಎನ್ನುವ ಪುಸ್ತಕದ ಪ್ರಕಾರ ವೇಂಗಡವನ್ನು ಕುರಿತ ಪಾಶುರಗಳು ಇಂತಿವೆ.

| | | |
|---|---|---|
| ಪೊಯ್ಗಯ್ ಆಳ್ವಾರ್ | (ಮೊ.ತಿ.) | ೧೦ ಪಾಶುರಗಳು |
| ಪೂದತ್ತಾಳ್ವಾರ್ | (ಇ.ತಿ.) | ೧೩ ಪಾಶುರಗಳು |
| ಪೇಯಾಳ್ವಾರ್ | (ಮೂ.ತಿ.) | ೧೯ ಪಾಶುರಗಳು |
| ತಿರುಮಳಿಶೈ ಆಳ್ವಾರ್ | (ನಾ.ತಿ.) | ೧೨ ಪಾಶುರಗಳು |
| | (ತಿ.ವಿ.) | ೩ ಪಾಶುರಗಳು |

| | | |
|---|---|---|
| ನಮ್ಮಾಳ್ವಾರ್ | (ತಿ.ವಿ.) | ೮ ಪಾಶುರಗಳು |
| | (ತಿರುವಾಯ್ಮೊಳಿ) | ೫೪ ಪಾಶುರಗಳು |
| ಕುಲಶೇಖರ ಆಳ್ವಾರ್ | (ಪೆ.ತಿ.) | ೧೧ ಪಾಶುರಗಳು |
| ಆಂಡಾಳ್ | (ನಾ.ತಿ.) | ೧೬ ಪಾಶುರಗಳು |
| ಪೆರಿಯಾಳ್ವಾರ್ | (ಪೆ.ತಿ.) | ೧೭ ಪಾಶುರಗಳು |
| ತಿರುಪ್ಪಾಣಿ ಆಳ್ವಾರ್ | (ಅ.) | ೨ ಪಾಶುರಗಳು |
| ತಿರುಮಂಗೈ ಆಳ್ವಾರ್ | (ಪೆ.ತಿ.) | ೫೫ ಪಾಶುರಗಳು |
| | ಒಟ್ಟು | ೨೨೦ ಪಾಶುರಗಳು |

ಶ್ರೀ ಎಸ್.ಕೆ. ರಾಮಚಂದ್ರರಾಯರ 'ತಿರುಪತಿ ತಿಮ್ಮಪ್ಪ' ಪುಸ್ತಕದಲ್ಲಿ ತಿರುವೇಂಗಡವನ್ನು ಕುರಿತ ಆಳ್ವಾರ್ ಪಾಶುರಗಳು ಇಂತಿವೆ.

| | |
|---|---|
| ಪೊಯ್ಗಯ್ ಆಳ್ವಾರ್ | ೧೦ |
| ಪೂದತ್ತಾಳ್ವಾರ್ | ೯ |
| ಪೇಯಾಳ್ವಾರ್ | ೧೦ |
| ತಿರುಮಳಿಶೈ ಆಳ್ವಾರ್ | ೧೪ |
| ನಮ್ಮಾಳ್ವಾರ್ | ೪೪ |
| ಕುಲಶೇಖರ್ ಆಳ್ವಾರ್ | ೧ |
| ಪೆರಿಯಾಳ್ವಾರ್ | ೧೩ |
| ಆಂಡಾಳ್ | ೧೬ |
| ತಿರುಪಾಣಿ ಆಳ್ವಾರ್ | ೨ |
| ತಿರುಮಂಗೈ ಆಳ್ವಾರ್ | ೬೩ |
| ಒಟ್ಟು | ೧೮೦ |

ವೇಗಂಡವನ್ನು ಕುರಿತ ಪಾಶುರಗಳು ೧೯೫ ಎಂದು ಹೇಳಿದ್ದರೂ ಕೂಡ ಮೇಲಿನ ವಿವರಣೆಯ ಪ್ರಕಾರ ಪಾಶುರಗಳ ಸಂಖ್ಯೆ ೧೮೦ ಆಗುತ್ತದೆ. ಇನ್ನೂ ಹದಿನೈದು ಪಾಶುರಗಳ ವ್ಯತ್ಯಾಸ ಹೇಗೆ ಬಂದಿದೆ ಎಂಬುದು ಸ್ಪಷ್ಟವಿಲ್ಲ. ಆದರೂ ಸೂಕ್ಷ್ಮವಾಗಿ ಪರಿಶೀಲಿಸಿ ತಿರುಪತಿ ದೇವಸ್ಥಾನದವರ ಪ್ರಚುರಣವಾದ 'ಆಳ್ವಾರುಲ ಮಂಗಳಾಶಾಸನ ಪಾಶುರಮುಲು' ವನ್ನು ಇದರೊಂದಿಗೆ ಹೋಲಿಸಿದಾಗ ಪೇಯಾಳ್ವಾರ್ ಪಾಶುರಗಳು ೧೦ ಅಲ್ಲ, ಆದರೆ ೧೯ ಇರಬೇಕು ಮತ್ತು ಪೆರಿಯಾಳ್ವಾರ್ ಪಾಶುರ ೧ ಅಲ್ಲ ಆದರೆ ೭ ಇರಬೇಕು ಎನಿಸುತ್ತದೆ. ಹೀಗೆ ಹೆಚ್ಚುವರಿಯಾದ ಪಾಶುರಗಳನ್ನು ೧೮೦ ರೊಡನೆ ಕೂಡಿದಾಗ ೧೯೫ ಆಗುತ್ತದೆ. ಶ್ರೀ ರಾಮಚಂದ್ರರಾಯರ ಉದ್ದೇಶವೂ ಇದೇ ಆಗಿದ್ದು ಪ್ರಮಾದವಶಾತ್ ಮುದ್ರಣ ದೋಷದಿಂದಾಗಿ ಮೇಲಿನ ತಪ್ಪು ಉಂಟಾಗಿರುವುದೆಂದು ಊಹಿಸಲು ಸಾಧ್ಯವಾಗುತ್ತದೆ. ಅಂತೂ ರಾಮಚಂದ್ರರಾಯರ ಪ್ರಕಾರ ವೇಂಗಡದ ಮೇಲೆ ಆಳ್ವಾರ್ ಪಾಶುರಗಳ ಸಂಖ್ಯೆ ೧೯೫ ಎಂದಾಗುತ್ತದೆ.

(ಮುಂದುವರೆಯುತ್ತದೆ.)

# ನೀತಿ ಕಥೆ

# ಯಾರು ದೊಡ್ಡ ಬ್ರಹ್ಮ ಜ್ಞಾನಿ ? ಯಾರು ದೊಡ್ಡ ವೇದ ವಿದ್ವಾಂಸರು?

-ಶ್ರೀಮತಿ. ಎ. ಗೀತಾವೀರರಾಘವನ್

ಒಮ್ಮೆ ವಿದೇಹ ಚಕ್ರವರ್ತಿ ಜನಕರಾಜನು ಒಂದು ಯಾಗವನ್ನು ಮಾಡಿ ವಿದ್ವಾಂಸರಿಗೆ ಅನೇಕ ದಕ್ಷಿಣೆಗಳನ್ನು ನೀಡಿದನು. ಕುರು ಪಾಂಚಾಲ ದೇಶದ ಅನೇಕ ವಿದ್ವಾಂಸರು ಆ ಸಭೆಯಲ್ಲಿ ನೆರೆದಿದ್ದರು. ಅವರಲ್ಲಿ ಅತಿ ಶ್ರೇಷ್ಠ ವಿದ್ವಾಂಸರು ಯಾರೆಂದು ತಿಳಿಯಲು ಜನಕರಾಜನಿಗೆ ಕುತೂಹಲವಾಯಿತು.ರಾಜನು ಒಂದು ಸಾವಿರ ಹಸುಗಳನ್ನು ಕೊಟ್ಟಿಗೆಯಿಂದ ತರಿಸಿ ಪ್ರತಿ ಹಸುವಿನ ಎರಡು ಕೊಂಬುಗಳಿಗೂ 10-10 ತುಲ ಚಿನ್ನದ ಗಂಟೆಗಳನ್ನು ಕಟ್ಟಿಸಿ ಆ ವಿದ್ವಾಂಸರಿಗೆ ನಿಮ್ಮಲ್ಲಿ ಯಾರು ಎಲ್ಲರಿಗಿಂತ ಶ್ರೇಷ್ಠ ವೇದ ವಿದ್ವಾಂಸರೋ ಅವರು ಈ ಹಸುಗಳನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದನು.

ಅಲ್ಲಿ ಆಹ್ವಾನಿತರಾಗಿದ್ದ 150 - 200 ವಿದ್ವಾಂಸರಲ್ಲಿ ಯಾರಿಗೂ ನಾನು ಅತಿ ಶ್ರೇಷ್ಠ ವಿದ್ವಾಂಸನೆಂದು ಹೇಳಿಕೊಳ್ಳಲು ಧೈರ್ಯವಾಗಲಿಲ್ಲ. ಯಾರೂ ಹಸುಗಳನ್ನು ಮುಟ್ಟಲಿಲ್ಲ. ಆಗ ಯಾಜ್ಞವಲ್ಕ್ಯರು ತಮ್ಮ ಶಿಷ್ಯ ಸಾಮಶ್ರವನಿಗೆ "ಪ್ರಿಯ ಸಾಮಶ್ರವ, ಹಸುಗಳನ್ನು ನಮ್ಮ ಆಶ್ರಮಕ್ಕೆ ಹೊಡೆದು ಕೊಂಡು ಹೋಗು' ಎಂದು ಹೇಳಿದರು. ಅಂತೆಯೇ ಸಾಮಾಶ್ರವನು ಹಸುಗಳನ್ನು ಹೊಡೆದುಕೊಂಡು ಯಾಜ್ಞವಲ್ಕ್ಯರ ಆಶ್ರಮಕ್ಕೆ ಹೊರಟು ಹೋದನು.

ಅಲ್ಲಿವರೆಗೆ ಸುಮ್ಮನೆ ನೋಡುತ್ತಿದ್ದ ವಿದ್ವಾಂಸರು ಯಾಜ್ಞವಲ್ಕ್ಯರು ಮೇಲೆ ತಿರುಗಿ ಬಿದ್ದರು. ನೀವು ಎಲ್ಲರಿಗಿಂತ ಅತಿ ಶ್ರೇಷ್ಠ ವಿದ್ವಾಂಸರೋ ಎನ್ನುತ್ತಾ ಪ್ರತಿಯೊಬ್ಬ ಯಾಜ್ಞವಲ್ಕ್ಯರ ಮೇಲೆ ಪ್ರಶ್ನೆಗಳ ಬಾಣಗಳನ್ನು ಬೀಸಿದರು.ಆಗ ಯಾಜ್ಞವಲ್ಕ್ಯರು ಅತ್ಯಂತ ವಿನಯದಿಂದ ಖಂಡಿತವಾಗಿಯೂ ನಾನು ಅತಿ ಶ್ರೇಷ್ಠ ಜ್ಞಾನಿಯಲ್ಲ ಆದರೆ ನಮ್ಮ ಆಶ್ರಮಕ್ಕೆ ಹಸುಗಳ ಅವಶ್ಯಕತೆ ಇದೆ. ಆದುದರಿಂದ ತೆಗೆದುಕೊಂಡೆ ಎಂದರು.

ಪ್ರತಿಯೊಬ್ಬರೂ ಯಾಜ್ಞವಲ್ಕ್ಯರನ್ನು ವಾದದಲ್ಲಿ ಸೋಲಿಸಬೇಕೆಂದು ಒಂದೊಂದು ಪ್ರಶ್ನೆಗಳ ಬಲೆಯನ್ನು ಬೀಸಿದರು. ಯಾಜ್ಞವಲ್ಕ್ಯರು ಬಹಳ ದೊಡ್ಡ ಜ್ಞಾನಿ ಹಾಗೂ ವಿನಯ ಸಂಪನ್ನರು ಅಲ್ಲಿ ನೆರೆದಿದ್ದ ಎಲ್ಲಾ ವಿದ್ವಾಂಸರ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಾ ಹೋದರು. ಬಹಳ ಎಚ್ಚರಿಕೆಯಿಂದ ಉತ್ತರಿಸುತ್ತಾ ಹೋದರು. ಪ್ರತಿ ಪ್ರಶ್ನೆಗೂ ವಿದ್ವಾಂಸರು ಹೀಗೆ ಅಭಿಪ್ರಾಯ ಪಡುತ್ತಾರೆ ಎಂದರೆ ಹೊರತು ನಾನು ಹೀಗೆ ಹೇಳುತ್ತೀನಿ ಎನ್ನಲಿಲ್ಲ. ಕಹೋಲ, ಉಷಸ್ತ, ಉದ್ದಾಲಕರು ಮುಂತಾದ ಅನೇಕ ವಿದ್ವಾಂಸರು ಪ್ರಶ್ನೆಗಳ ಸುರಿಮಳೆ ಸುರಿಸಿದರು. ಯಾಜ್ಞವಲ್ಕ್ಯರು ಎಲ್ಲರ ಪ್ರಶ್ನೆಗೂ ಸೂಕ್ತವಾದ ಉತ್ತವರನ್ನು ಹೇಳುತ್ತಾ ಹೋದರು.

ಕೊನೆಯಲ್ಲಿ ಗಾರ್ಗಿವಾಚಕ್ನವಿ (ಆ ಕಾಲದಲ್ಲಿ 32 ಹೆಂಗಸರು ಬ್ರಹ್ಮ ಜ್ಞಾನಿಗಳಿದ್ದರು) ಎಲ್ಲಾ ವಿದ್ವಾಂಸರೇ, ನಾನು ಈಗ ಯಾಜ್ಞವಲ್ಕ್ಯರನ್ನು ಎರಡು ಪ್ರಶ್ನೆಗಳನ್ನು ಕೇಳುತ್ತೇನೆ ಅವರು ಅದಕ್ಕೆ ಉತ್ತರಿಸಿದರೆ ನೀವೆಲ್ಲರೂ ಅವರ ಕಾಲಿಗೆ ಬಿದ್ದು ನಮಸ್ಕರಿಸಿ ಹೊರಡಬೇಕೆಂದು ಹೇಳಿದಳು. ಹೇಗಾದರೂ ಯಾಜ್ಞವಲ್ಕ್ಯರನ್ನು ಸೋಲಿಸಬೇಕೆಂದಿದ್ದ ವಿದ್ವಾಂಸರು "ಕೇಳು ಗಾರ್ಗಿ ಕೇಳು" ಎಂದು ಕೂಗಿಕೊಂಡರು.

ಗಾರ್ಗಿ,ಯಾಜ್ಞವಲ್ಕ್ಯರಿಗೆ ವಿದೇಹರಾಜನು ಶತ್ರುವಿಗೆ ಬಿಡುವಂತಹ ಹರಿತವಾದ ಬಾಣದಂತಹ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಯಾಜ್ಞವಲ್ಕ್ಯರೇ, ಉತ್ತರ ಹೇಳಲು ತಯಾರಾಗಿ ಎಂದಳು. ಯಾಜ್ಞವಲ್ಕ್ಯರು ಕೇಳು ಗಾರ್ಗಿ ಎಂದರು ಗಾರ್ಗಿ ಮೊದಲನೆ ಪ್ರಶ್ನೆಯನ್ನು ಕೇಳಿದಳು. ಈ ಭೂಲೋಕ, ದ್ವಿಲೋಕ, ಪಾತಾಳ, ಅಂತರಿಕ್ಷ ಹಾಗೇ ಲೋಕಗಳೆಲ್ಲಾ ಯಾವುದರಲ್ಲಿ ಓತಪ್ರೇತವಾಗಿದೆ.ಯಾಜ್ಞವಲ್ಕ್ಯರು ತಕ್ಷಣ "ಆಕಾಶ"ಎಂದು ಉತ್ತರಿಸಿದರು. ಗಾರ್ಗಿಗೆ ಬಹಳ ಸಂತೋಷವಾಗಿ "ಯಾಜ್ಞವಲ್ಕ್ಯಾ ನಿನಗೆ ನಮಸ್ಕಾರ ಸರಿಯಾದ ಉತ್ತರವನ್ನು ನೀಡಿರುತ್ತೀಯ" ಎಂದಳು.

ಗಾರ್ಗಿ ಯಾಜ್ಞವಲ್ಕ್ಯರನ್ನು ಎರಡನೆಯ ಪ್ರಶ್ನೆಗೆ ತಯಾರಾಗಿ ಎಂದಳು, ಮೊದಲನೇ ಪ್ರಶ್ನೆಗೆ "ಆಕಾಶ" ಉತ್ತರಿಸಿದ್ದೀರಿ. ಅದನ್ನು ಬದಲಿಸುವಂತಿಲ್ಲ ಎಂದು ಈ ಆಕಾಶಕ್ಕೆ ಏನು ಆಧಾರ" ಎಂದು ಕೇಳಿದಳು. ಯಾಜ್ಞವಲ್ಕ್ಯರು ಬಹಳ ಹುಷಾರಾಗಿ "ತಿಳಿದಿರುವ ಬ್ರಹ್ಮಜ್ಞಾನಿಗಳು ಇದಕ್ಕೆ ಈ ರೀತಿ ಹೇಳುತ್ತಾರೆ ಎಂದು ವಿನಯದಿಂದ ಕೈ ಮುಗಿದು ಈ ಆಕಾಶಕ್ಕೆ ಪರಮಾಧಾರ "ಅಕ್ಷರ" ಎಂದು ಹೇಳಿ ಕ್ಷರವಿಲ್ಲದ ಪರಮಾತ್ಮ ತತ್ವವನ್ನು ಅಂತರ್ಯಾಮಿ ತತ್ವವನ್ನು ಗಾರ್ಗಿಗೆ ಹದಿನಾರು ಸಲ ಹೇಳಿದರು. ಯಾಜ್ಞವಲ್ಕ್ಯರು ಹೇಳಿದರು ಇವನೇ ನಿನ್ನ ಆತ್ಮನಾದ ಅಂತರ್ಯಾಮಿ, ಅದೃಷ್ಯನಾಗಿರುವ ದ್ರಷ್ಟಾ, ಅಶ್ರುತನಾಗಿರುವ ಶ್ರೋತಾ, ಮನನಕ್ಕೆ ಮೀರಿದಮಂತಾ ಅವಿಜ್ಞಾತನಾಗಿರುವ ವಿಜ್ಞಾತ, ಇವನೇ ನಿನ್ನ ಆತ್ಮನಾದ ಅಂತರ್ಯಾಮಿಯು ಅಮೃತನು ಇವನಿಗಿಂತ ಬೇರೆಯಾದುದೆಲ್ಲಾ ಅಲ್ಪವು.

ಯಾಜ್ಞವಲ್ಕ್ಯರು ಹೇಳಿದರು ಈ ಅಕ್ಷರ ಬ್ರಹ್ಮವನ್ನು ಜ್ಞಾನಿಗಳು ಈ ರೀತಿ ಹೇಳುತ್ತಾರೆ. ಅದು ಅಣುವಲ್ಲ, ಸ್ಥೂಲವಲ್ಲ, ಹ್ರಸ್ವವಲ್ಲ, ದೀರ್ಘವಲ್ಲ, ಕೆಂಪು ಬಣ್ಣವುಳ್ಳದ್ದಲ್ಲ, ಸಂಗವನ್ನು ಉಳ್ಳದ್ದಲ್ಲ, ಛಾಯೆಯನ್ನು ಉಳ್ಳದ್ದಲ್ಲ, ತಮಸ್ಸಲ್ಲ, ವಾಯುವಲ್ಲ, ಆಕಾಶವಲ್ಲ, ಜಿಡ್ಡುವುಳ್ಳದಲ್ಲ, ರಸವಲ್ಲ, ಗಂಧವಲ್ಲ, ಕಣ್ಣಿಗೆ ಕಾಣುವುದಿಲ್ಲ, ಶ್ರೋತ್ರವಲ್ಲ, ವಾಕ್ಕಲ್ಲ, ಮನಸ್ಸಲ್ಲ, ತೇಜಸ್ಸಲ್ಲ, ಪ್ರಾಣವಲ್ಲ, ಒಳಗಿಲ್ಲದಿಲ್ಲ. ಹೊರಗೆಯಿಲ್ಲದಿಲ್ಲ, ಅದು ಏನನ್ನೂ ತಿನ್ನುವುದಿಲ್ಲ, ಅದನ್ನು ಯಾವುದೂ ತಿನ್ನುವುದಿಲ್ಲ.

ಗಾರ್ಗಿ ಈ ಅಕ್ಷರದ ಪ್ರಶಾಸನದಲ್ಲಿ ಸೂರ್ಯಚಂದ್ರರು ನಿಲ್ಲಿಸಲ್ಪಟ್ಟಿದ್ದಾರೆ. ಈ ಅಕ್ಷರ ಪ್ರಶಾಸನದಲ್ಲಿಯೇ ಲೋಕವೆಲ್ಲಾ ನಡೆಯುತ್ತಿದೆ.

ಈ ಉತ್ತರಕ್ಕೆ ಗಾರ್ಗಿ ಬಹಳ ಸಂತೋಷ ಪಟ್ಟು ಎಲ್ಲಾ ವಿದ್ವಾಂಸರನ್ನೂ ಯಾಜ್ಞವಲ್ಕ್ಯರಿಗೆ ನಮಸ್ಕರಿಸಿ ಹೊರಡಲು ಹೇಳುತ್ತಾಳೆ.

ಮಕ್ಕಳೇ, ಹಸುಗಳನ್ನು ತಮಾಷೆಯಂತೆ ಹೊಡೆದುಕೊಂಡು ಹೋದ ಯಾಜ್ಞವಲ್ಕ್ಯರು ಎಂಥಾ ಮಹಾಜ್ಞಾನಿಗಳು ನೋಡಿದಿರಾ. ಅವರು ಹೇಳಿದ ಅಂತರ್ಯಾಮಿ ತತ್ವ ನಿನ್ನಲ್ಲಿರುವ ಪರಮಾತ್ಮ ನನ್ನಲ್ಲಿಯೂ ಇದ್ದಾನೆ. ಎಲ್ಲರಲ್ಲಿಯೂ ಇದ್ದಾನೆ ಎಂದು ನಾವೆಲ್ಲರೂ ತಿಳಿದರೆ ನಾವೆಲ್ಲರೂ ಒಂದೇ ಆಗುತ್ತೇವೆ. ಒಬ್ಬರನ್ನೊಬ್ಬರು ಪ್ರೀತಿಸಿ ಕೋಪ ದ್ವೇಷಗಳನ್ನು ಅಳಿಸುತ್ತೇವೆ. ಆಗ ಈ ಜೀವನ ಎಂತಹ ಸುಖಮಯವಾಗುವುದು ಅಲ್ಲವೆ? ಎಲ್ಲರೂ ಇದನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟಿಕೊಳ್ಳಿ.




# ಚಿತ್ರಕಥೆ

# ತಿರುಪ್ಪಾವೈ


ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ. ತುಲಸೀಪ್ರಸಾದ್


1 ವಿಷ್ಣುಚಿತ್ತನ ಮುದ್ದಿನ ಮಗಳು ಆಂಡಾಳ್ ಶ್ರೀರಂಗನಾಥನನ್ನು ಪತಿಯಾಗಿ ಪಡೆಯಲು ಲೋಕಕಲ್ಯಾಣಕ್ಕಾಗಿ ಆಕೆ ತನ್ನ ಸಖಿಯರೊಂದಿಗೆ ಸೇರಿ ತಿರುಪ್ಪಾವೈ (ಶ್ರೀವ್ರತ ) ವ್ರತವನ್ನು ಆಚರಿಸಬೇಕೆಂದು ಸಂಕಲ್ಪಿಸಿ, ಸಖಿಯರೊಂದಿಗೆ ಆಂಡಾಳ್....




17
ಗೋವಿಂದಾ! ನಿನ್ನ ದಯಾ ದೃಷ್ಟಿಯಿಂದ ತೊಲಗಿಸು. ಎಷ್ಟೋ ಭಕ್ತರನ್ನು
ನಮ್ಮ ಪಾಪಗಳನ್ನು ಇದೇ ರೀತಿ ಅನುಗ್ರಹಿಸಿರುವೆಯಲ್ಲಾ!
18
ಗೋಪಾಲ! ಗೋವಿಂದಾ !
19
ಸಿಂಹದಂತೆ ನಡೆದು ಬಾ! ನಮ್ಮನ್ನು ಆದರಿಸು, ಶರಣಾಗತಿ ನೀಡು!
20
ದುಷ್ಟರನ್ನು ಸಂಹರಿಸಿದ ನಿನ್ನ ವೀರ ಚರಿತೆಯನ್ನು ಹಾಡುವುದು ನಮ್ಮ ಅದೃಷ್ಟ
21
ಸ್ವಾಮಿ ! ನಮಗೆ ಯಾವುದೇ ಬೇಡಿಕೆಗಳಿಲ್ಲ.. ನಿನ್ನೊಂದಿಗೆ ಸೇರಿ ಪ್ರಸಾದವನ್ನು ಸ್ವೀಕರಿಸುತ್ತೇವೆ.
22
ನಾವು ಎಂದೆಂದಿಗೂ ನಿನ್ನ ಜೊತೆಯಲ್ಲಿಯೇ ಇರುತ್ತೇವೆ. ನಿನ್ನ ಸೇವೆಯಲ್ಲಿ ಮೈ ಮರೆಯುತ್ತೇವೆ ಸ್ವಾಮಿ !
23
ನಮ್ಮ ಬಂಧವು ಬಿಡಿಸಲಾಗದು ನಮಗೆ ಭೇದವಿಲ್ಲ ಗೋವಿಂದಾ!
24
ಶ್ರೀವ್ರತವು ಪೂರ್ಣವಾಯಿತು ಆಂಡಾಳ್ ಬೇಡಿಕೆ ಈಡೇರಿತು. ಆಕೆ ರಂಗನಾಥನನ್ನು ಸೇರಿದಳು !
ಸರ್ವೇ ಜನಾಃ ಸುಖಿನೋ ಭವನ್ತು !

**ಕ್ವಿಜ್**

# ರಸಪ್ರಶ್ನೆ

ಅ) ಹನುಮಂತನ ತಂದೆ ತಾಯಿ ಯಾರು?
1. ಕೇಸರಿ - ಅಂಜನಾದೇವಿ  2. ವಸುದೇವ - ದೇವಕಿ
3. ಧೃತರಾಷ್ಟ್ರ - ಗಾಂಧಾರಿ  4. ಕುಂತಿ - ಪಾಂಡುರಾಜ

ಆ) ಹನುಮಂತನನ್ನು ಪಡೆಯಲು ಅಂಜನಾದೇವಿ ಎಷ್ಟು ವರ್ಷಗಳು ತಪಸ್ಸು ಮಾಡಿದಳು?
1. ಒಂಭತ್ತು  2. ಎಂಟು
3. ಹದಿಮೂರು  4. ಹತ್ತು

ಇ) ಹನುಮಂತನ ಎರಡನೆಯ ಅವತಾರ ಯಾವುದು?
1. ಉದ್ಧವ  2. ಸಾತ್ಯಕಿ
3. ಭೀಮ  4. ನಕುಲ

ಈ) ಹನುಮಂತನ ಮೂರನೆಯ ಅವತಾರ ಯಾವುದು?
1. ಮಧ್ವಾಚಾರ್ಯ  2. ಭೀಷ್ಮಾಚಾರ್ಯ
3. ದ್ರೋಣಾಚಾರ್ಯ  4. ಕೃಪಾಚಾರ್ಯ


ಉ) ಲಕ್ಷ್ಮಣನನ್ನು ಉಳಿಸಲು ಹನುಮಂತನು ಹೊತ್ತು ತಂದ ಪರ್ವತದ ಹೆಸರೇನು?
1. ಮಂದರ  2. ಹಿಮಾಲಯ
3. ಸಂಜೀವಿನಿ  4. ವಿಂಧ್ಯಾ

ಊ) ಹನುಮಂತನ ಕೈಯಲ್ಲಿ ಹತನಾದ ರಾವಣನ ಮಗ ಯಾರು?
1. ಮರೀಚ  2. ಮಾತಲಿ
3. ಅಕ್ಷಯಕುಮಾರ  4. ಕುಂಭಕರ್ಣ

ಋ) ಹನುಮಂತನ ಪತ್ನಿಯ ಹೆಸರೇನು?
1. ಯಮಿ  2. ಸುವರ್ಚಲ
3. ಸಿದ್ಧಿ  4. ಬುದ್ಧಿ

ಉತ್ತರಗಳು: ಅ) 1 ಆ) 3 ಇ) 3 ಈ) 1 ಉ) 3 ಊ) 3 ಋ) 2

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

## ನಿಮಗಿದು ಗೊತ್ತಾ ಮಕ್ಕಳೇ ?

1. ರಾಮಾಯಣವನ್ನು ಯಾರು ರಚಿಸಿದರು?
2. ಶ್ರೀರಾಮನು ಯಾವ ನಕ್ಷತ್ರದಲ್ಲಿ ಜನಿಸಿದನು?
3. ಸುಮಿತ್ರೆಯ ಕುಮಾರರು ಯಾರು?
4. ಸೀತೆಯ ತಂದೆ ಯಾರು?
5. ಭರತನ ತಾಯಿ ಯಾರು?
6. ರಾವಣನ ಪತ್ನಿಯ ಹೆಸರೇನು?
7. ಸುಗ್ರೀವನ ಸಹೋದರ ಯಾರು?

1. ವಾಲ್ಮೀಕಿ
2. ಪುನರ್ವಸು
3. ಲಕ್ಷ್ಮಣ, ಶತ್ರುಘ್ನ
4. ಜನಕಮಹಾರಾಜ
5. ಕೈಕೆ
6. ಮಂಡೋದರಿ
7. ವಾಲಿ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ನಂದನ | ಅ) ಶಕುಂತಲ |
| 2. ಲಕ್ಷ್ಮಣ | ಆ) ಪದ್ಮಾವತಿ |
| 3. ಜಯದೇವ | ಇ) ಭಾನುಮತಿ |
| 4. ದುಷ್ಯಂತ | ಈ) ಊರ್ಮಿಳಾ |
| 5. ದುರ್ಯೋಧನ | ಉ) ಯಶೋದ |

ಉತ್ತರಗಳು : 1) ಉ 2) ಈ 3) ಆ 4) ಅ 5) ಇ

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಆ ಳು ಪ್ಪಾ ರೆ ಲು ಪ್ಪೆ
ಕ ದ ಕ ಹಾ ಕ

ಉತ್ತರಗಳು:
ಆಕಳು ಕಪ್ಪಾದರೆ ಹಾಲು ಕಪ್ಪೆ?



Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



11-11-2021 ರಂದು
ತಿರುಮಲೆ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ



04-11-2021 ರಂದು
ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ ದೀಪಾವಳಿ ಆಸ್ಥಾನ



20-10-2021 ರಂದು ನಡೆದ
ಶ್ರೀ ಕಪಿಲೇಶ್ವರ ಸ್ವಾಮಿಯವರಿಗೆ ನಡೆದ ಅನ್ನಾಭಿಷೇಕ



31-10-2021 ರಿಂದ 02-11-2021 ರ ವರೆಗೆ ನಡೆದ
ಶ್ರೀನಿವಾಸ ಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು





13-11-2021 ರಂದು ಭಾರತ ದೇಶದ ಗೃಹ ಸಚಿವರಾದ ಗೌ॥ ಶ್ರೀ ಅಮಿತ್ ಷಾ, ಆಂಧ್ರ ಪ್ರದೇಶದ ಮುಖ್ಯಮಂತ್ರಿ ಗೌ॥ ಶ್ರೀ ವೈ..ಎಸ್. ಜಗನ್‌ಮೋಹನ್‌ರೆಡ್ಡಿ ಯವರು ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನವನ್ನು ಪಡೆದರು. ಈ ಸಂದರ್ಭದಲ್ಲಿ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಯವರು ಸ್ವಾಗತಿಸಿದರು ನಂತರ ಅರ್ಚಕರು ಆಶೀರ್ವಚನ ನೀಡಿದರು.

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
Printing on 25-11-2021 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023"Licenced to Post Without Prepayment No. PMGK/RNP/WPP-04(6)/2021-2023" Posting on 20th of Every Month

